ಜಿಲ್ಲಾ ಪಂಚಾಯತ್, ಮಂಡ್ಯ.

ಜಿಲ್ಲಾ ಪಂಚಾಯತ್, ಮಂಡ್ಯ

2020-2021ನೇ ಸಾಲಿನ

ವಾರ್ಷಿಕ ಆಡಳಿತ ವರದಿ

ಮುನ್ನುಡಿ

ಮಂಡ್ಯ ಜಿಲ್ಲಾ ಪಂಚಾಯತ್ 2020–21ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ತಮಗೆ ನೀಡಲು ಹರ್ಷವೆನಿಸಿದೆ. ಈವರೆವಿಗೂ ವಾರ್ಷಿಕ ಆಡಳಿತ ವರದಿಗಳನ್ನು ಪ್ರಕಟಿಸಿಕೊಂಡು ಬಂದಿದ್ದು. ಇದು 34ನೇ ವರ್ಷದ ಪ್ರಕಟಣೆಯಾಗಿರುತ್ತದೆ. ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ ಕಲ್ಪನೆಯ ಅಂಶಗಳನ್ನು ಹಾಗೂ ಸುಸ್ಥಿರ ಅಭಿವೃದ್ಧಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪ್ರಯತ್ನಿಸಲಾಗಿದೆ.

2020–21ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ಪಂಚಾಯಿತಿಯು ರಾಜ್ಯ ಮತ್ತು ಕೇಂದ್ರ ವಲಯದ ಅನುದಾನದಲ್ಲಿ ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಸಾಧನೆ, ಇಲಾಖಾವಾರು ಕಾರ್ಯಕ್ರಮಗಳ ವಿವರಣೆಯನ್ನು ಈ ಹೊತ್ತಿಗೆಯಲ್ಲಿ ಹೊರತರಲಾಗಿದೆ. ಈ ಯೋಜನೆಗಳ ಅನುಷ್ಠಾನದಲ್ಲಿ ಸೂಕ್ತ ಸಲಹೆ, ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಚುನಾಯಿತ ಪ್ರತಿನಿಧಿಗಳನ್ನು ಅಭಿನಂದಿಸುತ್ತೇವೆ. ಜಿಲ್ಲೆಯ ಕಾರ್ಯಕ್ರಮದ ಅನುಷ್ಠಾನಾಧಿಕಾರಿಗಳು ಮಾಹಿತಿಯನ್ನು ಸಕಾಲದಲ್ಲಿ ನೀಡಿದ್ದಲ್ಲಿ ಈ ಪ್ರಕಟಣೆಯನ್ನು ಸಕಾಲದಲ್ಲಿ ಹೊರತರಲು ಸಾಧ್ಯವಾಗುತ್ತದೆ ಎಂದು ತಿಳಿಸಬಯಸುತ್ತೇವೆ. ಗ್ರಾಮೀಣ ವಸತಿ ಪ್ರದೇಶಗಳಲ್ಲಿ ಹೆಚ್ಚು ಜನರು ವಾಸಿಸುತ್ತಿದ್ದು, ಗ್ರಾಮಗಳ ಅಭಿವೃದ್ಧಿ ಮೂಲಕ ಜನರ ಜೀವನಮಟ್ಟ ಹೆಚ್ಚಿಸಿ ಅವರ ಶ್ರೇಯೋಭಿವೃದ್ಧಿಗಾಗಿ ಜನಪ್ರತಿನಿಧಿಗಳು, ಅಧಿಕಾರಿಗಳು, ಒಟ್ಟಾಗಿ ಶ್ರಮಿಸೋಣ ಎಂದು ಹಾರೈಸುತ್ತೇವೆ.

ವಂದನೆಗಳೊಡನೆ.

ಸಹಿ/–

ಶ್ರೀಮತಿ ಜುಲ್‌ಫಿಖಾರ್ ಉಲ್ಲಾ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಮಂಡ್ಯ.

ಸಹಿ/–

ಶ್ರೀಮತಿ ಎಸ್.ನಾಗರತ್ನ ಸ್ವಾಮಿ
ಅಧ್ಯಕ್ಷರು
ಜಿಲ್ಲಾ ಪಂಚಾಯತ್, ಮಂಡ್ಯ.

ಜಿಲ್ಲಾ ಪಂಚಾಯತ್, ಮಂಡ್ಯ.
2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿ.
ವಿಷಯ ಸೂಚಿ

ಕ್ರ ಸಂ	ವಿವರಗಳು	ಪುಟಸಂಖ್ಯೆ
	ಅನುಬಂಧ	
1	ಜಿಲ್ಲಾ ಪಂಚಾಯತ್	4–8
2	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ	8–11
3	ಸಾರ್ವಜನಿಕ ಶಿಕ್ಷಣ ಇಲಾಖೆ	12–13
4	ವಯಸ್ಕರ ಶಿಕ್ಷಣ ಇಲಾಖೆ	14
5	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	14–16
6	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	16–19
7	ಭಾರತೀಯ ವೈದ್ಯಕೀಯ ಪದ್ಧತಿ (ಆಯುಷ್ ಇಲಾಖೆ)	20–22
8	ಸಮಾಜ ಕಲ್ಯಾಣ ಇಲಾಖೆ	23–25
9	ಹಿಂದುಳಿದ ವರ್ಗಗಳ ಇಲಾಖೆ	26–27
10	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	27–29
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	30–32
12	ಕೃಷಿ ಇಲಾಖೆ	33–35
13	ತೋಟಗಾರಿಕೆ ಇಲಾಖೆ	36–39
14	ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ	40–42
15	ಮೀನುಗಾರಿಕೆ ಇಲಾಖೆ	43–48
16	ಸಾಮಾಜಿಕ ಅರಣ್ಯ ಇಲಾಖೆ	49–51
17	ಸಹಕಾರ ಇಲಾಖೆ	52
18	ವಸತಿ, ಜೈವಾನಿಲ, ಎಂ.ಜಿ.ಎನ್.ಆರ್.ಇ.ಜಿ.ಎ, ಸ್ವಚ್ಛಭಾರತ್ ಮಿಷನ್	53–55
19	ರೇಷ್ಮೆ ಇಲಾಖೆ	56–60
20	ಕೈಮಗ್ಗ ಮತ್ತು ಜವಳಿ ಇಲಾಖೆ	61
21	ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ	62–63
22	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	63
23	ಕೃಷಿ ಮತ್ತು ಮಾರಾಟ ಇಲಾಖೆ	64

ನಮೂನೆಗಳು

ಕ್ರ ಸಂ	ವಿವರಗಳು	ಪುಟಸಂಖ್ಯೆ
1	ನಮೂನೆ – 1 ಸದಸ್ಯರು	65
2	ನಮೂನೆ – 2 ಚುನಾವಣೆಗಳು	
3	ನಮೂನೆ – 3 ಸಭೆಗಳು	66
4	ನಮೂನೆ – 4 ಸ್ಥಾಯಿ ಸಮಿತಿಗಳು	
5	ನಮೂನೆ – 5 ರಸ್ತೆಗಳು	67
6	ನಮೂನೆ – 6 ಸೇತುವೆಗಳು, ಕಾಲುವೆಗಳು, ಮೋರಿಗಳು	68
7	ನಮೂನೆ – 7 ವಿಶ್ರಾಂತಿ ಗೃಹಗಳು ಮತ್ತು ಛತ್ರಗಳು	69
8	ನಮೂನೆ – 8 ಪ್ರಾಥಮಿಕ ಶಾಲಾ ಸಂಖ್ಯಾಬಲ	70
9	ನಮೂನೆ –8 (ಎ) ಪ್ರೌಢ ಶಾಲಾ ಸಂಖ್ಯಾಬಲ	71
10	ನಮೂನೆ – 9 ಆರೋಗ್ಯ ಇಲಾಖೆಯಿಂದ ಆದ ವೆಚ್ಚದ ವಿವರ	72
11	ನಮೂನೆ – 9 (ಎ) ಭಾರತೀಯ ವೈದ್ಯ ಪದ್ಧತಿ ಆಯುಷ್ ಇಲಾಖೆಯಿಂದ ಆದ ವೆಚ್ಚದ ವಿವರ.	73
12	ನಮೂನೆ – 10 ಶಿಸ್ತಿನ ಕ್ರಮದ ಪ್ರಕರಣಗಳು	74
13	ನಮೂನೆ – 11 ಬಾಕಿ ಇರುವ ಮೇಲ್ಮನವಿಗಳು	74
14	ನಮೂನೆ – 12 ಬಂಡವಾಳ ಹೂಡಿಕೆ	75
15	ನಮೂನೆ – 13 ಬಂಡವಾಳ ಹೂಡಿಕೆ	75
16	ನಮೂನೆ – 14 ಜಿಲ್ಲಾ ಪಂಚಾಯತ್ ಜಮಾ ಮತ್ತು ಖರ್ಚಿನ ಘೋಷ್ವಾರೆ	76
17	ನಮೂನೆ – 15 ಗ್ರಾಮ ಪಂಚಾಯಿತಿಗಳ 2018-19ನೇ ಸಾಲಿನ ಜಮಾ ಮತ್ತು ಖರ್ಚಿನ ವಿವರ.	77
18	ನಮೂನೆ – 16 ಗ್ರಾಮ ಪಂಚಾಯಿತಿಗಳ ಜಮಾ ವಿವರ.	78
19	ನಮೂನೆ – 16 (ಎ) ಗ್ರಾಮ ಪಂಚಾಯಿತಿಗಳ ವೆಚ್ಚದ ವಿವರ.	79

ಜಿಲ್ಲಾ ಪಂಚಾಯತ್, ಮಂಡ್ಯ.
ವಾರ್ಷಿಕ ಆಡಳಿತ ವರದಿ 2020-21
ಅನುಬಂಧ

1) ಜಿಲ್ಲಾ ಪಂಚಾಯತ್ ವ್ಯಾಪ್ತಿ

1) ವಿಸ್ತೀರ್ಣ	:	4961 ಚ.ಕಿ.ಮೀ.
2) ಒಟ್ಟು ಜನಸಂಖ್ಯೆ(ಜನಗಣತಿ – 2011)	:	1805769
3) ಜನಸಂಖ್ಯೆ (ಗ್ರಾಮೀಣ)	:	1497407
4) ಒಟ್ಟು ಸದಸ್ಯರ ಸಂಖ್ಯೆ	:	58
5) ಜಿಲ್ಲಾ ಪಂಚಾಯತ್ ಸದಸ್ಯರ ಸಂಖ್ಯೆ	:	41-1(ಮರಣ ಹೊಂದಿದ್ದಾರೆ)
6) ಲೋಕಸಭಾ ಸದಸ್ಯರ ಸಂಖ್ಯೆ	:	1
7) ವಿಧಾನಸಭಾ ಸದಸ್ಯರ ಸಂಖ್ಯೆ	:	7
8) ವಿಧಾನ ಪರಿಷತ್ ಸದಸ್ಯರ ಸಂಖ್ಯೆ	:	2
9) ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳ ಸಂಖ್ಯೆ	:	7

2) ಅ. ಅಧ್ಯಕ್ಷರ ಹೆಸರು	:	ಶ್ರೀಮತಿ ಎಸ್. ನಾಗರತ್ನಸ್ವಾಮಿ, ದಿ:01-04-2020 ರಿಂದ 31-03-2021
ಆ. ಉಪಾಧ್ಯಕ್ಷರ ಹೆಸರು	:	ಶ್ರೀಮತಿ ಪಿ.ಕೆ. ಗಾಯಿತ್ರಿ ರೇವಣ್ಣ, ದಿ:01-04-2020 ರಿಂದ 31-03-2021
3) ಅ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಪಾವತಿಯಾದ ವೇತನದ ಮೊತ್ತ	:	ರೂ. 6,00000/-
ಆ. ಅಧ್ಯಕ್ಷರಿಗೆ ಪಾವತಿಯಾದ ಪ್ರಯಾಣ ಭತ್ಯೆ ಮತ್ತು ಉಪವೇಶನ ಮೊತ್ತ.	:	ರೂ. 3,70,000/-
ಇ. ಸದಸ್ಯರುಗಳಿಗೆ ಪಾವತಿಯಾದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯ ಮೊತ್ತ.	:	ರೂ. 13,892/-
ಈ. ಮಾಸಿಕ ಗೌರವ ಧನ	:	ರೂ. 29,10,000/-

4) ಅ. ಪ್ರತಿಯೊಂದು ವಿಭಾಗಕ್ಕೆ ತಗುಲಿದ ಸಿಬ್ಬಂದಿ ವೆಚ್ಚ, ಲೆಕ್ಕ ಶೀರ್ಷಿಕೆ

1. 2515 (ಯೋಜನೇತರ)	:	319.73ಲಕ್ಷ
2. 3451 (ಯೋಜನೇತರ)	:	75.23 ಲಕ್ಷ
ಜುಮ್ಲಾ	:	394.96 ಲಕ್ಷ
ಆ. ಸಮ್ಮೇಳನಗಳನ್ನು ನಡೆಸಿದ್ದು ಮತ್ತು ವಂತಿಕೆ	:	0.23 ಲಕ್ಷ
ಇ. ರಾಜ್ಯ ಮಟ್ಟದ ಸಂಸ್ಥೆಗಳು	:	0.75 ಲಕ್ಷ
ಈ. ಇತರೆ ಸಂಘ ಸಂಸ್ಥೆಗಳು	:	0.00 ಲಕ್ಷ
ಒಟ್ಟು (ಆ ರಿಂದ ಈ)	:	0.98 ಲಕ್ಷ

5) ಅಧಿಕಾರಿಗಳ ಹೆಸರು & ದಿನಾಂಕ:

ಅ. ಸಿ.ಇ.ಓ.	:	ಶ್ರೀ ಕೆ.ಯಾಲಕ್ಕಿಗೌಡ., ಕೆ.ಜಿ.ಎಸ್
ದಿನಾಂಕ:		01-04-2020 ರಿಂದ 24-07-2020
		ಶ್ರೀ ಜುಲ್‌ಫಿಖಾರ್ ಉಲ್ಲಾ.ಎಸ್.ಎಂ
		24-07-2020 ರಿಂದ 31-03-2021
ಆ. ಉಕಾ-1(ಆಡಳಿತ)	:	ಶ್ರೀ ಎನ್.ಡಿ.ಪ್ರಕಾಶ್
ದಿನಾಂಕ:		01-04-2020 ರಿಂದ 31-03-2021
ಇ. ಉಕಾ-2(ಅಭಿವೃದ್ಧಿ)	:	ಶ್ರೀ ಜಿ.ಧನರಾಜು
ದಿನಾಂಕ:		01-04-2020 ರಿಂದ 31-03-2021
ಈ. ಮು.ಯೋ.ಅ.	:	ಶ್ರೀ ಎಸ್. ಧನುಷ್
ದಿನಾಂಕ:		01-04-2020 ರಿಂದ 23-10-2020
		ಶ್ರೀಮತಿ ಸಿ.ಜಯಲಕ್ಷ್ಮಿ (ಪ್ರಭಾರ)
		23-10-2020 ರಿಂದ 09-03-2021
		ಶ್ರೀಮತಿ ಕವಿತಾ.ಡಿ.ಬಿ (ಪ್ರಭಾರ)
		09-03-2021 ರಿಂದ 31-03-2021
ಉ. ಮು.ಲೆ.ಅ.	:	ಶ್ರೀಮತಿ ಕವಿತಾ.ಡಿ.ಬಿ
ದಿನಾಂಕ:		01-04-2020 ರಿಂದ 31-03-2021
ಊ. ಯೋ.ನಿ(ಡಿ.ಆರ್.ಡಿ.ಎ)	:	ಶ್ರೀ ಜಿ.ಧನರಾಜು (ಪ್ರಭಾರ)
ದಿನಾಂಕ:		01-04-2020 ರಿಂದ 28-09-2020
		ಶ್ರೀ ಷಣ್ಮುಗಂ.ಹೆಚ್.ಎ(ಪ್ರಭಾರ)
		28-09-2020 ರಿಂದ 20-03-2021
		ಶ್ರೀ ಅಥಿಕ್ ಪಾಷ
		20-03-2021 ರಿಂದ 31-03-2021
ಋ. ಶಿಕ್ಷಣಾಧಿಕಾರಿ(ಅಕ್ಷರ ದಾಸೋಹ):		ಶ್ರೀ ಹೆಚ್.ಜಿ.ಗಂಗಣ್ಣ ಸ್ವಾಮಿ.
ದಿನಾಂಕ:		01-04-2020 ರಿಂದ 05-09-2020
		ಶ್ರೀ ಶಿವಕುಮಾರ್(ಪ್ರಭಾರ)
		05-09-2020 ರಿಂದ 20-11-2020
		ಶ್ರೀ ಅಥಿಕ್ ಪಾಷ
		20-11-2020 ರಿಂದ 31-03-2021

6) ಚುನಾವಣೆಗಳು:-

ಅ. ಜಿಲ್ಲಾ ಪಂಚಾಯತ್ ಸಾರ್ವತ್ರಿಕ ಚುನಾವಣೆಗಳು ನಡೆದ ದಿನಾಂಕ	:	-
ಆ. ಉಪ ಚುನಾವಣೆಗಳು ನಡೆದಿದ್ದರೆ ದಿನಾಂಕ ಕಾರಣ ಫಲಿತಾಂಶ	:	-
ಇ. ಜಿಲ್ಲಾ ಪಂಚಾಯತ್ ಅವಧಿ ವಿಸ್ತರಿಸಲಾಗಿದೆಯೇ	:	-
ಈ. ಚುನಾವಣೆ ವೆಚ್ಚ	:	-
ಉ. ಚುನಾವಣೆ ತಕರಾರುಗಳು	:	-

ಜಿಲ್ಲಾ ಪಂಚಾಯಿತಿಯ ಸಭೆಗಳು ಮತ್ತು ಹಾಜರಾತಿ

ಅ. ಸಾಮಾನ್ಯ ಸಭೆಗಳ ಸಂಖ್ಯೆ	:	1

ಆ. ವಿಶೇಷ ಸಭೆಗಳ ಸಂಖ್ಯೆ : –
ಇ. ಸಭೆಗಳು ನಡೆಯುವುದರಲ್ಲಿ ಕ್ರಮಬದ್ಧತೆ : ಪಾಲಿಸಲಾಗಿದೆ.
ಈ. ಸಭೆಗಳಲ್ಲಿ ಸದಸ್ಯರ ಸರಾಸರಿ ಹಾಜರಾತಿ : ಶೇ. 74
ಉ. ಕೋರಂ ಇಲ್ಲದೇ ಮುಂದೂಡಲಾದ ಸಭೆಗಳ ಸಂಖ್ಯೆ: 03
ಊ. ತೀರ್ಮಾನಗಳ ಸಂಖ್ಯೆ : –
1. ಮಂಡಿಸಲಾದವುಗಳು : 09
2. ಅಂಗೀಕೃತವಾದವುಗಳು : 09
3. ಚರ್ಚಿಸಲ್ಪಟ್ಟವುಗಳು : 19
4. ಹಿಂತೆಗೆದುಕೊಂಡವುಗಳು : ಇಲ್ಲ

7) ಸ್ಥಾಯಿ ಸಮಿತಿಗಳು ಮತ್ತು ಇತರೆ ಸಮಿತಿಗಳು
1. ರಚಿಸಲಾದ ಸ್ಥಾಯಿ ಸಮಿತಿಗಳು ಮತ್ತು ಇತರೆ ಸಮಿತಿಗಳ ಸಂಖ್ಯೆ : 5
2. ಸ್ಥಾಯಿ ಸಮಿತಿಗಳಿಗೆ ಚುನಾವಣೆಯಾದ ದಿನಾಂಕ : 12–08–2020.
3. ಸ್ಥಾಯಿ ಸಮಿತಿಯ ಸದಸ್ಯರ ಸಂಖ್ಯೆ : 7 * 5= 35
4. ಪ್ರತಿ ಸ್ಥಾಯಿ ಸಮಿತಿಯ ಕೆಲಸ : ಸಮಿತಿ ವ್ಯಾಪ್ತಿಗೆ ಸಂಬಂಧಿಸಿದ ಇಲಾಖೆಗಳಲ್ಲಿನ ಯೋಜನೆಗಳ ಅನುಮೋದನೆ ಮತ್ತು ಪ್ರಗತಿ ಪರಿಶೀಲನೆ.

8) ಅ. ಅಧಿಕಾರಿಗಳು ಮತ್ತು ನೌಕರರ ತರಬೇತಿ : ನೀಡಲಾಗಿದೆ.
ಆ. ಅಧಿಕಾರೇತರರಿಗೆ ತರಬೇತಿ : ನೀಡಲಾಗಿದೆ.
ಇ. ಸಮ್ಮೇಳನಗಳನ್ನು ನಡೆಸಿದ್ದು ಮತ್ತು ವಂತಿಗೆ : ರೂ.0.23ಲಕ್ಷ
ಈ. ನೀಡಿರುವ ದಂಡ ತೀರ್ಪುಗಳು : –
ಉ. ಅಧಿಕಾರಿಗಳು, ನೌಕರರು ಮಾಡಿದ ಮೇಲ್ಮನವಿಗಳು : –

9) ಅ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿ : ಯೋಜನೆ
ನಿಗಧಿಪಡಿಸಿರುವ ಹಣ (ವಿಶೇಷ ಘಟಕ 989.53
ಗಿರಿಜನ ಉಪ ಯೋಜನೆ ಸೇರಿ ಲಕ್ಷ ರೂ.ಗಳಲ್ಲಿ) 84.40
ಆ. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ : 4697.33
ನಿಗಧಿಪಡಿಸಿರುವ ಹಣ (ಲಕ್ಷ ರೂ.ಗಳಲ್ಲಿ)
ಒಟ್ಟು : 5771.26

10)

ಬಜೆಟ್‌ನ ಒಟ್ಟು ಗಾತ್ರ (ಲಕ್ಷ ರೂ.ಗಳಲ್ಲಿ)	
ರಾಜ್ಯ	26775.65
ಕೇಂದ್ರ	5163.61
ಒಟ್ಟು	31939.26

ಅ. ಅಧಿಕಾರಿ, ಸಿಬ್ಬಂದಿ ವರ್ಗ (ಲೆಕ್ಕಶೀರ್ಷಿಕೆ – 2515–00–101–0–28)

ಕ್ರ. ಸಂ.	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	1	1	0
2	ಉಪ ಕಾರ್ಯದರ್ಶಿ(ಆಡಳಿತ)	1	1	0

3	ಮುಖ್ಯ ಲೆಕ್ಕಾಧಿಕಾರಿ	1	1	0
4	ಸಹಾಯಕ ಕಾರ್ಯದರ್ಶಿ(ಆಡಳಿತ)	1	1	0
5	ಲೆಕ್ಕಾಧಿಕಾರಿ	1	1	0
6	ಲೆಕ್ಕ ಅಧೀಕ್ಷಕರು	3	3	0
7	ಕಛೇರಿ ಅಧೀಕ್ಷಕರು	5	2	3
8	ಪ್ರಥಮ ದರ್ಜೆ ಸಹಾಯಕರು	11	11	0
9	ಶೀಘ್ರಲಿಪಿಗಾರರು	5	1	4
10	ದ್ವಿತಿಯ ದರ್ಜೆ ಸಹಾಯಕರು	5	4	1
11	ಗುಮಾಸ್ತ/ಬೆರಳಚ್ಚುಗಾರ	2	0	2
12	ವಾಹನ ಚಾಲಕರು	3	3	0
13	ಅಟೆಂಡರ್/ಕಾವಲುಗಾರರು	7	7	0
14	ಬೈಂಡರ್	1	0	1
15	ದಾಖಲೆ ಸಂರಕ್ಷಕರು	1	0	1
	ಒಟ್ಟು	**48**	**36**	**12**

ಆ. ಲೆಕ್ಕಶೀರ್ಷಿಕೆ – 3451-00-101-0-26

ಕ್ರ.ಸಂ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1	ಮುಖ್ಯ ಯೋಜನಾಧಿಕಾರಿ	1	1	0
2	ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ	1	1	0
3	ಸಹಾಯಕ ಸಾಂಖ್ಯಿಕ ಅಧಿಕಾರಿ(ಆರ್ಥಿಕ)	1	1	0
4	ಸಹಾಯಕ ಸಾಂಖ್ಯಿಕ ಅಧಿಕಾರಿ(ಸಾಂಖ್ಯಿಕ)	1	1	0
5	ತಾಲ್ಲೂಕು ಯೋಜನಾಧಿಕಾರಿ	4	3	1
6	ಶೀಘ್ರಲಿಪಿಗಾರರು	1	1	0
7	ಪ್ರಥಮ ದರ್ಜೆ ಸಹಾಯಕರು	1	0	1
8	ದ್ವಿತಿಯ ದರ್ಜೆ ಸಹಾಯಕರು	2	2	0
9	ಗುಮಾಸ್ತ/ಬೆರಳಚ್ಚುಗಾರ	1	0	1
10	ಅಟೆಂಡರ್/ಕಾವಲುಗಾರರು	2	2	0
	ಒಟ್ಟು	15	12	3

ಇ. ಲೆಕ್ಕಶೀರ್ಷಿಕೆ – 2515-00-101-0-01

ಕ್ರ.ಸಂ.	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1	ಉಪ ಕಾರ್ಯದರ್ಶಿ	1	1	0
2	ಯೋಜನಾ ನಿರ್ದೇಶಕರು	1	0	1
3	ಸಹಾಯಕ ಯೋಜನಾಧಿಕಾರಿ	2	1	1
4	ಸಹಾಯಕ ಕಾರ್ಯದರ್ಶಿ	1	1	0
5	ಲೆಕ್ಕಾಧಿಕಾರಿ	1	1	0
6	ಅಧೀಕ್ಷಕರು / ವ್ಯವಸ್ಥಾಪಕರು	1	0	1
7	ಲೆಕ್ಕ ಅಧೀಕ್ಷಕರು	1	1	0
8	ಲೆಕ್ಕ ಗುಮಾಸ್ತರು	9	2	7
9	ಶೀಘ್ರಲಿಪಿಗಾರರು	2	0	2
10	ಸಹಾಯಕರು	7	0	7
11	ಗುಮಾಸ್ತ/ಬೆರಳಚ್ಚುಗಾರ	3	1	2
12	ವಾಹನ ಚಾಲಕರು	3	0	3

13	ಅಟೆಂಡರ್/ಕಾವಲುಗಾರರು	4	2	2
14	ಯೋಜನಾ ಅಭಿಯಂತರರು	1	1	0
ಒಟ್ಟು		37	11	26
ಲೆಕ್ಕಶೀರ್ಷಿಕೆ – 2515-00-101-0-28		48	36	12
ಲೆಕ್ಕಶೀರ್ಷಿಕೆ – 3451-00-101-0-26		15	12	03
ಲೆಕ್ಕಶೀರ್ಷಿಕೆ – 2515-00-101-0-01		37	11	26

****

ವಾರ್ಷಿಕ ಆಡಳಿತ ವರದಿ 2020-21

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯು ವಿಭಾಗ ಮಟ್ಟದ ಕಛೇರಿಯಾಗಿದ್ದು, ಕಾರ್ಯಪಾಲಕ ಅಭಿಯಂತರರು, ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಈ ವಿಭಾಗದ ವ್ಯಾಪ್ತಿಯಲ್ಲಿ 7 ತಾಲ್ಲೂಕು ಉಪವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕು ಮಟ್ಟದ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿಯ ಮುಖ್ಯಸ್ಥರಾಗಿದ್ದು, ತಾಲ್ಲೂಕು ಮಟ್ಟದಲ್ಲಿ ರಸ್ತೆ ಅಭಿವೃದ್ಧಿ, ಕಟ್ಟಡ ಇತರೆ ಕಾಮಗಾರಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ.

ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ:-

2020-21ನೇ ಸಾಲಿನ ವಾರ್ಷಿಕ ಅನುದಾನ ರೂ.442.47ಲಕ್ಷಗಳು ನಿಗದಿಯಾಗಿದ್ದು, ಒಟ್ಟು 134 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರದಿಂದ ರೂ.176.99ಲಕ್ಷಗಳು ಬಿಡುಗಡೆಯಾಗಿದ್ದು, ರೂ.176.99 ಲಕ್ಷಗಳು ಖರ್ಚಾಗಿರುತ್ತದೆ.

3054 ನಿರ್ವಹಣಾ ಅನುದಾನ ಯೋಜನೆ:-

2020-21ನೇ ಸಾಲಿಗೆ ಯಾವುದೇ ಅನುದಾನ ನಿಗದಿಯಾಗಿರುವುದಿಲ್ಲ. 2020-21ನೇ ಸಾಲಿನಲ್ಲಿ ಬಾಕಿ ಬಿಡುಗಡೆಯಾಗಬೇಕಾಗಿದ್ದ ಅನುದಾನದಡಿ 2020-21ನೇ ಸಾಲಿನಲ್ಲಿ ಒಟ್ಟು ರೂ.383.00ಲಕ್ಷ ಬಿಡುಗಡೆಯಾಗಿದ್ದು, ರೂ.307.25ಲಕ್ಷ ವೆಚ್ಚ ಭರಿಸಲಾಗಿದೆ.

2702-00-101-0-26-200 ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ/ದುರಸ್ತಿ:

2020-21ನೇ ಸಾಲಿನ ವಾರ್ಷಿಕ ಅನುದಾನ ರೂ.133.70ಲಕ್ಷಗಳು ನಿಗದಿಯಾಗಿದ್ದು, ಒಟ್ಟು 63 ಕಾಮಗಾರಿ ಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರದಿಂದ ರೂ.133.70ಲಕ್ಷಗಳು ಬಿಡುಗಡೆಯಾಗಿದ್ದು, ರೂ.121.03ಲಕ್ಷಗಳು ಖರ್ಚಾಗಿರುತ್ತದೆ.

2702-00-101-0-27-200 ಸಣ್ಣ ನೀರಾವರಿ ಕೆರೆಗಳ ಸಮೀಕ್ಷೆ:

2020-21ನೇ ಸಾಲಿನ ವಾರ್ಷಿಕ ಅನುದಾನ ರೂ.6.12ಲಕ್ಷಗಳು ನಿಗದಿಯಾಗಿದ್ದು, ಒಟ್ಟು 23 ಕಾಮಗಾರಿ ಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರದಿಂದ ರೂ.6.12ಲಕ್ಷಗಳು ಬಿಡುಗಡೆಯಾಗಿದ್ದು, ರೂ.5.92ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

2702–00–101–0–28–200 ಹೊಸ ಸರಬರಾಜು:–

2020–21ನೇ ಸಾಲಿನ ವಾರ್ಷಿಕ ಅನುದಾನ ರೂ.10.30ಲಕ್ಷಗಳು ನಿಗದಿಯಾಗಿದ್ದು, ಈ ಅನುದಾನದಲ್ಲಿ ಯಾವುದೇ ವೆಚ್ಚ ಭರಿಸಲಾಗಿರುವುದಿಲ್ಲ.

2702–00–101–0–29–200 ಸಮೀಕ್ಷೆ:–

2020–21ನೇ ಸಾಲಿನ ವಾರ್ಷಿಕ ಅನುದಾನ ರೂ.5.24ಲಕ್ಷಗಳು ನಿಗದಿಯಾಗಿದ್ದು, ಒಟ್ಟು 18 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರದಿಂದ ರೂ.5.24ಲಕ್ಷಗಳು ಬಿಡುಗಡೆಯಾಗಿದ್ದು, ರೂ.5.13ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

ನಬಾರ್ಡ್–ಆರ್.ಐ.ಡಿ.ಎಫ್ ಯೋಜನೆಯಡಿ:–

2020–21ನೇ ಸಾಲಿನ ವಾರ್ಷಿಕ ಅನುದಾನ ರೂ.1220.06ಲಕ್ಷಗಳು ನಿಗದಿಯಾಗಿದ್ದು, ಒಟ್ಟು 12 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರದಿಂದ ರೂ.1143.11ಲಕ್ಷಗಳು ಬಿಡುಗಡೆಯಾಗಿದ್ದು, ರೂ.1103.11 ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

2059–00–101–0–26:2020–21ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:2059ರ ಅಡಿಯಲ್ಲಿ ಸಿಬ್ಬಂದಿ ವೇತನ ಹಾಗೂ ವೇತನೇತರದ ಅಡಿಯಲ್ಲಿ ರೂ.455.04ಲಕ್ಷಗಳ ಅನುದಾನ ಒದಗಿಸಲಾಗಿದೆ. ರೂ.460.45ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ರೂ.399.62ಲಕ್ಷಗಳ ವೆಚ್ಚವನ್ನು ಮಾಡಲಾಗಿರುತ್ತದೆ.

2059–00–101–0–28:2059ರ ಅಡಿಯಲ್ಲಿ ಕಟ್ಟಡಗಳ ನಿರ್ವಹಣೆ/ದುರಸ್ತಿ ಅಡಿಯಲ್ಲಿ ರೂ.71.05ಲಕ್ಷಗಳ ಅನುದಾನ ಒದಗಿಸಲಾಗಿದೆ. ರೂ.71.05ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.66.89ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ.

2059–00–101–0–29: 2020–21ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:2059ರ ಹೊಸ ಸರಬರಾಜು ಯೋಜನೆ ಅಡಿಯಲ್ಲಿ ರೂ.9.80ಲಕ್ಷಗಳ ಅನುದಾನ ಒದಗಿಸಲಾಗಿದೆ. ರೂ.9.80ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.9.54ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ.

ಜಿಲ್ಲಾ ಪಂಚಾಯಿತಿ ಅನಿರ್ಬಂದಿತ ಅನುದಾನ

2020–21ನೇ ಸಾಲಿಗೆ ಲೆಕ್ಕಶೀರ್ಷಿಕೆ: ಜಿಲ್ಲಾ ಪಂಚಾಯತ್ ಅನಿರ್ಬಂದಿತ ಅನುದಾನದಡಿಯಲ್ಲಿ ರೂ.566.75ಲಕ್ಷಗಳು ನಿಗದಿಯಾಗಿದ್ದು, ರೂ.566.75ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.538.23 ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ.

ಅಭಿವೃದ್ಧಿ ಅನುದಾನ 2515–00–101–0–31

2020–21ನೇ ಸಾಲಿಗೆ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದಡಿಯಲ್ಲಿ ರೂ.51.39ಲಕ್ಷಗಳು ನಿಗದಿಯಾಗಿದ್ದು, ರೂ.30.56ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.19.26ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ.

ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರವಾರು ರಸ್ತೆಗಳ ಅಂಕಿ ಅಂಶಗಳ ಸಂಕ್ಷಿಪ್ತ ವರದಿ (ಡಿ.ಆರ್.ಆರ್.ಪಿ. ರಂತೆ) 2020–21

ಕ್ರ.ಸಂ	ವಿಧಾನಸಭಾ ಕ್ಷೇತ್ರ	ರಸ್ತೆಗಳ ಉದ್ದ ಕಿ.ಮೀ.ಗಳಲ್ಲಿ			ಒಟ್ಟು ರಸ್ತೆಗಳು ಉದ್ದ ಕಿ.ಮೀ.ಗಳಲ್ಲಿ
		ಡಾಂಬರು ರಸ್ತೆ	ಜಲ್ಲಿ ರಸ್ತೆ	ಮಣ್ಣು ರಸ್ತೆ	
1	ಕೆ.ಆರ್.ಪೇಟೆ	357.79	287.60	753.65	1399.04
2	ಮದ್ದೂರು	304.52	292.91	588.74	1186.17
3	ಮಳವಳ್ಳಿ	362.39	214.27	569.16	1141.96
4	ಮಂಡ್ಯ	396.40	422.81	691.67	1510.88
5	ನಾಗಮಂಗಲ	457.91	219.02	710.37	1387.30
6	ಮೇಲುಕೋಟೆ	285.38	327.72	481.74	1094.84
7	ಶ್ರೀರಂಗಪಟ್ಟಣ	198.65	345.78	308.66	853.09
ಒಟ್ಟು		**2363.04**	**2110.11**	**4103.99**	**8573.28**

ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ವಿವರಗಳು 2020–21

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಕೆರೆಗಳ ಸಂಖ್ಯೆ	ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ
1	ಕೆ.ಆರ್.ಪೇಟೆ	169	1342.92
2	ಮದ್ದೂರು	83	1060.08
3	ಮಳವಳ್ಳಿ	27	501.56
4	ಮಂಡ್ಯ	75	865.60
5	ನಾಗಮಂಗಲ	104	800.19
6	ಮೇಲುಕೋಟೆ	82	312.36
7	ಶ್ರೀರಂಗಪಟ್ಟಣ	40	190.19
ಒಟ್ಟು		**580**	**5072.90**

2020–21ನೇ ಸಾಲಿಗೆ 31–3–2021ರ ಅಂತ್ಯಕ್ಕೆ ಮಂಜೂರಾದ ಕೆಲಸ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ವಿವರಗಳು

ಕ್ರ.ಸ	ಹುದ್ದೆಗಳ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ	ಖಾಲಿ ಇರುವ ಹುದ್ದೆಗಳು	ಎಸ್.ಸಿ	ಎಸ್.ಟಿ	ಹೆಂಗಸರು	ಗಂಡಸರು	ಷರಾ
1	ಕಾರ್ಯಪಾಲಕ ಅಭಿಯಂತರರು	1	1	–	–	–	–	1	
2	ಸಹಾಯಕ ಕಾರ್ಯಪಾಲಕ ಅಭಿಯಂತರರು	7	6	1	–	–	1	5	
3	ಸಹಾಯಕ ಅಭಿಯಂತರರು	9	6	3	2	–	3	3	
4	ಕಿರಿಯ ಅಭಿಯಂತರರು	22	16	6	5	–	1	15	
5	ಅಧೀಕ್ಷಕರು	1	–	1	–	–	–	1	
6	ಲೆಕ್ಕ ಅಧೀಕ್ಷಕರು	1	1	–	–	–	–	–	
7	ಪ್ರಥಮ ದರ್ಜೆ ಲೆಕ್ಕ ಸಹಾಯಕರು	1	–	1	–	–	–	–	
8	ಪ್ರಥಮ ದರ್ಜೆ ಸಹಾಯಕರು	8	3	5	–	–	–	3	
9	ದ್ವಿತೀಯ ದರ್ಜೆ ಸಹಾಯಕರು	9	7	2	4	–	1	6	
10	ದ್ವಿತೀಯ ದರ್ಜೆ ಲೆಕ್ಕ ಸಹಾಯಕರು	2	1	1	–	–	–	1	
11	ಶೀಘ್ರಲಿಪಿಗಾರರು	1	1	–	–	–	1	–	
12	ಬೆರಳಚ್ಚುಗಾರರು	9	1	8	1	–	–	1	
13	ಚಾಲಕರು	8	4	4	–	–	–	4	
14	ಸೇವಕರು	17	14	3	1	1	2	10	
ಒಟ್ಟು		**96**	**60**	**36**	**12**	**1**	**9**	**50**	

2020–21ನೇ ಸಾಲಿನ ನಬಾರ್ಡ್ ಆರ್.ಐ.ಡಿ.ಎಫ್ ಯೋಜನೆಯಡಿ ರಸ್ತೆ ಕಾಮಗಾರಿಗಳು ಸಾಧಿಸಿದ ಪ್ರಗತಿ.

ರೂ.ಲಕ್ಷಗಳಲ್ಲಿ

ಕ್ರ. ಸಂ	ಯೋಜನೆಯ ವಿವರ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಲಭ್ಯವಿರುವ ಅನುದಾನ	ಸಂಚಿತ ವೆಚ್ಚ	ಲಭ್ಯವಿರುವ ಅನುದಾನಕ್ಕೆ ಶೇಕಡಾ	ಭೌತಿಕ ಸಾಧನೆ	ಭೌತಿಕ ಸಾಧನೆ ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ	ಷರಾ
1	2	3	4	5	6	7	8	9	10
1)	ನಬಾರ್ಡ್	12	1220.06	1143.11	1103.11	96.50	12	12	–

ವಾರ್ಷಿಕ ಆಡಳಿತ ವರದಿ 2020–21

ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.

ಜಿಲ್ಲೆಯಲ್ಲಿನ ಒಟ್ಟು ಶಾಲೆಗಳ ಸಂಖ್ಯೆ

ಒಟ್ಟು ಶಾಲೆಗಳು – 1810

ಅನುದಾನಿತ ಶಾಲೆ –157

ಅನುದಾನ ರಹಿತ – 472

2020–21ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಪ್ರಗತಿ ವಿವರ

1. ರಾಷ್ಟ್ರೀಯ ಕಾರ್ಯಕ್ರಮದಡಿ ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕ ಆಹಾರ ಬೆಂಬಲ (ಎಂಡಿಎಂ): ಈ ಸಾಲಿಗೆ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಬಿಸಿಯೂಟ ನೀಡಲು, ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 6 ದಿನಗಳು ಮಕ್ಕಳಿಗೆ ಹಾಲು ನೀಡಲು, ಅಧಿಕಾರಿ/ಸಿಬ್ಬಂದಿಯ ವೇತನಕ್ಕೆ ಉಪಯೋಗಿಸಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಗೆ ರೂ.4561.95ಲಕ್ಷಗಳನ್ನು ಒದಗಿಸಲಾಗಿದ್ದು, 4561.95ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಈ ಯೋಜನೆಯಿಂದ 117510 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ಅಲ್ಲದೆ 6 ಮತ್ತು 7ನೇ ತರಗತಿ ಎಲ್ಲಾ ಹೆಣ್ಣು ಮಕ್ಕಳು ಹಾಗೂ ಎಸ್.ಸಿ, ಎಸ್.ಟಿ. ವರ್ಗಗಳ ಗಂಡು ಮಕ್ಕಳ ಶುಲ್ಕ ಮರು ಪಾವತಿಗಾಗಿ ಉಪಯೋಗಿಸಲಾಗಿದೆ. ಈ ಕಾರ್ಯಕ್ರಮದಡಿ 13001 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ಶಾಲಾ ಮಾತೆಯರ ನೇಮಕಾತಿ: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಯಾಗಳ ಮಾಸಿಕ ಸಂಚಿತ ವೇತನ ಮತ್ತು ಶಾಲಾ ಮಾತೆಯರ ವೇತನ ಭತ್ಯೆಗಳಿಗೆ 882.00ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಇದರಲ್ಲಿ 625.00ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

3. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮ : ಜಿಲ್ಲಾ ಮಟ್ಟದ ಆರ್.ಎಂ.ಎಸ್.ಎ. ಕಛೇರಿಯ ಅಧಿಕಾರಿಗಳ ವೇತನಕ್ಕಾಗಿ ರೂ.12.74.00ಲಕ್ಷ ಅನುದಾನ ನಿಗಧಿಯಾಗಿದ್ದು, 10.96ಲಕ್ಷ ರೂ.ಗಳ ವೆಚ್ಚವಾಗಿರುತ್ತದೆ.

4. ನಿರ್ವಹಣೆ ಮತ್ತು ಸಹಾಯಾನುದಾನ ಕಾರ್ಯಕ್ರಮ ಮತ್ತು ಏಳು ವರ್ಷಗಳಿಂದ ಅಸ್ತಿತ್ವದಲ್ಲಿರುವ ಖಾಸಗಿ ಪ್ರೌಢ ಶಾಲೆಗಳಿಗೆ ಸಹಾಯಾನುದಾನ ಕಾರ್ಯಕ್ರಮ: ಅನುದಾನಿತ ಖಾಸಗಿ ಪ್ರೌಢಶಾಲೆಗಳು ಮತ್ತು ಹೊಸದಾಗಿ ಅನುದಾನಕ್ಕೆ ಒಳಪಟ್ಟಿರುವ ಖಾಸಗಿ ಪ್ರೌಢಶಾಲೆಗಳ ಸಿಬ್ಬಂದಿ ವೇತನಕ್ಕಾಗಿ ರೂ.5361.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, 5251.00ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದೆ.

5. **ಪರಿವೀಕ್ಷಣೆ ಕಾರ್ಯಕ್ರಮ:** ಜಿಲ್ಲಾ ಉಪನಿರ್ದೇಶಕರ ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳಿಗೆ ರೂ.302.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಒಟ್ಟು 265.00ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದೆ.

6. ಧನ ಸಹಾಯ ಮತ್ತು ಫೀಜಿನ ಮರುಪಾವತಿ: ಧನಸಹಾಯ ಮತ್ತು ಫೀಜಿನ ಮರುಪಾವತಿಗಾಗಿ ರೂ.70.12 ಲಕ್ಷಗಳು ಲಭ್ಯವಿದ್ದು 8 ರಿಂದ 10ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ ಹಾಗೂ ಪ.ಜಾತಿ, ಪ.ಪಂ. ವರ್ಗದ ಗಂಡು ಮಕ್ಕಳಿಗೆ ಶುಲ್ಕ ಮರುಪಾವತಿ ಜೂನ್–2020ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದ ಹೆಣ್ಣು ಮಕ್ಕಳ ಶುಲ್ಕ ವಿನಾಯಿತಿಗೆ ರೂ.62.45ಲಕ್ಷಗಳನ್ನು ಉಪಯೋಗಿಸಲಾಗಿದೆ.

7. ಸಾಮಗ್ರಿ ಸರಬರಾಜು: ಶಾಲೆಗಳ ಸಾಮಾಗ್ರಿ ಸರಬರಾಜಿಗಾಗಿ ಜಿಲ್ಲೆಗೆ 25.00ಲಕ್ಷ ರೂ.ಗಳು ಲಭ್ಯವಿದ್ದು, ಜಿಲ್ಲೆಯ ಆಯ್ದ ಸರ್ಕಾರಿ ಪ್ರೌಢಶಾಲೆಗಳಿಗೆ ಅಲ್ಮೆರಗಳನ್ನು ಟೆಂಡರ್ ಮೂಲಕ ಖರೀದಿಸಲು ಟೆಂಡರ್ ಪ್ರಕ್ರಿಯೆ ನಡೆಸಿ ಕಾರ್ಯದೇಶ ನೀಡಲಾಗಿದ್ದು, ಶಾಲೆಗಳಿಗೆ ಅಲ್ಮೆರಾ ಸರಬರಾಜು ಮಾಡಲಾಗುತ್ತಿದೆ. ಅದರಲ್ಲಿ ರೂ.24.27ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

8. ಸರ್ವ ಶಿಕ್ಷಣ ಕರ್ನಾಟಕ: ಸರ್ವ ಶಿಕ್ಷಣ ಕರ್ನಾಟಕ ವತಿಯಿಂದ ಮಂಜೂರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಯವರ ವೇತನಕ್ಕಾಗಿ ರೂ.1272.67ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.1164.33 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

9. ಸರ್ಕಾರಿ ಪ್ರಾಥಮಿಕ ಶಾಲೆಗಳು: ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವೇತನ ಭತ್ಯೆಗಾಗಿ 29124.71ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಇದರಲ್ಲಿ ರೂ.22561.32ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

10. ಸರ್ಕಾರಿ ಪ್ರೌಢಶಾಲೆ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿ ವೇತನಕ್ಕಾಗಿ ರೂ.14990.78ಲಕ್ಷ ಅನುದಾನ ಬಿಡುಗಡೆಯಾಗಿದ್ದು, 13561.45ಲಕ್ಷ ರೂ.ಗಳ ವೆಚ್ಚ ಮಾಡಲಾಗಿದೆ.

11. ಪ್ರಾಥಮಿಕ ಶಾಲೆಗಳಿಗೆ ಸಹಾಯಾನುದಾನ : ಹೊಸದಾಗಿ ಅನುದಾನಕ್ಕೆ ಒಳಪಟ್ಟಿರುವ ಖಾಸಗಿ ಪ್ರಾಥಮಿಕ ಶಾಲೆಗಳ ಸಿಬ್ಬಂದಿ ವೇತನಕ್ಕಾಗಿ ರೂ.1416.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.1395.40ಲಕ್ಷಗಳ ವೆಚ್ಚ ಮಾಡಲಾಗಿದೆ.

12. ಪ್ರಾಥಮಿಕ ಪರಿವೀಕ್ಷಣೆ :– ಜಿಲ್ಲೆಯ 8 ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ವೇತನ ಭತ್ಯೆಗಾಗಿ ರೂ.724.42ಲಕ್ಷ ಬಿಡುಗಡೆಯಾಗಿದ್ದು, ರೂ.714.50ಲಕ್ಷ ಅನುದಾನ ಖರ್ಚು ಭರಿಸಲಾಗಿದೆ.

13. ಇತರೆ ಚಟುವಟಿಕೆ:

1. ಪ್ರತಿಭಾ ಕಾರಂಜಿ: ಈ ಕಾರ್ಯಕ್ರಮವು ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಸೂಕ್ತವಾದ ಮತ್ತು ವ್ಯವಸ್ಥಿತವಾದ ವೇದಿಕೆಯಾಗಿದೆ. ಮಕ್ಕಳು ತಮಗೆ ಆಸಕ್ತಿ ಇರುವ ಕಲೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಅವಕಾಶ ಒದಗಿಸಿದೆ. ಮಕ್ಕಳಲ್ಲಿ ಸ್ಪರ್ಧಾ ಮನೋಭಾವನೆ ಬೆಳೆಯುತ್ತದೆ. ಮಕ್ಕಳ ಸೃಜನಶೀಲತೆಯನ್ನು ಹೊರಹೊಮ್ಮಿಸಲು ಸಹಕಾರಿಯಾಗಿದೆ.

2020–21ನೇ ಸಾಲಿನಲ್ಲಿ ಕೋವಿಡ್–19ರ ಸೋಂಕಿನ ಕಾರಣ ಗ್ರಾಮೀಣ ಪ್ರದೇಶದಲ್ಲಿ ಆನ್‌ಲೈನ್ ಮೂಲಕ ರಸಪ್ರಶ್ನೆ ಕಾರ್ಯಕ್ರಮವನ್ನು ಮಾತ್ರ ಆಯೋಜಿಸಿ ವಿಜೇತರಿಗೆ ಸ್ಪರ್ಧೆವಾರು ಪ್ರತ್ಯೇಕ 3 ಸ್ಥಾನಗಳಿಗೆ ಬಹುಮಾನಗಳನ್ನು ನೀಡಿದೆ.

2. ರಾಜ್ಯ ಯೋಜನಾ ಕಾರ್ಯಕ್ರಮ :

ಅ) ರಾಜ್ಯ ವಲಯ ಯೋಜನೆಯಡಿ 07 ಸರ್ಕಾರಿ ಪ್ರೌಢಶಾಲೆಗಳಲ್ಲಿ 10 ಕೊಠಡಿ ನಿರ್ಮಾಣ ಸಂಬಂಧ ರೂ.157.70ಲಕ್ಷ ನಿಗಧಿಯಾಗಿ ಬಿಡುಡಗೆಯಾಗಿರುತ್ತದೆ. ಸದರಿ ಅನುದಾನವನ್ನು ಪಿ.ಆರ್.ಇ.ಡಿ. ಮಂಡ್ಯ, ಇವರಿಗೆ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ರಾಜ್ಯ ವಲಯ ಯೋಜನೆಯಡಿ 09 ಸರ್ಕಾರಿ ಶಾಲೆಗಳ ದುರಸ್ಥಿಗಾಗಿ ಒಟ್ಟು ರೂ.44.40ಲಕ್ಷ ನಿಗಧಿಯಾಗಿ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಮಂಡ್ಯ ಇವರಿಗೆ ಬಿಡುಗಡೆ ಮಾಡಿ ಕಾಮಗಾರಿ ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರಾಜ್ಯ ವಲಯ ಯೋಜನೆಯಡಿ 25 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 31 ಕೊಠಡಿ ನಿರ್ಮಾಣ ಮಾಡಲು ಒಟ್ಟು ರೂ.328.60ಲಕ್ಷ ನಿಗಧಿಯಾಗಿ ಶೇಕಡ 50%ರಷ್ಟು ಅನುದಾನವು 2020–21ನೇ ಸಾಲಿನಲ್ಲಿ ಬಿಡುಗಡೆ ಯಾಗಿರುತ್ತದೆ. ಕಾಮಗಾರಿಗಳನ್ನು ಪಿ.ಆರ್.ಇ.ಡಿ. ಮಂಡ್ಯರವರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಈ) 2019–20ನೇ ಸಾಲಿಗೆ ಅನುಮೊದನೆಯಾಗಿರುವ ಆರ್.ಐ.ಡಿ.ಎಫ್.–25ರಡಿ 47 ಸರ್ಕಾರಿ ಪ್ರಾಥಮಿಕ ಶಾಲೆಗಳ 63 ಶಿಥಿಲಗೊಂಡ ಕೊಠಡಿಗಳನ್ನು ನೆಲಸಮಗೊಳಿಸಿ ಮರು ನಿರ್ಮಾಣ ಮಾಡಲು ರೂ.693.00ಲಕ್ಷ ನಿಗಧಿಯಾಗಿ ರಾಜ್ಯ ಕಛೇರಿಯಿಂದ ಅನುಮೋದನೆಯಾಗಿದ್ದು, ಕಾಮಗಾರಿಗಳನ್ನು ಲೋಕೊಪಯೋಗಿ ಇಲಾಖೆ, ಮಂಡ್ಯರವರಿಗೆ ವಹಿಸಲಾಗಿದೆ. ಕಾಮಗಾರಿಗಳು 2020–21ನೇ ಸಾಲಿನಲ್ಲಿ ಪ್ರಗತಿಯಲ್ಲಿರುತ್ತವೆ.

ವಾರ್ಷಿಕ ಆಡಳಿತ ವರದಿ 2020–21

ಜಿಲ್ಲಾ ಲೋಕ ಶಿಕ್ಷಣ ಸಮಿತಿ

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ ಮಂಡ್ಯ ಜಿಲ್ಲೆ, ಮಂಡ್ಯ.

2020–21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್ ಅನುದಾನದಲ್ಲಿ ಜನಶಿಕ್ಷಣ ನಿಲಯಕ್ಕೆ ರೂ.6.30ಲಕ್ಷಗಳು ಬಿಡುಗಡೆಯಾಗಿದ್ದು, 1040 ಮಂದಿ ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ರೂ.2.85ಲಕ್ಷಗಳನ್ನು ವೆಚ್ಚ ಮಾಡಲು ಅನುಮೋದನೆ ಪಡೆಯಲಾಗಿತ್ತು. ಕೋವಿಡ್–19ರ ಹಿನ್ನೆಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿರುವುದಿಲ್ಲ ಹಾಗೂ ಇತರೆ ಕಛೇರಿ ವೆಚ್ಚಕ್ಕಾಗಿ ಒಟ್ಟಾರೆ ರೂ.3.15ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

****

ವಾರ್ಷಿಕ ಆಡಳಿತ ವರಿದಿ 2020–21

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಡ್ಯ.

1. ಲೆಕ್ಕಶೀರ್ಷಿಕೆ (2205–00–104–0–26)ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ:–

ಈ ಯೋಜನೆಯಡಿಯಲ್ಲಿ ರೂ.50.00ಲಕ್ಷಗಳನ್ನು ನಿಗದಿ ಪಡಿಸಲಾಗಿದೆ. ಜಿಲ್ಲಾ ಪಂಚಾಯತ್ **ವತಿಯಿಂದ ರೂ.50.00ಲಕ್ಷ ಬಿಡುಗಡೆಯಾಗಿದ್ದು, ಸದರಿ ಯೋಜನೆಯಡಿ** ಜಿಲ್ಲಾ ಮಟ್ಟದ ಯುವಜನೋತ್ಸವ, ಸಂಘಟನೆ ಮತ್ತು ಇದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ ವಿತರಣೆಗಾಗಿ, ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಹಸ ಕ್ರೀಡೆಗಳಾದ ಶಿಲಾರೋಹಣ, ರಿವರ್‌ರ್‍ಯಾಪ್ಟಿಂಗ್, ಮತ್ತು ಇಲಾಖೆಯ ಮಾರುತಿ ಜಿಪ್ಸಿ ವಾಹನದ ಇಂಧನ ಭರಿಸಲು, ವಿಮೆ ಮತ್ತು ರಿಪೇರಿಗಾಗಿ ಹಾಗೂ ಸದರಿ ವಾಹನದ ಚಾಲಕರ ವೇತನ ಪಾವತಿಗಾಗಿ ಯುವ ಸಂಪರ್ಕ ಸಭೆ, ಯುವ ಸಮ್ಮೇಳನ, ಕಾರ್ಯಾಗಾರ ರಾಷ್ಟ್ರೀಯ ಕ್ರೀಡಾ ದಿನಾಚರಣೆ, ವಿಕಲಚೇತನರ ಕ್ರೀಡಾಕೂಟ ಈ ಜಾನಪದ ಕಲೆಗಳ ತರಬೇತಿ ಕಾರ್ಯಕ್ರಮ(ಜಿಲ್ಲೆಯ ಯುವಕ/ಯುವತಿಯರಿಗೆ 15 ರಿಂದ 29 ವರ್ಷ ವಯೋಮಿತಿಯವರಗೆ), ಜಿಲ್ಲೆಯ 15 ರಿಂದ 29 ವರ್ಷ ವಯೋಮಿತಿಯ ಯುವಕ/ಯುವತಿಯರಿಗೆ ಆತ್ಮ ರಕ್ಷಣೆಗೆ ಸಂಬಂಧಿಸಿದಂತೆ ಜೂಡೋ ಕ್ರೀಡೆಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಜಿಲ್ಲಾ ಕ್ರೀಡಾಂಗಣದಲ್ಲಿರುವ ಜಿಮ್ ಹಾಲ್ ಪುನಶ್ಚೇತನ ಮತ್ತು ಜಿಮ್ ಕ್ರೀಡೋಪಕರಣ ಖರೀದಿ ಬಿಡುಗಡೆಯಾಗಿರುವ ರೂ.50.00ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

2. ಲೆಕ್ಕಶೀರ್ಷಿಕೆ (2205–00–104–0–28)ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ:–

ಈ ಯೋಜನೆಯಡಿಯಲ್ಲಿ ರೂ.51.35ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ.51.35ಲಕ್ಷ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ಆಟದ ಮೈದಾನಗಳ ಅಂಕಣಗಳ ರಿಪೇರಿ, ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳೆದಿರುವ ಹುಲ್ಲುಗಳನ್ನು ಕತ್ತರಿಸಲು, ಕ್ರೀಡಾಂಗಣದಲ್ಲಿರುವ ಸಾರ್ವಜನಿಕ ಕುಡಿಯುವ ನೀರಿನ ಘಟಕವನ್ನು ಉನ್ನತೀಕರಣ, ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಇಬ್ಬರು ಕಾವಲುಗಾರರ ಮತ್ತು ಓರ್ವ ಸ್ವಚ್ಛತಾಗಾರರ ವೇತನ, ಕಂಪ್ಯೂಟರ್ ಆಪರೇಟರ್ ವೇತನಕ್ಕಾಗಿ ಮತ್ತು ಅದೇ ರೀತಿ ನಾಗಮಂಗಲ, ಶ್ರೀರಂಗಪಟ್ಟಣ, ಮದ್ದೂರು, ಮಳವಳ್ಳಿ, ಕೆ.ಆರ್.ಪೇಟೆ ಹಾಗೂ ಪಾಂಡವಪುರ ತಾಲ್ಲೂಕುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕಾವಲುಗಾರರ, ಸ್ವಚ್ಛತಾ ಸಿಬ್ಬಂಧಿಗಳ ವೇತನಕ್ಕಾಗಿ ಹಾಗೂ ಕ್ರೀಡಾಂಗಣಗಳಿಗೆ ಅವಶ್ಯವಾಗಿ ಬೇಕಾಗಿರುವ ಪೀಠೋಪಕರಣ, ಕ್ರೀಡೋಪಕರಣಗಳ ಖರೀದಿ ಮತ್ತು ಇನ್ನಿತರೆ ನಿರ್ವಹಣೆಗಾಗಿ ಬಿಡುಗಡೆಯಾಗಿರುವ ರೂ.51.35ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

3. ಲೆಕ್ಕ ಶೀರ್ಷಿಕೆ (2205–00–104–0–29) ಕ್ರೀಡಾಶಾಲೆಗಳು/ನಿಲಯಗಳು ನಿರ್ವಹಣೆ:

ಈ ಯೋಜನೆಯಡಿಯಲ್ಲಿ ರೂ.22.00ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ.22.00ಲಕ್ಷ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್‌ನಿಂದ ನಿರ್ವಹಿಸುತ್ತಿರುವ ಜಿಲ್ಲಾ ಕ್ರೀಡಾಶಾಲೆ ನಿರ್ವಹಣೆ ಅಂದರೆ 05 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಬ್ಯಾಸ್ಕೆಟ್‌ಬಾಲ್, ಅಥ್ಲೆಟಿಕ್ಸ್, ಕಬಡ್ಡಿ, ಫುಟ್ಬಾಲ್ ಕ್ರೀಡೆಯಲ್ಲಿ ತರಬೇತಿ ಪಡೆಯುತ್ತಿರುವ 50 ಕ್ರೀಡಾಪಟುಗಳಿಗೆ ನಿರ್ವಹಣಾ ವೆಚ್ಚವನ್ನು ಭರಿಸಲು, ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಭದ್ರತಾ ಸಿಬ್ಬಂದಿ ಸ್ವಚ್ಛತಾಗಾರರು, ಸಹಾಯಕರು, ಗುರುತುಗಾರರು, ಹಾಗೂ ಮಹಿಳಾ ಕೇರ್‌ಟೇಕರ್ ಇವರುಗಳ ವೇತನಕ್ಕಾಗಿ, ವಿದ್ಯುಚ್ಛಕ್ತಿ ಬಿಲ್, ಕಟ್ಟಡ ರಿಪೇರಿ, ವಿದ್ಯಾರ್ಥಿಗಳ ಆಯ್ಕೆ ವೆಚ್ಚ, ಸ್ವಚ್ಛತಾ ಸಾಮಾಗ್ರಿ ವೆಚ್ಚ, ವೈದ್ಯಕೀಯ ವೆಚ್ಚ, ಇನ್ನಿತರೆ ವೆಚ್ಚಗಳನ್ನು ಭರಿಸಲಾಗಿದೆ. ಕ್ರೀಡಾ ಶಾಲೆಯ ಕ್ರೀಡಾಪಟಗಳಿಗೆ ಷೂಸ್ ಖರೀದಿಗಾಗಿ ಶೌಚಾಲಯಗಳ ದುರಸ್ಥಿ ಇವುಗಳಿಗೆ ರೂ.22.00ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

4. ಲೆಕ್ಕಶೀರ್ಷಿಕೆ (2205–00–104–0–30)ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು:–.

ಈ ಯೋಜನೆಯಡಿಯಲ್ಲಿ ರೂ.1.85ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ.1.85ಲಕ್ಷಗಳು ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ಮಂಡ್ಯ ಜಿಲ್ಲೆಯಲ್ಲಿರುವ ಕಷ್ಟ ಪರಿಸ್ಥಿಯಲ್ಲಿರುವ 11 ಕ್ರೀಡಾ/ಕುಸ್ತಿಪಟುಗಳಿಗೆ ಮಾಸಾಶನ ನೀಡಿದ್ದು, ವೆಚ್ಚ ಭರಿಸಲಾಗಿರುತ್ತದೆ.

5. ಲೆಕ್ಕಶೀರ್ಷಿಕೆ (2205–00–104–0–31)ಗಾಮೀಣಕ್ರೀಡಾ ಕೇಂದ್ರಗಳು :–

ಈ ಯೋಜನೆಯಡಿಯಲ್ಲಿ ರೂ.6.00ಲಕ್ಷಗಳನ್ನು ನಿಗದಿಪಡಿಸಲಾಗಿದೆ. ರೂ.6.00ಲಕ್ಷ ಬಿಡುಗಡೆಯಾಗಿದ್ದು, ಒಟ್ಟು 6.00ಲಕ್ಷಗಳನ್ನು ಈ ಕೆಳಕಂಡಂತೆ ವೆಚ್ಚ ಭರಿಸಲಾಗಿರುತ್ತದೆ.

1. 2021–22ನೇ ಸಾಲಿನ ಕ್ರೀಡಾ ಶಾಲೆ/ಕ್ರೀಡಾ ನಿಲಯಗಳಿಗೆ ಪ್ರತಿಭಾವಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ಜಿಲ್ಲಾದ್ಯಂತ ತಾಲ್ಲೂಕಿಗೆ 2 ಜಿಲ್ಲಾ ಮಟ್ಟದ ಕೇಂದ್ರಗಳನ್ನು ತೆರೆಯುವ ಸಲುವಾಗಿ 7 ತಾಲ್ಲೂಕು ಗಳಿಗೆ ಹಾಗೂ ಜಿಲ್ಲಾ ಮಟ್ಟದ ಆಯ್ಕೆ ಕೇಂದ್ರಗಳಲ್ಲಿ ಭಾಗವಹಿಸಿದ ಸ್ಪರ್ಧಾಳುಗಳನ್ನು ರಾಜ್ಯ ಮಟ್ಟದ ಆಯ್ಕೆಗಾಗಿ ಕಳುಹಿಸುವ ಸಲುವಾಗಿ ಪ್ರಭತ್ಯೆ & ದಿನಭತ್ಯೆ ನೀಡಲು ಕ್ರೀಡಾಶಾಲೆ/ಕ್ರೀಡಾನಿಲಯಗಳಿಗೆ ಪ್ರತಿಭಾವಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು 7 ತಾಲ್ಲೂಕುಗಳ ಕ್ರೀಡಾಪಟುಗಳಿಗೆ ಉಪಾಹಾರ ವ್ಯವಸ್ಥೆ, ಮಾರ್ಕಿಂಗ್ ಪೌಡರ್, ಮಾರ್ಕರ್ ಗೌರವಧನ, ಪ್ರಚಾರ ವೆಚ್ಚ ಹಾಗೂ ದಾಖಲೀಕರಣಕ್ಕಾಗಿ ವೆಚ್ಚ ಭರಿಸಲಾಗಿರುತ್ತದೆ.
2. ಜಿಲ್ಲಾ ಪಂಚಾಯತ್ ಸದಸ್ಯರ ಕ್ಷೇತ್ರಗಳಲ್ಲಿರುವ ಶಾಲೆಗಳ ಹೆಸರನ್ನು ಪಡೆದು ಕ್ರೀಡೆಗಾಗಿ ಉತ್ತೇಜನ ಅಡಿಯಲ್ಲಿ ಶಾಲಾ ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ವೆಚ್ಚ ಭರಿಸಲಾಗಿರುತ್ತದೆ.
3. ತಾಲ್ಲೂಕು ಹಾಗೂ ಜಿಲ್ಲಾ ಕ್ರೀಡಾ ಕೂಟಗಳನ್ನು ಇತರೆ ಸಂಘ/ಸಂಸ್ಥೆಯವರ ಸಹಯೋಗದೊಂದಿಗೆ ಆಯೋಜಿಸಲು ಹಾಗೂ ಕ್ರೀಡೋಪಕರಣಗಳನ್ನು ಒದಗಿಸುವ ಸಲುವಾಗಿ.

6. 2205–00–104–0–32 (100) ಕ್ರೀಡೆ ಮತ್ತು ಪಂದ್ಯಗಳು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ

ಈ ಯೋಜನೆಯಡಿಯಲ್ಲಿ ರೂ.2.45ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು, ರೂ.2.45ಲಕ್ಷ ಬಿಡುಗಡೆ ಯಾಗಿರುತ್ತದೆ ಈ ಮೊತ್ತದಲ್ಲಿ ಕ್ರೀಡಾ ಶಾಲೆಯ ಕ್ರೀಡಾಪಟುಗಳಿಗೆ ಕಂಪ್ಯೂಟರ್ ಖರೀದಿಸಿ ಒದಗಿಸಲಾಗಿರುತ್ತದೆ. ಈ ಸಂಬಂಧ ಒಟ್ಟು ರೂ.2.45ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

7. 2205–00–104–0–33 ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು & ಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಇತರೆ ಸಂಸ್ಥೆಗಳಿಗೆ ಸಹಾಯ:–

ಈ ಯೋಜನೆಯಡಿಯಲ್ಲಿ ರೂ.2.45ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ರೂ.2.45ಲಕ್ಷ ಬಿಡುಗಡೆ ಯಾಗಿರುತ್ತದೆ. ಈ ಮೊತ್ತದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರ ಕ್ಷೇತ್ರಗಳಲ್ಲಿರುವ ಶಾಲೆಗಳ ಹೆಸರನ್ನು ಪಡೆದು ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಪ್ರೋತ್ಸಾಹಧನವನ್ನು ತಲಾ ರೂ.8000/–ರಂತೆ ಒಟ್ಟು 25 ಶಾಲಾ/ಸಂಘ/ಸಂಸ್ಥೆಗಳಿಗೆ ಖರೀದಿಸಿ ಒದಗಿಸಲಾಗಿರುತ್ತದೆ. ಈ ಸಂಬಂಧ ಒಟ್ಟು ರೂ.2.45ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

8. ಲೆಕ್ಕಶೀರ್ಷಿಕೆ (2205–00–104–0–35)ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ:

ಯೋಜನೆಯಡಿಯಲ್ಲಿ ರೂ.2.50ಲಕ್ಷಗಳನ್ನು ನಿಗದಿ ಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ.2.50ಲಕ್ಷ ಬಿಡುಗಡೆಯಾಗಿದ್ದು, ಈ ಮೊತ್ತದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಿವಿಧ ಕ್ರೀಡೆಗಳಲ್ಲಿ ಕ್ರೀಡಾಕೂಟ ಗಳನ್ನು ಸಂಘಟಿಸಿರುವ ನೊಂದಾಯಿತ ಯುವಕ ಸಂಘಗಳಿಗೆ ಪ್ರೋತ್ಸಾಹಧನ ನೀಡಿದ್ದು, ಒಟ್ಟು ರೂ.2.50ಲಕ್ಷ ಗಳನ್ನು ವೆಚ್ಚ ಭರಿಸಲಾಗಿರುತ್ತದೆ.

9. ಲೆಕ್ಕಶೀರ್ಷಿಕೆ (2205–00–104–0–36) ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ:–

ಜಿಲ್ಲಾ ಮತ್ತು ವಿಭಾಗೀಯ ಯುವಕ ಮಂಡಳಿಗೆ ಸಹಾಯ ಯೋಜನೆಯಡಿಯಲ್ಲಿ ರೂ.2.50ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು ರೂ.2.50ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಮೊತ್ತದಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ವಿವಿಧ ಕ್ರೀಡಾಕೂಟಗಳಿಗೆ ಅವಶ್ಯವಿರುವ ಕ್ರೀಡೋಪಕರಣಗಳನ್ನು ಒದಗಿಸುವ ಸಲುವಾಗಿ ಕೆ.ಪಿ.ಟಿ.ಟಿ ನಿಯಮದಂತೆ ಕ್ರೀಡೋಪಕರಣಗಳನ್ನು ಖರೀದಿಸಿ ಒದಗಿಸಲಾಗಿದ್ದು, ಒಟ್ಟು ರೂ.2.50ಲಕ್ಷಗಳನ್ನು ವೆಚ್ಚ ಭರಿಸಲಾಗಿರುತ್ತದೆ.

2020–21ನೇ ಸಾಲಿನಲ್ಲಿ ಮಂಜೂರಾಗಿರುವ ಮತ್ತು ಭರ್ತಿಯಾಗಿರುವ ಹುದ್ದೆಗಳ ಬಗ್ಗೆ ಮಾಹಿತಿ

ಇಲಾಖೆಯ ಹೆಸರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ

ಕ್ರ. ಸಂ	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಪೈಕಿ				
				ಸರ್ಕಾರಿ	ಹೊರಗುತ್ತಿಗೆ	ಪ್ರೇರಿತ ಹುದ್ದೆ	ಪ್ರೇರಿತ ಅರ್ಹ	ಇತರೆ
1	ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಡ್ಯ	1	1	–	1	1	–	–
2	ಅಧೀಕ್ಷಕರು	1	–	–	–	–	–	–
3	ದ್ವಿತೀಯದರ್ಜೆ ಸಹಾಯಕರು	1	–	–	–	–	–	–
4	ಗುಂಪು ಡಿ ನೌಕರರು	1	1	1	–	–	–	–
ಒಟ್ಟು		4	2	1	1	1	–	–

****

ವಾರ್ಷಿಕ ಆಡಳಿತ ವರದಿ 2020–21

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಮಂಡ್ಯ

2020–21 ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಗಳ ಸಾಧಿಸಿದ ಪ್ರಗತಿ ವರದಿ

2210–00–101–0–27 : ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–101–0–27**	2802.82+65.27	2656.34	364	2566.08	364	ಜಿಲ್ಲೆಯಲ್ಲಿನ 97 ಸಂಸ್ಥೆಗಳ 364 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–101–0–32:ಜಿಲ್ಲಾ ಸಿಬ್ಬಂದಿ

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–101–0–32**	314.95+4.16	293.93	34	244.50	34	ಜಿಲ್ಲೆಯಲ್ಲಿನ 12 ಸಂಸ್ಥೆಗಳ 34 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–101–0–36 : ಆರೋಗ್ಯ ಇಲಾಖೆಯ ಕಟ್ಟಡಗಳ ನಿರ್ವಹಣೆ

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	

		ಅನುದಾನ					
1	**2210–00–101–0–36**	52.00	52.00	27	52.00	27	ಜಿಲ್ಲೆಯಲ್ಲಿನ 27 ಸಂಸ್ಥೆಗಳ ಕಟ್ಟಡಗಳ ದುರಸ್ತಿ ಮಾಡಲಾಗಿದೆ.

2210–00–102–0–31: ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–102–0–31**	98.02	90.01	14	82.39	14	ಜಿಲ್ಲೆಯಲ್ಲಿನ 01 ಸಂಸ್ಥೆಗಳ 14 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–102–0–40 : ಆಸ್ಪತ್ರೆಗಳ ಸಲಕರಣೆಗಳ ದುರಸ್ತಿ

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–102–0–40**	14.00	14.00	45	14.00	45	ಜಿಲ್ಲೆಯಲ್ಲಿನ 45 ಸಂಸ್ಥೆಗಳ ಸಾಧನ ಸಲಕರಣೆಗಳನ್ನು ದುರಸ್ತಿ ಪಡಿಸಲು ಈ ಲೆಕ್ಕಶೀರ್ಷಿಕೆಯಲ್ಲಿ ಅನುದಾನವನ್ನು ಉಪಯೋಗಿಸ ಲಾಗಿದೆ.

2210–00–103–0–26 : ಪ್ರಾಥಮಿಕ ಆರೋಗ್ಯ ಕೇಂದ್ರಗಳು(ಭಾರತ ಸರ್ಕಾರ ಮಾದರಿ) (ಎಂ.ಎನ್.ಪಿ)

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–103–0–26**	2242.88+19.65	2082.80	325	1952.68	325	ಜಿಲ್ಲೆಯಲ್ಲಿನ 93 ಸಂಸ್ಥೆಗಳ 325 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–103–0–43: ತಾಲ್ಲೂಕು ಮಟ್ಟದ ಆಸ್ಪತ್ರೆಗಳು

ಕ್ರ ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–103–0–43**	7.00	7.00	09	4.80	02	ಜಿಲ್ಲೆಯಲ್ಲಿನ ಎರಡು ಸಮುದಾಯ ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಉಪರಕಣಗಳನ್ನು ಖರೀದಿಸಿ ಸರಬರಾಜು ಮಾಡಲಾಗಿದೆ.

2210–00–103–0–44: ಆಂಬ್ಯುಲೆನ್ಸ್‌ಗಳ ವ್ಯವಸ್ಥೆ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–103–0–44**	15.00	15.00	1	14.38	1	ಜಿಲ್ಲೆಯಲ್ಲಿನ ಒಂದು ಸಮುದಾಯ ಆರೋಗ್ಯ ಕೇಂದ್ರಕ್ಕೆ ಆಂಬ್ಯುಲೆನ್ಸ್‌ನ್ನು ಖರೀದಿಸಿ ಒದಗಿಸಲಾಗಿದೆ.

4210–00–101–0–39: ಜಿಲ್ಲಾ ಆರೋಗ್ಯ ಕಛೇರಿ ಕಟ್ಟಡಗಳು

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**4210–00–101–0–39**	5.00	5.00	4	5.00	1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ದುರಸ್ತಿ ಮತ್ತು ಸುಣ್ಣ ಬಣ್ಣ ಬಳಿಯಲು ಈ ಲೆಕ್ಕ ಶೀರ್ಷಿಕೆ ಅನುದಾನವನ್ನು ಉಪಯೋಗಿಸಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

2210–00–101–0–62: ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಲವರ್ಧನೆ–ಪ್ರಸೂತಿ ಗೃಹಗಳು

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–101–0–62**	173.00	173.00	40	165.39	40	ಜಿಲ್ಲೆಯಲ್ಲಿನ 19 ಸಂಸ್ಥೆಗಳ 40 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–104–0–61: ಉಪ ಕೇಂದ್ರಗಳ ಸ್ಥಾಪನೆ (ಎಂ.ಎನ್.ಪಿ)

ಕ್ರ ಸ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–104–0–61**	26.17	26.17	04	25.53	02	ಜಿಲ್ಲೆಯಲ್ಲಿನ 02 ಸಂಸ್ಥೆಗಳ 02 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–104–0–64: ಸಾಮಗ್ರಿಗಳು ಮತ್ತು ಸರಬರಾಜು

ಕ್ರ ಸ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–104–0–64**	21.00	21.00	70	20.93	70	ಜಿಲ್ಲೆಯಲ್ಲಿನ 70 ಸಂಸ್ಥೆಗಳಿಗೆ ಅಗತ್ಯ ಸಾಮಗ್ರಿಗಳ ಸರಬರಾಜು ಮಾಡಲಾಗಿದೆ.

ಕುಟುಂಬ ಕಲ್ಯಾಣ ಕಾರ್ಯಕ್ರಮಗಳು

2210–00–106–0–01: ಜಿಲ್ಲಾ ಕುಟುಂಬ ಕಲ್ಯಾಣ ವಿಭಾಗ

ಕ್ರ ಸ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–106–0–01**	188.90+26.39	188.90	23	158.38	23	ಜಿಲ್ಲೆಯಲ್ಲಿನ 02 ಸಂಸ್ಥೆಗಳ 23

							ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–106–0–02 : ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗ್ರಾಮಾಂತರ ಕುಟುಂಬ ಕಲ್ಯಾಣ ಕೇಂದ್ರಗಳು

ಸ.ಕ್ರ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–106–0–02**	292.58+141.56	292.58	40	239.04	40	ಜಿಲ್ಲೆಯಲ್ಲಿನ40 ಸಂಸ್ಥೆಗಳ 45 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ ಮತ್ತುಜಿಲ್ಲೆಯ 125 ಪ್ರಾ.ಆ.ಕೇಂದ್ರ/ಸ.ಆ. ಕೇಂದ್ರಗಳ ವಿದ್ಯುತ್ ವೆಚ್ಚ, ದೂರವಾಣಿ ವೆಚ್ಚ, ಹಾಗೂ ಕಛೇರಿ ವೆಚ್ಚಗಳನ್ನು (ಲೇಖನ ಸಾಮಗ್ರಿ, ಸ್ಟಾಪ್, ಇತ್ಯಾದಿ) ಭರಿಸಲಾಗಿದೆ

2210–00–106–0–03 : ಗ್ರಾಮಾಂತರ ಉಪ ಕೇಂದ್ರಗಳು (ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪ್ರಾರಂಭವಾದವುಗಳು)

ಸ.ಕ್ರ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–106–0–03**	1402.49+33.96	1402.49	268	1327.65	268	ಜಿಲ್ಲೆಯಲ್ಲಿನ 99 ಸಂಸ್ಥೆಗಳ 268 ನೌಕರರಿಗೆ ವೇತನ ಭತ್ಯೆಯನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2210–00–106–0–48 : ರಾಜ್ಯ ಆರೋಗ್ಯ ಸಾರಿಗೆ ಸಂಸ್ಥೆ ಹಾಗೂ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಪ್ರಾ.ಆ.ಕೇಂದ್ರಗಳು–ಸಹಾಯಾನುದಾನ

ಸ.ಕ್ರ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಹೆಚ್ಚುವರಿ ಸೇರಿ)	ಗುರಿ		ಸಾಧನೆ		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2210–00–106–0–48**	197.04+57	197.04	1/35	125.01	1/35	ಜಿಲ್ಲೆಯಲ್ಲಿನ 01 ಸಂಸ್ಥೆಯ 01 ನೌಕರರಿಗೆ ವೇತನ ಭತ್ಯೆಯನ್ನು ನೀಡಲಾಗಿದೆ ಹಾಗೂ ಜಿಲ್ಲೆಯ 25 ಸಂಸ್ಥೆಗಳ 35 ವಾಹನಗಳಿಗೆ ಇಂಧನ, ರಿಪೇರಿ ಹಾಗೂ ವಿಮೆಗಾಗಿ ವೆಚ್ಚ ಮಾಡಲಾಗಿದೆ.

ವಾರ್ಷಿಕ ಆಡಳಿತ ವರದಿ 2020–2021
ಆಯುಷ್ ಇಲಾಖೆ, ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ.

ಆಯುಷ್ ಇಲಾಖೆಯು ಆಯುರ್ವೇದ ಯುನಾನಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದ್ದತಿಗಳ ಮುಖೇನ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡುತ್ತಿದ್ದು ಮಂಡ್ಯ ಜಿಲ್ಲೆಯಲ್ಲಿ 19 ಆಯುರ್ವೇದ, 4 ಯುನಾನಿ ಚಿಕಿತ್ಸಾಲಯಗಳು 1 ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಭಾಗ ಹಾಗೂ 4 ಆಯುರ್ವೇದ ಆಸ್ಪತ್ರೆಗಳು ಮತ್ತು 1 ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು 2020–21ನೇ ಸಾಲಿನಲ್ಲಿ 90,953 ರೋಗಿಗಳು ಆಯುಷ್ ಪದ್ದತಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಮತ್ತು ಮಂಡ್ಯ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಒಳರೋಗಿ ವಿಭಾಗದಲ್ಲಿ 12 ರೋಗಿಗಳು ದಾಖಲಾಗಿ ಹಾಗೂ 134 ಮಂದಿ ಬೆಡ್ ಆಕ್ಯೂಪೆನ್ಸಿಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ ಹಾಗೂ ಪಂಚಕರ್ಮ ವಿಭಾಗದಲ್ಲಿ 8,481 ರೋಗಿಗಳು ಚಿಕಿತ್ಸೆಯನ್ನು ಪಡೆದಿರುತ್ತಾರೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಮಂಡ್ಯ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 25 ಆಯುರ್ವೇದ ವೈದ್ಯರು ನೇಮಕಗೊಂಡಿದ್ದು, ಆಯುಷ್ ವೈದ್ಯಪದ್ದತಿಯಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆಯನ್ನು ನೀಡುತ್ತಿದ್ದಾರೆ ಮತ್ತು ಎಂ.ಬಿ.ಬಿ.ಎಸ್. ಎದುರು ಹುದ್ದೆಯಲ್ಲಿ ಒಟ್ಟು 8 ಆಯುರ್ವೇದ ವೈದ್ಯರು ಆಯುಷ್ ಪದ್ಧತಿಯಲ್ಲಿ ಚಿಕಿತ್ಸೆಯನ್ನು ನೀಡುತ್ತಿದ್ದಾರೆ.

2020–21 ನೇ ಸಾಲಿನ ರಾಜ್ಯವಲಯದ ಐ.ಇ.ಸಿ. ಕಾರ್ಯಕ್ರಮದಡಿಯಲ್ಲಿ.

1. ಜಿಲ್ಲೆಯಲ್ಲಿ ಆಯುಷ್ ಸೇವಾ ಗ್ರಾಮ ಎಂಬ ಕಾರ್ಯಕ್ರಮದಲ್ಲಿ 2 ಗ್ರಾಮಗಳನ್ನು ಆಯ್ಕೆ ಮಾಡಿದ್ದು, ಸದರಿ ಗ್ರಾಮಗಳಲ್ಲಿ ಒಟ್ಟು 24 ಉಚಿತ ಆಯುಷ್ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರಗಳನ್ನು ಮತ್ತು ಔಷಧಿ ಸಸ್ಯಗಳ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಒಟ್ಟಾರೆಯಾಗಿ 1,481 ಫಲಾನುಭವಿಗಳು ಚಿಕಿತ್ಸೆಯನ್ನು ಎಸ್.ಸಿ.ಪಿ. / ಟಿ.ಎಸ್.ಪಿ./ ಸಾಮಾನ್ಯ ಯೋಜನೆಯಡಿಯಲ್ಲಿ ಉಚಿತವಾಗಿ ಪಡೆದುಕೊಂಡಿರುತ್ತಾರೆ.

1) ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳ ನಿರ್ವಹಣೆ:

ಮಂಡ್ಯ ಜಿಲ್ಲೆಯಲ್ಲಿ 28 ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿದ್ದು ಬಹಳಷ್ಟು ಚಿಕಿತ್ಸಾಲಯಗಳು ಗ್ರಾಮೀಣ ಪ್ರದೇಶಗಳ ಜನರಿಗೆ ಆಯುರ್ವೇದ, ಯುನಾನಿ ವೈದ್ಯಪದ್ದತಿ ಮುಖೇನ ಆರೋಗ್ಯ ಸೇವೆ ಒದಗಿಸುತ್ತಿವೆ. ಹಾಗೂ ಆಯುಷ್ ಜಾಗೃತಿ ಹಾಗೂ ಮನೆಮದ್ದು ಕಾರ್ಯಕ್ರಮದ ಮೂಲಕ ರೋಗಗಳು ಬರದಂತೆ ಎಚ್ಚರ ವಹಿಸಲು ಅರಿವು ಮೂಡಿಸುತ್ತಿದೆ.

2) ಆಯುರ್ವೇದ ಆಸ್ಪತ್ರೆಗಳ ನಿರ್ವಹಣೆ:

ಜಿಲ್ಲೆಯಲ್ಲಿ 4 ಆಯುರ್ವೇದ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುತ್ತಿವೆ. ಈ ಎಲ್ಲಾ ಆಸ್ಪತ್ರೆಗಳಲ್ಲಿ ಪಂಚಕರ್ಮ ಚಿಕಿತ್ಸೆಯನ್ನು ನೀಡಿ ದೀರ್ಘ ಕಾಲೀನ ಖಾಯಿಲೆಗಳಾದ ಸಂಧಿವಾತ, ಶ್ವಾಸರೋಗ, ಶಿರೋರೋಗ, ಚರ್ಮರೋಗಗಳಿಗೆ ಊರ್ಧ್ವಜತ್ರುಗತ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆಯುಷ್ ಜಾಗೃತಿ ಕಾರ್ಯಕ್ರಮದ ಮೂಲಕ ರೋಗ ತಡೆಗಟ್ಟುವುದನ್ನು ತಿಳಿಸಲಾಗುತ್ತಿದೆ ಹಾಗೂ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಂಡ್ಯ ಇಲ್ಲಿ ಒಳರೋಗಿ ಗಳನ್ನು ದಾಖಲಿಸಿಕೊಳ್ಳುತ್ತಿರುವುದರಿಂದ 19 ಆಯುರ್ವೇದ ಚಿಕಿತ್ಸಾಲಯಗಳು ಮತ್ತು 3 ಆಯುಷ್ ಆಸ್ಪತ್ರೆ ಗಳಿಂದ ಹೆಚ್ಚಿನ ಚಿಕಿತ್ಸೆ ಅಗತ್ಯವಿರುವ ರೋಗಿಗೆ ಆಸ್ಪತ್ರೆಯ ಒಳರೋಗಿಯಾಗಿ ದಾಖಲಾಗುವಂತೆ ಸಲಹೆಯನ್ನು ನೀಡಿರುತ್ತಾರೆ.

3) ಔಷಧಿ ಸರಬರಾಜು:

2020–21ನೇ ಸಾಲಿಗಾಗಿ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಸರ್ಕಾರದಿಂದ ಅನುಮೋದನೆಗೊಂಡ 4ಜಿ ಸಂಸ್ಥೆಗಳ ಮುಖಾಂತರ ಒಟ್ಟು ರೂ.29.49ಲಕ್ಷ ಔಷಧಿಯನ್ನು ಖರೀಧಿಸಿ, ಜಿಲ್ಲೆಯ ಎಲ್ಲಾ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಉಚಿತವಾಗಿ ಒದಗಿಸಿ, ಕೇಂದ್ರ ಪುರಸ್ಕೃತ ಯೋಜನೆಯಡಿ ಔಷಧಿಗಳು ನಿರ್ದೇಶನಾಲಯದಿಂದ ಸರಬರಾಜು ಮಾಡಲಾಗುತ್ತಿದ್ದು, ರೋಗಿಗಳ ಚಿಕಿತ್ಸೆಗೆ ಉಚಿತವಾಗಿ ಉಪಯೋಗಿಸಲಾಗುತ್ತಿದೆ.

2020-21ನೇ ಸಾಲಿನಲ್ಲಿದ್ದಂತೆ ಜಿಲ್ಲಾ ಆಯುಷ್ ಕಛೇರಿ, ಮಂಡ್ಯ ವ್ಯಾಪ್ತಿಯ ಅಧಿಕಾರಿ/ ಸಿಬ್ಬಂದಿ ವರ್ಗದ ಮಾಹಿತಿ (ಮಾರ್ಚ್ – 2021 ರ ಅಂತ್ಯದವರೆಗೆ)								
ಕ್ರ. ಸ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಮಾಹಿತಿ			
					ಪುರುಷರು	ಮಹಿಳೆಯರು	ಪ.ಜಾತಿ	ಪ.ಪಂಗಡ
1	ಹಿರಿಯ ವೈದ್ಯರು (ಆಯುರ್ವೇದ)	3	2	1	–	2	–	–
2	ವೈದ್ಯಾಧಿಕಾರಿಗಳು (ಆಯುರ್ವೇದ)	24	21	3	7	14	4	1
3	ವೈದ್ಯಾಧಿಕಾರಿಗಳು (ಯುನಾನಿ)	4	3	1	1	2	1	–
4	ವೈದ್ಯಾಧಿಕಾರಿಗಳು (ಹೋಮಿಯೋಪತಿ)	1	–	1	–	–	–	–
5	ಸಹಾಯಕ ಆಡಳಿತಾಧಿಕಾರಿಗಳು	1	1	0	1	0	0	0
6	ಅಧೀಕ್ಷಕರು	1	1	0	1	–	–	–
7	ಪ್ರ.ದ.ಸ.	3	0	3	–	–	–	–
8	ಶುಶ್ರೂಷಕಿಯರು	9	2	7	–	2	1	–
9	ಔಷಧಿ ವಿತರಕರು	14	1	13	–	1	1	–
10	ಕಿ.ಮ.ಆ.ಸ.	7	–	7	–	–	–	–
11	ದ್ವಿ.ದ.ಸ	2	–	2	–	–	–	–
12	ಬೆರಳಚ್ಚುಗಾರರು	1	–	1	–	–	–	–
13	ಗ್ರೂಪ್ 'ಡಿ'	38	11	27	6	5	2	–
	ಒಟ್ಟು	108	42	66	16	26	9	1

ಕ್ರ ಸ	ಲೆಕ್ಕಶೀರ್ಷಿಕೆ	2020-21 ನೇ ಸಾಲಿನ ಆಯವ್ಯಯ ನಿಗಧಿ	ಜಿ.ಪಂ. ನಿಂದ ಬಿಡುಗಡೆ	ಒಟ್ಟು ವೆಚ್ಚ	ಉಳಿಕೆ ಅನುದಾನ
1	2210-00-101-0-29 ಭಾವೈಪ ಅಡಿಯಲ್ಲಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ಪ್ರಾರಂಭ ಮತ್ತುನಿರ್ವಹಣೆ	3,73,80,000	3,73,80,000	3,31,43,364	42,36,636
2	2210-00-101-0-35 ಭಾವೈಪ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯನುಧಾನ	92,83,000	92,83,000	86,01,128	6,81,872
3	2210-00-101-0-37 ಭಾವೈಪ ಆಸ್ಪತ್ರೆಗಳಿಗೆ ಔಷಧಿ ಮತ್ತು ರಾಸಾಯನಿಕಗಳು	30,00,000	30,00,000	29,48,560	51,440
4	2210-00-105-0-38 ಭಾವೈಪ ಕಟ್ಟಡಗಳು	-	-	–	–
5	2210-00-101-0-41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ	52,12,000	52,12,000	49,08,910	3,03,090
	ಒಟ್ಟು	**5,48,75,000**	**5,48,75,000**	**4,96,01,962**	**52,73,038**

ಎಸ್‌ಸಿಪಿ ಕಾರ್ಯಕ್ರಮಗಳು

ಕ್ರ. ಸಂ.	ಕಾರ್ಯಕ್ರಮಗಳು	ವಾರ್ಷಿಕ ಗುರಿ		ಸಾಧಿಸಿದ ಪ್ರಗತಿ		ಪರಿಶಿಷ್ಟ ಜಾತಿ ಫಲಾನುಭವಿಗಳ ಸಂಖ್ಯೆ		ಷರಾ
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಗುರಿ	ಸಾಧನೆ	–
1	ಆಯುಷ್ ಸೇವಾ ಗ್ರಾಮ (ಆಯುಷ್ ಅರಿವು ಸೇರಿದಂತೆ)	8	2.00	8	1.98	800	600	–
2	ವಸತಿ ನಿಲಯಗಳ ಮೇಲ್ವಿಚಾರಕರಿಗೆ ಪೌಷ್ಟಿಕ ಆಹಾರಗಳ ಅಳವಡಿಕೆ ಬಗ್ಗೆ ಆನ್‌ಲೈನ್ ತರಬೇತಿ	2	0.12	2	0.12	36	36	–
3	ವಿದ್ಯಾರ್ಥಿನಿಲಯಗಳ ಆವರಣಗಳಲ್ಲಿ ಆಯುಷ್ ಔಷಧಯುಕ್ತ	4	0.80	4	0.80	200	160	
	ಗಿಡಮೂಲಿಕಾ ಸಸ್ಯಗಳನ್ನು ಬೆಳೆಸುವುದು							–
4	ವಿದ್ಯಾರ್ಥಿಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಆಯುಷ್ ಔಷಧಗಳ ಕಿಟ್ ವಿತರಿಸುವುದು.	0	1.98	0	0	0	0	–
	ಒಟ್ಟು	14	4.90	14	2.90	1036	796	–

ಟಿಎಸ್‌ಪಿ ಕಾರ್ಯಕ್ರಮಗಳು

ಕ್ರ. ಸಂ.	ಕಾರ್ಯಕ್ರಮಗಳು	ವಾರ್ಷಿಕ ಗುರಿ		ಸಾಧಿಸಿದ ಪ್ರಗತಿ		ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಂಖ್ಯೆ		ಷರಾ
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಗುರಿ	ಸಾಧನೆ	ಮಕ್ಕಳು
1	ಆಯುಷ್ ಸೇವಾ ಗ್ರಾಮ (ಆಯುಷ್ ಅರಿವು ಸೇರಿದಂತೆ)	8	2.00	8	1.99	800	668	–
2	ವಸತಿ ನಿಲಯಗಳ ಮೇಲ್ವಿಚಾರಕರಿಗೆ ಪೌಷ್ಟಿಕ ಆಹಾರಗಳ ಅಳವಡಿಕೆ ಬಗ್ಗೆ ಆನ್‌ಲೈನ್ ತರಬೇತಿ	0	0	0	0	0	0	–
3	ವಿದ್ಯಾರ್ಥಿನಿಲಯಗಳ ಆವರಣಗಳಲ್ಲಿ ಆಯುಷ್ ಔಷಧಯುಕ್ತ ಗಿಡಮೂಲಿಕಾ ಸಸ್ಯಗಳನ್ನು ಬೆಳೆಸುವುದು	2	0.40	2	0.31	100	17	–
4	ವಿದ್ಯಾರ್ಥಿಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಆಯುಷ್ ಔಷಧಗಳ ಕಿಟ್ ವಿತರಿಸುವುದು.	0	1.09	0	0	0	0	–
	ಒಟ್ಟು	10	3.49	10	2.30	900	685	–

ವಾರ್ಷಿಕ ಆಡಳಿತ ವರದಿ 2020-21

ಸಮಾಜ ಕಲ್ಯಾಣ ಇಲಾಖೆ

ಪೀಠಿಕೆ:-

ಜಿಲ್ಲೆಯಲ್ಲಿನ ಒಟ್ಟು ಜನ ಸಂಖ್ಯೆ: 18,05,769
ಪರಿಶಿಷ್ಟ ಜಾತಿ ಜನಸಂಖ್ಯೆ: 2,65,294
ಪರಿಶಿಷ್ಟ ಪಂಗಡ ಜನಸಂಖ್ಯೆ: 22,402

1) ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
ಬಾಲಕರು-33,
ಬಾಲಕಿಯರು-13
ಒಟ್ಟು-46 ವಿದ್ಯಾರ್ಥಿ ನಿಲಯಗಳಲ್ಲಿ 2302-ಬಾಲಕರು, 1180-ಬಾಲಕಿಯರು ನಿಲಯದ ಸೌಲಭ್ಯ ಪಡೆದಿರುತ್ತಾರೆ.

2) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು
ಬಾಲಕರು-11
ಬಾಲಕಿಯರು-10
ಒಟ್ಟು-21 ವಿದ್ಯಾರ್ಥಿ ವಸತಿ ನಿಲಯಗಳಲ್ಲಿ 1105-ಬಾಲಕರು ಮತ್ತು 982-ಬಾಲಕಿಯರು ನಿಲಯದ ಸೌಲಭ್ಯ ಪಡೆದಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆ

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ: 2225-00-101-0-27

ಈ ಲೆಕ್ಕಶೀರ್ಷಿಕೆಯಡಿ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಿಗದಿತ ದರಗಳಲ್ಲಿ ಕಾಲೇಜು ಶುಲ್ಕ ಹಾಗೂ ನಿರ್ವಹಣೆ ವೆಚ್ಚ ಮಂಜೂರು ಮಾಡಲಾಗುವುದು. 2020-21ನೇ ಸಾಲಿನಲ್ಲಿ ರೂ.725.00ಲಕ್ಷ ಅನುದಾನ ನಿಗಧಿಯಾಗಿದ್ದು, ಪೂರ್ಣ ಬಿಡುಗಡೆಯಾಗಿದ್ದು, ರೂ.725.00ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 4820 ಆಗಿದ್ದು, ಪೂರ್ಣ ಸಾಧನೆಯಾಗಿರುತ್ತದೆ.

2) ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳು: 2225-00-101-0-29

ಈ ಲೆಕ್ಕಶೀರ್ಷಿಕೆಯಡಿ ಒಟ್ಟು 21 ಕಾಲೇಜು ವಿದ್ಯಾರ್ಥಿನಿಲಯಗಳ ಸಿಬ್ಬಂದಿ ವೇತನ ನಿಲಯಗಳ ಕಟ್ಟಡ ಬಾಡಿಗೆ, ವಿದ್ಯುತ್ ಮತ್ತು ಇತರೆ ನಿರ್ವಹಣಾ ವೆಚ್ಚಗಳ ಬಾಬ್ತು ಭರಿಸಲಾಗುತ್ತಿದೆ. 2020-21 ನೇ ಸಾಲಿನಲ್ಲಿ ರೂ.497.49ಲಕ್ಷ ಅನುದಾನ ನಿಗಧಿಯಾಗಿದ್ದು, ರೂ.130.97ಲಕ್ಷಗಳು ಹೆಚ್ಚುವರಿಯಾಗಿ ಬಿಡುಗಡೆ ಯಾಗಿರುವುದರಿಂದ ಒಟ್ಟಾರೆ ರೂ.628.46ಲಕ್ಷಗಳು ನಿಗಧಿಯಾಗಿರುತ್ತದೆ ರೂ.621.00ಲಕ್ಷ ಅನುದಾನ ವೆಚ್ಚವಾಗಿರುತ್ತದೆ.

3) ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಹಣೆ: 2225-00-101-0-30

ಈ ಶೀರ್ಷಿಕೆಯಡಿ 1 ಜಿಲ್ಲಾ ಕಛೇರಿ ಹಾಗೂ 7 ತಾಲ್ಲೂಕು ಕಛೇರಿಗಳ ಸಾದಿಲ್ವಾರು, ಲೇಖನ ಸಾಮಾಗ್ರಿ, ಕಛೇರಿ ದೂರವಾಣಿ, ವಿದ್ಯುತ್, ಕಟ್ಟಡದ ಬಾಡಿಗೆ ವಾಹನದ ಡೀಸೆಲ್ ಸೇರಿದಂತೆ ಎಲ್ಲಾ ಸಾದಿಲ್ವಾರು ವೆಚ್ಚಗಳಿಗಾಗಿ ಭರಿಸಲಾಗುತ್ತಿದೆ. 2020-21ನೇ ಸಾಲಿನಲ್ಲಿ ರೂ.326.20ಲಕ್ಷ ಅನುದಾನ ನಿಗಧಿಯಾಗಿದ್ದು, ರೂ.15.37 ಲಕ್ಷಗಳು ಹೆಚ್ಚುವರಿಯಾಗಿ ಬಿಡುಗಡೆಯಾಗಿರುವುದರಿಂದ ಒಟ್ಟಾರೆ ರೂ.341.57ಲಕ್ಷ ನಿಗಧಿಯಾಗಿರುತ್ತದೆ, ಒಟ್ಟು ಆರ್ಥಿಕ ರೂ.324.0 ಲಕ್ಷ ವೆಚ್ಚ ಮಾಡಲಾಗಿದೆ.

4) ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯಿತಿಗಳು ಶ್ರೇಷ್ಠತೆ ಪಡೆದ ವಿದ್ಯಾರ್ಥಿಗಳಿಗೆ ಸಹಾಯಧನ: 2225-00-101-0-37

ಪಿ.ಯು.ಸಿ. ಪದವಿ ಮತ್ತು ಸ್ನಾತಕೋತ್ತರ ಪದವಿ ಮತ್ತು ಇತರೆ ಕೋರ್ಸ್‌ಗಳಲ್ಲಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.60ರಷ್ಟು ಅಥವಾ ಹೆಚ್ಚು ಅಂಕಗಳಿಸಿದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನಗದು ಬಹುಮಾನ ವಿತರಣೆ ಮಾಡಲಾಗುತ್ತಿದೆ. ಪಿ.ಯು.ಸಿ. ರೂ.20,000/-, ಪದವಿ-25,000/- ಸ್ನಾತಕೋತ್ತರ-30,000/- ತಾಂತ್ರಿಕ, ವೈದ್ಯಕೀಯ, ಕೃಷಿ ಮತ್ತು ಪಶು ವೈದ್ಯಕೀಯ ರೂ.35,000/-ರಂತೆ ಮಂಜೂರು ಮಾಡಲಾಗುತ್ತಿದೆ. 2020-21ನೇ ಸಾಲಿನಲ್ಲಿ ರೂ.235.50ಲಕ್ಷ ಅನುದಾನ ನಿಗಧಿಯಾಗಿದ್ದು, ಪೂರ್ಣ ಬಿಡುಗಡೆಯಾಗಿದ್ದು, ರೂ.235.50ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 990 ಆಗಿದ್ದು, 996 ಸಾಧನೆಯಾಗಿರುತ್ತದೆ.

5) ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ: 2225–00–101–0–42

ಈ ಶೀರ್ಷಿಕೆಯಲ್ಲಿ ಇಲಾಖೆಯ ಅನುಮೋದಿತ ಖಾಸಗಿ ಸಂಘ ಸಂಸ್ಥೆಗಳು ನಡೆಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಮಂಜೂರು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.5.00ಲಕ್ಷ ಅನುದಾನ ನಿಗಧಿಯಾಗಿದ್ದು, ಪೂರ್ಣ ಬಿಡುಗಡೆಯಾಗಿದ್ದು, ಕೋವಿಡ್–19ರ ಸಾಂಕ್ರಮಿಕ ವೈರಸ್‌ನಿಂದಾಗಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸದೆ ಇರುವುದರಿಂದ ಅನುದಾನ ವೆಚ್ಚವಾಗದೆ ಉಳಿಕೆಯಾಗಿರುತ್ತದೆ.

6) ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಪುಸ್ತಕ: 2225–00–102–0–08

ತಾಂತ್ರಿಕ ವಿದ್ಯಾಲಯಗಳಲ್ಲಿನ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಯೋಜನೆಯಲ್ಲಿ ತಾಂತ್ರಿಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಗ್ರಂಥಾಲಯ ಪುಸ್ತಕಗಳನ್ನು ವಿತರಿಸಲು ಅನುಕೂಲವಾಗುವಂತೆ ಪುಸ್ತಕಗಳನ್ನು ಸರಬರಾಜು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿಯಲ್ಲಿ ರೂ.2.00ಲಕ್ಷ ಅನುದಾನ ನಿಗದಿಯಾಗಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ.

7) ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ: 2225–00–102–0–31.

ಈ ಲೆಕ್ಕಶೀರ್ಷಿಕೆಯಡಿ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಿಗದಿತ ದರಗಳಲ್ಲಿ ಕಾಲೇಜು ಶುಲ್ಕ ಹಾಗೂ ನಿರ್ವಹಣೆ ವೆಚ್ಚ ಮಂಜೂರು ಮಾಡಲಾಗುವುದು. 2020–21ನೇ ಸಾಲಿನಲ್ಲಿ ರೂ.55.00ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಪೈಕಿ ರೂ.55.00ಲಕ್ಷ ಬಿಡುಗಡೆಯಾಗಿದ್ದು, ರೂ.54.85 ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 500 ಆಗಿದ್ದು, 225 ಸಾಧನೆಯಾಗಿರುತ್ತದೆ.

8) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು: 2225–00–102–0–33

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ಶಿಕಾರಿಪುರ ಇಲ್ಲಿ ಒಂದು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಸಿಬ್ಬಂದಿ ವೇತನ, ನಿಲಯದ ಕಟ್ಟಡ ಬಾಡಿಗೆ, ವಿದ್ಯುತ್ ಮತ್ತು ಇತರೆ ವೆಚ್ಚಗಳ ಬಾಬ್ತು ಭರಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.24.52ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಪೈಕಿ ರೂ.23.58ಲಕ್ಷ ಬಿಡುಗಡೆಯಾಗಿದ್ದು, ರೂ.22.16ಲಕ್ಷ ಅನುದಾನ ವೆಚ್ಚವಾಗಿರುತ್ತದೆ.

9) ಪರಿಶಿಷ್ಟ ವರ್ಗ ನಿವಾಸಿ ಶಾಲೆಗಳು (ಆಶ್ರಮ ಶಾಲೆ): 2225–00–102–0–35

ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕು ಶಿವಾರಕಾಲೋನಿ ಇಲ್ಲಿ ಒಂದು ಆಶ್ರಮ ಶಾಲೆಯನ್ನು ನಡೆಸಲಾಗುತ್ತಿದೆ. ಸಿಬ್ಬಂದಿ ವೇತನ, ನಿಲಯದ ಕಟ್ಟಡ ಬಾಡಿಗೆ, ವಿದ್ಯುತ್ ಮತ್ತು ಇತರೆ ವೆಚ್ಚಗಳ ಬಾಬ್ತು ಭರಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.18.83ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಪೈಕಿ ರೂ.18.32ಲಕ್ಷ ಬಿಡುಗಡೆ ಯಾಗಿದ್ದು, ರೂ.7.60ಲಕ್ಷ ಅನುದಾನ ವೆಚ್ಚವಾಗಿರುತ್ತದೆ.

10) ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಆರ್ಥಿಕ ಸಹಾಯ: 2225–00–102–0–38

ಪಿ.ಯು.ಸಿ. ಪದವಿ, ಇತರೆ ಕೋರ್ಸ್‌ಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ, ಪಿ.ಯು.ಸಿ.ಯವರಿಗೆ 20,000/– ಪದವಿಯವರಿಗೆ 25,000/– ಸ್ಥಾನಕೊತ್ತರ ಪದವಿಯವರಿಗೆ 30,000/– ಬಿ.ಇ. ಎಂಬಿಬಿ.ಎಸ್ ನವರಿಗೆ 35,000/– ರಂತೆ ಮಂಜೂರು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.45.00ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಪೈಕಿ ರೂ.45.00ಲಕ್ಷ ಬಿಡುಗಡೆಯಾಗಿದ್ದು, ರೂ.45.00 ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 167 ಆಗಿದ್ದು, 100 ಸಾಧನೆಯಾಗಿರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1) ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು: 2225–00–101–0–75

ಈ ಶೀರ್ಷಿಕೆಯಡಿ ಮಹಿಳಾ ಕಲ್ಯಾಣ ಕೇಂದ್ರಗಳ ಸಂಚಾಲಕಿಯರ ಮತ್ತು ನಿರ್ವಾಹಕಿಯರ ವೇತನ ಬಾಬ್ತಿಗೆ ಉಪಯೋಗಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.5.18ಲಕ್ಷ ಅನುದಾನ ನಿಗದಿಯಾಗಿದ್ದು, ಈ ಪೈಕಿ ರೂ.4.69ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.4.58ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 1 ಆಗಿದ್ದು 1 ಸಾಧನೆಯಾಗಿರುತ್ತದೆ.

2) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ: 2225–00–101–0–02

ಮೆಟ್ರಿಕ್ ನಂತರದ ತರಗತಿ/ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿವೇತನ ಮಂಜೂರಾತಿ ಮಾಡಲು ವೆಚ್ಚ ಭರಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿಯಲ್ಲಿ ಅನುದಾನ ನಿಗದಿಯಾಗಿರುವುದಿಲ್ಲ ಆದಾಗ್ಯೂ ರೂ.88.10ಲಕ್ಷ ಅನುದಾನ ಬಿಡುಗಡೆ ಯಾಗಿದ್ದು, ರೂ.88.10ಲಕ್ಷ ವೆಚ್ಚವಾಗಿರುತ್ತದೆ.

3) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು: 2225–00–101–0–61

ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ಸಿಬ್ಬಂದಿ ವೇತನ, ನಿಲಯಗಳ ಕಟ್ಟಡ ಬಾಡಿಗೆ, ವಿದ್ಯುತ್ ಆಹಾರ, ಸಮವಸ್ತ್ರ ಖರೀದಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು 2020–21ನೇ ಸಾಲಿನಲ್ಲಿ ರೂ.1347.40ಲಕ್ಷ ಅನುದಾನ ನಿಗಧಿ ಯಾಗಿದ್ದು, ಈ ಪೈಕಿ ರೂ.1277.38ಲಕ್ಷ ಬಿಡುಗಡೆಯಾಗಿದ್ದು, ರೂ.983.41ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 46 ಆಗಿದ್ದು, 46 ಸಾಧನೆಯಾಗಿರುತ್ತದೆ.

4) ಹೆಚ್ಚಿನ ಊಟ ಮತ್ತು ವಸತಿ ವೆಚ್ಚ: 2225–00–101–0–65

ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸುತ್ತಿರುವ ಕಾಲೇಜು ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಹೆಚ್ಚುವರಿ ಯೋಜನಾ ವೆಚ್ಚ ವಸತಿ ಮಂಜೂರಾತಿಗಾಗಿ ಭರಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ಈ ಶಿರ್ಷಿಕೆಯಡಿಯಲ್ಲಿ ರೂ.175.00ಲಕ್ಷ ಅನುದಾನ ನಿಗದಿಯಾಗಿದ್ದು, ಈ ಪೈಕಿ ರೂ.112.27ಲಕ್ಷ ಬಿಡುಗಡೆ ಯಾಗಿದ್ದು, ರೂ.112.27ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 2351 ಆಗಿದ್ದು 2330 ಸಾಧನೆ ಯಾಗಿರುತ್ತದೆ.

5) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ: 2225–00–101–0–68

ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.250/–ರಂತೆ, 6 ಮತ್ತು 7ನೇ ತರಗತಿ ಬಾಲಕ ರೂ.250/–ರಂತೆ ಮತ್ತು ಬಾಲಕಿಯರಿಗೆ ರೂ.350/–ರಂತೆ, 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಬಾಲಕರಿಗೆ ರೂ.500/–ರಂತೆ ಬಾಲಕಿಯರಿಗೆ ರೂ.700/–ರಂತೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.100.00ಲಕ್ಷ ಅನುದಾನ ನಿಗದಿಯಾಗಿದ್ದು, ಈ ಪೈಕಿ ರೂ.100.00ಲಕ್ಷ ಬಿಡುಗಡೆಯಾಗಿದ್ದು, ರೂ.100.00 ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 8417 ಆಗಿದ್ದು, 8417 ಸಾಧನೆಯಾಗಿರುತ್ತದೆ.

6) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಇತರೆ ರಿಯಾಯಿತಿಗಳು: 2225–00–101–0–80

ಕಾನೂನು ಪದವಿ ಪಡೆದು ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಅಗತ್ಯ ಪುಸ್ತಕ ಗಳನ್ನು ಸರಬರಾಜು ಮಾಡಲು ಉಪಯೋಗಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ರೂ.6.85ಲಕ್ಷ ಅನುದಾನ ನಿಗದಿಯಾಗಿದ್ದು, ಪೂರ್ಣ ಬಿಡುಗಡೆಯಾಗಿದ್ದು, ರೂ.6.00ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 10 ಆಗಿದ್ದು 10 ಸಾಧನೆಯಾಗಿರುತ್ತದೆ.

7) ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ: 2225–00–102–0–07

ಮೆಟ್ರಿಕ್ ನಂತರದ ತರಗತಿ/ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಮಂಜೂರಾತಿ ಮಾಡಲು ವೆಚ್ಚ ಭರಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿಯಲ್ಲಿ ರೂ.114.00ಲಕ್ಷ ಅನುದಾನ ನಿಗದಿಯಾಗಿದ್ದು, ಈ ಪೈಕಿ ರೂ.79.11ಲಕ್ಷ ಬಿಡುಗಡೆಯಾಗಿದ್ದು, ರೂ.79.11ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 1140 ಆಗಿದ್ದು, 1140 ಸಾಧನೆ ಯಾಗಿರುತ್ತದೆ.

8) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ: 2225–00–102–0–09

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (9 ಮತ್ತು 10ನೇ ತರಗತಿ) ಕೇಂದ್ರ ಪುರಸ್ಕೃತ ಯೋಜನೆಗೆ ಮಂಜೂರಾತಿ ಮಾಡಲು ವೆಚ್ಚ ಭರಿಸಲಾಗುತ್ತಿದೆ. 2020–21 ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿಯಲ್ಲಿ ರೂ.6.00ಲಕ್ಷ ಅನುದಾನ ನಿಗದಿಯಾಗಿದ್ದು ರೂ.4.27ಲಕ್ಷ ಅನುದಾನ ಬಿಡುಗಡೆ ಯಾಗಿದ್ದು, ರೂ.4.27ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 252 ಆಗಿದ್ದು, 252 ಸಾಧನೆ ಯಾಗಿರುತ್ತದೆ.

9) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ: 2225–00–102–0–68

ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.250/–ರಂತೆ, 6 ಮತ್ತು 7ನೇ ತರಗತಿ ಬಾಲಕ ರೂ.250/–ರಂತೆ ಮತ್ತು ಬಾಲಕಿಯರಿಗೆ ರೂ.350/–ರಂತೆ, 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಬಾಲಕರಿಗೆ ರೂ.500/–ರಂತೆ ಬಾಲಕಿಯರಿಗೆ ರೂ.700/–ರಂತೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿಯಲ್ಲಿ ರೂ.16.24ಲಕ್ಷ ಅನುದಾನ ನಿಗದಿಯಾಗಿದ್ದು, ಪೂರ್ಣ ಬಿಡುಗಡೆಯಾಗಿದ್ದು, ರೂ.11.54ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಭೌತಿಕ ಗುರಿ 421 ಆಗಿದ್ದು 299 ಸಾಧನೆಯಾಗಿರುತ್ತದೆ.

ವಾರ್ಷಿಕ ಆಡಳಿತ ವರದಿ 2020–21

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು: (ಜಿಲ್ಲಾವಲಯ)

1. ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ : 2225–00–103–0–26

2020–21ನೇ ಸಾಲಿನ ವೇತನಕ್ಕೆ ರೂ.1089.37ಲಕ್ಷ ನಿಗದಿಯಾಗಿದ್ದು ರೂ.1047.73ಲಕ್ಷಗಳು ಬಿಡುಗಡೆ ಆಗಿರುತ್ತದೆ ಹಾಗೂ ವೇತನೇತರ ಬಾಬ್ತಿಗೆ ರೂ.1851.76ಲಕ್ಷಗಳು ಒಟ್ಟು ರೂ.2899.49ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ವೇತನ ಬಾಬ್ತಿನಲ್ಲಿ ರೂ.951.37 ಲಕ್ಷಗಳು ಹಾಗೂ ವೇತನೇತರ ಬಾಬ್ತನಲ್ಲಿ ರೂ.1838.46ಲಕ್ಷಗಳು ಸೇರಿ ರೂ.2789.83ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ. ಇದರಿಂದ 9091 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ಶುಲ್ಕ ವಿನಾಯಿತಿ : 2225–00–103–0–28

2020–21ನೇ ಸಾಲಿಗೆ ರೂ.1593.63ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ರೂ.1596.63ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ.

3. ಕಾರ್ಯನಿರ್ವಾಹಕ ಸಿಬ್ಬಂದಿ : 2225–00–103–0–39

2020–21ನೇ ಸಾಲಿನ ವೇತನ ಬಾಬ್ತಿಗೆ ರೂ.64.86ಲಕ್ಷ ನಿಗದಿಯಾಗಿದ್ದು, ರೂ.67.72ಲಕ್ಷಗಳು ಬಿಡುಗಡೆಯಾಗಿರುತ್ತದೆ ಹಾಗೂ ವೇತನೇತರ ಬಾಬ್ತಿಗೆ ರೂ.10.00ಲಕ್ಷಗಳು ಒಟ್ಟು ರೂ.77.72ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚಿ–2021ರ ಮಾಹೆಯ ಅಂತ್ಯಕ್ಕೆ ವೇತನ ಬಾಬ್ತಿನಲ್ಲಿ ರೂ.67.70ಲಕ್ಷಗಳು ಹಾಗೂ ವೇತನೇತರದಲ್ಲಿ ರೂ.8.14ಲಕ್ಷಗಳು ಒಟ್ಟು 75.84ಲಕ್ಷ ರೂ ಅನುದಾನ ವೆಚ್ಚ ವಾಗಿರುತ್ತದೆ.

4. ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆ : 2225–00–103–0–40

2020–21ನೇ ಸಾಲಿಗೆ ಇಲಾಖಾ ಸ್ವಂತ ಕಟ್ಟಡಗಳನ್ನು ದುರಸ್ಥಿ ಪಡಿಸುವ ಸಂಬಂಧ ರೂ.53.19 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ 22 ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ರೂ.53.198ಲಕ್ಷಗಳ ವೆಚ್ಚದಲ್ಲಿ ದುರಸ್ಥಿ ಪಡಿಸಲಾಗಿದೆ.

5. ಆಶ್ರಮ ಶಾಲೆಗಳ ನಿರ್ವಹಣೆ : 2225–00–103–0–41

2020–21ನೇ ಸಾಲಿಗೆ ವೇತನೇತರ ಬಾಬ್ತಿಗೆ ರೂ.14.30ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ವೇತನೇತರ ಬಾಬ್ತಿನಲ್ಲಿ ರೂ.14.30ಲಕ್ಷಗಳ ಅನುದಾನ ಖರ್ಚಾಗಿರುತ್ತದೆ. ಇದರಿಂದ 18 ವಿದ್ಯಾರ್ಥಿಗಳು ಹಾಗೂ 2 ಹೊರ ಸಂಪನ್ಮೂಲ ಸಿಬ್ಬಂದಿಗಳು ಪ್ರಯೋಜನ ಪಡೆದಿರುತ್ತಾರೆ.

6. ಡಿ.ದೇವರಾಜ ಅರಸುರವರ ಜನ್ಮ ದಿನಾಚರಣೆ : 2225–00–103–0–56

2020–21ನೇ ಸಾಲಿಗೆ ರೂ.1.00ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಡಿ.ದೇವರಾಜ ಅರಸು ರವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಆಚರಣೆಗೆ ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ರೂ.0.27ಲಕ್ಷಗಳ ಅನುದಾನ ಖರ್ಚಾಗಿರುತ್ತದೆ.

7. ವಕೀಲರಿಗೆ ಶಿಷ್ಯವೇತನ : 2225–00–103–0–58

2020–21ನೇ ಸಾಲಿಗೆ ರೂ.19.20ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ರೂ.15.10ಲಕ್ಷಗಳ ಅನುದಾನ ಖರ್ಚಾಗಿರುತ್ತದೆ. ಇದರಿಂದ 40 ಅಭ್ಯರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1. ಅನಾಥಾಲಯಗಳಿಗೆ ಸಹಾಯಧನ : 2225–00–103–0–73

2020–21ನೇ ಸಾಲಿಗೆ ವೇತನೇತರ ರೂ.26.40ಲಕ್ಷ ಬಿಡುಗಡೆಯಾಗಿದ್ದು, ಮಾರ್ಚಿ 2021ರ ಮಾಹೆಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎರಡು ಅನಾಥಾಲಯಗಳ ಅನಾಥ ಮಕ್ಕಳ ಆಹಾರ ವೆಚ್ಚಕ್ಕಾಗಿ ರೂ.26.40ಲಕ್ಷಗಳ ಅನುದಾನವು ವೆಚ್ಚವಾಗಿರುತ್ತದೆ. ಇದರಿಂದ 275 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ : 2225–00–103–0–74

2020–21ನೇ ಸಾಲಿಗೆ ವೇತನಕ್ಕೆ ರೂ.2.21ಲಕ್ಷಗಳು ನಿಗದಿಯಾಗಿದ್ದು ರೂ.3.97ಲಕ್ಷಗಳು ಬಿಡುಗಡೆಯಾಗಿರುತ್ತದೆ ಹಾಗೂ ವೇತನೇತರ ಬಾಬ್ತಿಗೆ ರೂ.12.27ಲಕ್ಷಗಳು ಸೇರಿ ಒಟ್ಟು ರೂ.16.24 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಮಾರ್ಚ್–2021ರ ಅಂತ್ಯಕ್ಕೆ 2 ಅಧಿಕಾರಿಗಳ ವೇತನಕ್ಕೆ ರೂ.3.67ಲಕ್ಷಗಳು ಹಾಗೂ ಏಳು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯ ವೆಚ್ಚಕ್ಕಾಗಿ ರೂ.11.59ಲಕ್ಷಗಳು ಒಟ್ಟು ರೂ.15.26ಲಕ್ಷಗಳ ಅನುದಾನವು ವೆಚ್ಚವಾಗಿರುತ್ತದೆ.

ವಾರ್ಷಿಕ ಆಡಳಿತ ವರದಿ 2020–21

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಎಲ್ಲಾ ಅಲ್ಪಸಂಖ್ಯಾತರ ಜನಾಂಗದವರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮಾನತೆಯೊಂದಿಗೆ ಪ್ರಗತಿಪರ ಜೀವನ ನಡೆಸುವ ದೃಷ್ಟಿಯಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಕಛೇರಿಯಲ್ಲಿ ಒಬ್ಬ ಗ್ರೂಪ್–ಬಿ. ದರ್ಜೆಯ ಅಧಿಕಾರಿ, 3 'ಸಿ' ಗ್ರೂಪ್ ಸಿಬ್ಬಂದಿಗಳು ಹಾಗೂ 1 ಗ್ರೂಪ್ "ಡಿ" ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿನಾಂಕ 01.12.2013ರಿಂದ ಜಿಲ್ಲಾ ಮಾಹಿತಿ ಕೇಂದ್ರ ಪ್ರಾರಂಭಿಸಿದ್ದು, ಇದರಲ್ಲಿ 2 ಜನ ಸಿಬ್ಬಂದಿಗಳು ಹಾಗೂ 1.01.2017 ರಿಂದ 6 ತಾಲ್ಲೂಕು ಮಾಹಿತಿ ಕೇಂದ್ರ ಗಳನ್ನು ಪ್ರಾರಂಭಿಸಲಾಗಿದ್ದು ಇದರಲ್ಲಿ 12 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 21 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 5 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ, 1 ಸರ್ಕಾರಿ ಮುಸ್ಲಿಂ ವಸತಿ ಶಾಲೆ, 1 ಅಲ್ಪಸಂಖ್ಯಾತರ ನವೋದಯ ಮಾದರಿ ವಸತಿ ಶಾಲೆ, ಮತ್ತು 2 ಮೌಲಾನ ಅಜಾದ್ ಮಾದರಿ ಶಾಲೆಗಳು (ಆಂಗ್ಲ ಮಾಧ್ಯಮ) ಕಾರ್ಯನಿರ್ವಹಿಸುತ್ತಿವೆ. ವಸತಿ ಶಾಲೆ/ಕಾಲೇಜುಗಳಲ್ಲಿ ಪ್ರಾಂಶುಪಾಲರು, ನಿಲಯಪಾಲಕರು, ಶಿಕ್ಷಕರು ಹಾಗೂ ಅಡುಗೆಯವರು/ಅಡುಗೆ ಸಹಾಯಕರು/ಕಾವಲುಗಾರರು, ನರ್ಸ್‌ಗಳು ಸೇರಿದಂತೆ ಖಾಯಂ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯಗಳನ್ನು ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

1. ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ನಿರ್ವಹಣೆ (ಜಿಲ್ಲಾ ವಲಯ)
2. ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ಶಿಷ್ಯವೇತನ ನೀಡಿಕೆ. (ಜಿಲ್ಲಾ ವಲಯ)
3. ಕಾರ್ಯಕಾರಿ ಸಿಬ್ಬಂದಿ, ಹೊರಗುತ್ತಿಗೆ ನೌಕರರ ವೇತನ ಹಾಗೂ ಕಛೇರಿ ನಿರ್ವಹಣೆ (ಜಿಲ್ಲಾ ವಲಯ)
4. ವಸತಿ ಶಾಲೆಗಳ ನಿರ್ವಹಣೆ (ರಾಜ್ಯ ವಲಯ)
5. ನಿರ್ದೇಶನ ಮತ್ತು ಆಡಳಿತ ಅಲ್ಪಸಂಖ್ಯಾತರ ನೋಡಲ್ ಕೇಂದ್ರ(ರಾಜ್ಯ ವಲಯ)
6. ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಉತ್ತೇಜನ (ರಾಜ್ಯ ವಲಯ)
7. ಅಲ್ಪಸಂಖ್ಯಾತರ ಪಿ.ಹೆಚ್.ಡಿ/ಎಂ.ಪಿಲ್. ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ (ರಾಜ್ಯ ವಲಯ)
8. ಮೌಲಾನಾ ಆಜಾದ್ ಶಾಲೆ ನಿರ್ವಹಣೆ(ರಾಜ್ಯ ವಲಯ)
9. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ ಸಂಕೀರ್ಣ ಮೌಲಾನಾ ಅಜಾದ್ ಭವನ ನಿರ್ಮಾಣಕ್ಕೆ ಅನುದಾನ(ರಾಜ್ಯ ವಲಯ)

ಜಿಲ್ಲಾ ವಲಯ ಯೋಜನೆಗಳು:–

* **ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:–** 2020–21ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಯಡಿ ರೂ.**131.04** ಲಕ್ಷಗಳನ್ನು ಒದಗಿಸಲಾಗಿದ್ದು, ರೂ.130.81ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಒಟ್ಟು ರೂ.**108.67**ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿದೆ. ಇದರಿಂದ ಒಟ್ಟು **237** ವಿದ್ಯಾರ್ಥಿಗಳು/ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಒಟ್ಟು 5 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿದ್ದು. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.**1600**/–ರಂತೆ ಉಚಿತ ಊಟ, ವಸತಿ, ಗ್ರಂಥಾಲಯ ಸೌಲಭ್ಯ, ಇತ್ಯಾದಿ ಸೌಲಭ್ಯಗಳನ್ನು ನೀಡಲಾಗಿದೆ.

* **ಅಲ್ಪಸಂಖ್ಯಾತ ವರ್ಗದ ಕಾನೂನು ಪದವೀಧರರಿಗೆ ಶಿಷ್ಯವೇತನ ನೀಡಿಕೆ:–** 2020–21ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಯಡಿ ರೂ.**1.50**ಲಕ್ಷಗಳನ್ನು ಒದಗಿಸಲಾಗಿದ್ದು, ರೂ.**1.50**ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಒಟ್ಟು ರೂ.0.45ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿದೆ. ಮಾಹೆಯಾನ ರೂ.**5,000**/–ದಂತೆ ಶಿಷ್ಯ ವೇತನ ನೀಡಲಾಗಿದ್ದು 01 ಜನ ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ.

* **ಕಾರ್ಯಕಾರಿ ಸಿಬ್ಬಂದಿ, ಹೊರಗುತ್ತಿಗೆ ನೌಕರರ ವೇತನ ಹಾಗೂ ಕಛೇರಿ ನಿರ್ವಹಣೆ** :– 2020–21ನೇ ಸಾಲಿನಲ್ಲಿ ಕಾರ್ಯಕಾರಿ ಸಿಬ್ಬಂದಿ, ಹೊರಗುತ್ತಿಗೆ ನೌಕರರ ವೇತನ ಹಾಗೂ ಕಛೇರಿ ನಿರ್ವಹಣೆ ವೆಚ್ಚಕ್ಕಾಗಿ ಒಟ್ಟು ರೂ.26.89ಲಕ್ಷಗಳನ್ನು ಅನುದಾನ ಒದಗಿಸಲಾಗಿದ್ದು, ರೂ.26.89ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಒಟ್ಟು ರೂ.26.11 ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿದೆ.

ರಾಜ್ಯ ವಲಯ ಯೋಜನೆಗಳು:–

* **ವಸತಿ ಶಾಲೆಗಳ ನಿರ್ವಹಣೆ:–** 2020–21ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ನಿರ್ವಹಣೆಗಾಗಿ ರೂ.57.14ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ರೂ.55.44ಲಕ್ಷ ಅನುದಾನ ಖರ್ಚಾಗಿದ್ದು, 280 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

* **ನಿರ್ದೇಶನ ಮತ್ತು ಆಡಳಿತ ಅಲ್ಪಸಂಖ್ಯಾತರ ನೋಡಲ್ ಕೇಂದ್ರ:–** ಈ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 7 ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಅಲ್ಪಸಂಖ್ಯಾತರಿಗೆ ಇರುವ ಸೌಲಭ್ಯಗಳ ಕುರಿತು ಮಾಹಿತಿ ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತವೆ. ಈ ಯೋಜನೆಗಾಗಿ 2020–21ನೇ ಸಾಲಿನಲ್ಲಿ ರೂ.36.68ಲಕ್ಷ ಅನುದಾನ ಬಿಡುಗಡೆ ಯಾಗಿದ್ದು, ರೂ.36.65ಲಕ್ಷ ಅನುದಾನ ಖರ್ಚಾಗಿರುತ್ತದೆ.

* **ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಉತ್ತೇಜನ:–** ಈ ಯೋಜನೆಯಡಿ ಬಿಎಡ್/ಡಿಎಡ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.25,000/–ಗಳನ್ನು ವಿಶೇಷ ಪ್ರೋತ್ಸಾಹ ಧನವಾಗಿ ನೀಡಲಾಗುವುದು. 2020–21ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.9.25ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.9.25ಲಕ್ಷ ಅನುದಾನ ಖರ್ಚಾಗಿರುತ್ತದೆ. ಸದರಿ ಯೋಜನೆಯಡಿ 37 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

* **ಅಲ್ಪಸಂಖ್ಯಾತರ ಪಿ.ಹೆಚ್.ಡಿ/ಎಂ.ಫಿಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:–** ಈ ಯೋಜನೆಯಡಿ ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ 1 ವರ್ಷಕ್ಕೆ ರೂ.1.00ಲಕ್ಷದಂತೆ 03 ವರ್ಷದವರೆಗೆ ಹಾಗೂ ಎಂ.ಫಿಲ್. ವಿದ್ಯಾರ್ಥಿಗಳಿಗೆ 1 ವರ್ಷಕ್ಕೆ ರೂ.1.00ಲಕ್ಷದಂತೆ 2 ವರ್ಷದವರೆಗೆ ಫೆಲೋಷಿಪ್ ನೀಡಲಾಗುವುದು. ಈ ಯೋಜನೆಯಡಿ 2020–21ನೇ ಸಾಲಿನಲ್ಲಿ ರೂ.1.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.1.00ಲಕ್ಷ ಅನುದಾನ ಖರ್ಚಾಗಿರುತ್ತದೆ. 2020–21ನೇ ಸಾಲಿನಲ್ಲಿ ಈ ಯೋಜನೆಯಡಿ 1 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

* **ಮೌಲಾನಾ ಆಜಾದ್ ಶಾಲೆ ನಿರ್ವಹಣೆ:–** ಮಂಡ್ಯ ಜಿಲ್ಲೆಯಲ್ಲಿ ಒಟ್ಟು 2 ಮೌಲಾನಾ ಆಜಾದ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಗಳ ನಿರ್ವಹಣೆಗೆ ಹಾಗೂ ಅತಿಥಿ ಶಿಕ್ಷಕರ ವೇತನಕ್ಕಾಗಿ 2020–21ನೇ ಸಾಲಿನಲ್ಲಿ ಒಟ್ಟು ರೂ.21.46ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನದಲ್ಲಿ ರೂ.19.95ಲಕ್ಷಗಳ ಅನುದಾನ ಖರ್ಚಾಗಿರುತ್ತದೆ.

* **ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ ಸಂಕೀರ್ಣ ಮೌಲಾನಾ ಅಜಾದ್ ಭವನ ನಿರ್ಮಾಣಕ್ಕೆ ಅನುದಾನ:–** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ ಸಂಕೀರ್ಣ ಮೌಲಾನಾ ಅಜಾದ್ ಭವನವನ್ನು ಮಂಡ್ಯ ನಗರದ ಬೀಡಿ ಕಾಲೋನಿಯಲ್ಲಿ ನಿರ್ಮಾಣ ಮಾಡುತ್ತಿದ್ದು, ಸದರಿ ಕಟ್ಟಡದ ಕಾಮಗಾರಿಗೆ 2020–21ನೇ ಸಾಲಿಗೆ ಹೆಚ್ಚುವರಿ ಅನುದಾನ ರೂ.26.25 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ.26.25 ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿರುತ್ತದೆ.

2021–22ನೇ ಸಾಲಿನ ಜಿಲ್ಲಾ ಪಂಚಾಯತ್ ಆಯವ್ಯಯದಡಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ವೇತನ ವೆಚ್ಚಕ್ಕಾಗಿ ರೂ.18.27ಲಕ್ಷ ಹಾಗೂ ವೇತನೇತರ ವೆಚ್ಚಕ್ಕಾಗಿ ರೂ.139.38ಲಕ್ಷಗಳು ಒಟ್ಟು ರೂ.157.65 ಲಕ್ಷ ಗಳನ್ನು ನಿಗದಿ ಪಡಿಸಲಾಗಿದೆ.

2020–21 ನೇ ಸಾಲಿನಲ್ಲಿ ಮಂಜೂರಾಗಿರುವ ಮತ್ತು ಭರ್ತಿಯಾಗಿರುವ ಹುದ್ದೆಗಳ ಬಗ್ಗೆ ಮಾಹಿತಿ

ಕ್ರ. ಸಂ	ಹುದ್ದೆಗಳ ವಿವರಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಪೈಕಿ				ಷರಾ
				ಪುರುಷರು	ಮಹಿಳೆಯರು	ಪ.ಜಾ	ಪ.ಪಂ	
1.	ಜಿಲ್ಲಾ ಅಧಿಕಾರಿ	1	1 (ಪ್ರಭಾರ)	1	–	–	–	–
2.	ತಾಲ್ಲೂಕು ವಿಸ್ತರಣಾಧಿಕಾರಿಗಳು	2	2(ಹೆಚ್ಚುವರಿ ಪ್ರಭಾರ)	2	–	1	–	–
3.	ಪ್ರ.ದ.ಸಹಾಯಕರು	2	1 (ಖಾಯಂ) 1 (ಹೊ.ಗು)	–	2	–	–	–
4.	ದ್ವಿ.ದ.ಸಹಾಯಕರು	2	1 (ಖಾಯಂ) 1 (ಹೊ.ಗು)	2	–	2	–	–
5.	ವಾಹನ ಚಾಲಕರು	1	1 (ಹೊ.ಗು)	1	–	–	–	–
6.	ಗ್ರೂಪ್ ಡಿ	1	1 (ಹೊ.ಗು)	1	–	–	–	–
ಒಟ್ಟು		9	9	7	2	4	–	–

ಮೆಟ್ರಿಕ್ ನಂತರದ ಬಾಲಕರ/ ಬಾಲಕಿಯರ ವಿದ್ಯಾರ್ಥಿ ನಿಲಯಗಳು, ಮಂಡ್ಯ ಜಿಲ್ಲೆ.

ಕ್ರ. ಸಂ	ಹುದ್ದೆಗಳ ವಿವರಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಪೈಕಿ				ಷರಾ
				ಪುರುಷರು	ಮಹಿಳೆಯರು	ಪ.ಜಾ	ಪ.ಪಂ	
1.	ನಿಲಯ ಪಾಲಕರು	5	2(ಖಾಯಂ) 3(ಹೆಚ್ಚುವರಿ ಪ್ರಭಾರ)	3	2	–	–	–
2.	ಅಡುಗೆಯವರು	5	5 (ಹೊ.ಗು)	–	5	–	–	–
3.	ಅಡುಗೆ ಸಹಾಯಕರು	10	10 (ಹೊ.ಗು)	1	9	–	–	–
4.	ಕಾವಲುಗಾರರು	5	5 (ಹೊ.ಗು)	3	2	–	–	–
ಒಟ್ಟು		25	25	7	17	–	–	–

ವಾರ್ಷಿಕ ಆಡಳಿತ ವರದಿ 2020–21
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಮಂಡ್ಯ

ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಒಟ್ಟು 2240 ಅಂಗನವಾಡಿ ಕೇಂದ್ರಗಳು ಹಾಗು 306 ಮಿನಿ ಅಂಗನವಾಡಿ ಕೇಂದ್ರಗಳು ಸೇರಿದಂತೆ ಒಟ್ಟು 2546 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳ ಮೂಲಕ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ, ಆರೋಗ್ಯ ಶಿಕ್ಷಣ ಹಾಗೂ ಆಟದ ಮೂಲಕ ಪಾಠ ಅಂದರೆ ರೂಢಿಗತ ವಲ್ಲದ ಶಾಲಾ ಪೂರ್ವ ಚಟುವಟಿಕೆ ಮುಂತಾದ ಯೋಜನೆಗಳ ಪೂರ್ಣ ಸೇವಾ ಸೌಲಭ್ಯವನ್ನು ಒದಗಿಸ ಲಾಗುತ್ತಿದೆ.

2240 ಅಂಗನವಾಡಿ ಕಾರ್ಯಕರ್ತೆಯರು, 306 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 2240 ಅಂಗನವಾಡಿ ಸಹಾಯಕಿಯರು ಸೇರಿದಂತೆ ಒಟ್ಟು 4786 ಅಂಗನವಾಡಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

I. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು:

1) ಆಡಳಿತ ಮತ್ತು ನಿರ್ದೇಶನ:– ಈ ಕಾರ್ಯಕ್ರಮದಡಿ ಜಿಲ್ಲಾ ಘಟಕದ ಜಿಲ್ಲಾ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿ ಸೇರಿದಂತೆ ಒಟ್ಟು 9 ಹುದ್ದೆಗಳು ಮಂಜೂರಾಗಿದ್ದು, 5 ಹುದ್ದೆಗಳು ಭರ್ತಿಯಾಗಿರುತ್ತವೆ. ಈ ಸಿಬ್ಬಂದಿಗಳಿಗೆ ವೇತನ ಭತ್ಯೆ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ ವಾರ್ಷಿಕ ರೂ.**34.38**ಲಕ್ಷಗಳ ಗುರಿ ನಿಗದಿಪಡಿಸಿದ್ದು, ರೂ.**85.03** ಲಕ್ಷಗಳು ಬಿಡುಗಡೆಯಾಗಿದ್ದು, **ರೂ.56.79**ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

2)ಜಿಲ್ಲಾ ಐಸಿಡಿಎಸ್ ಘಟಕ:– ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಘಟಕದ ಸಿಬ್ಬಂದಿ ಒಟ್ಟು 8 ಹುದ್ದೆಗಳು ಮಂಜೂರಾಗಿದ್ದು, 08 ಹುದ್ದೆಗಳು ಭರ್ತಿಯಾಗಿರುತ್ತವೆ. ಆಡಳಿತ ವೆಚ್ಚಕ್ಕಾಗಿ ಎಂಎಂಆರ್ ಪ್ರಕಾರ ವಾರ್ಷಿಕ ರೂ.48.18ಲಕ್ಷಗಳು ನಿಗದಿಗೊಳಿಸಿದ್ದು ರೂ.55.55ಲಕ್ಷಗಳು ಬಿಡುಗಡೆಯಾಗಿದ್ದು ಮಾರ್ಚ್–2021ರ ಮಾಹೆಯ ಅಂತ್ಯಕ್ಕೆ ರೂ.35.38ಲಕ್ಷಗಳ ವೆಚ್ಚ ಭರಿಸಲಾಗಿದೆ.

3) ನಿರ್ಗತಿಕ ಮಕ್ಕಳ ಕುಟೀರ:– ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆ ಒದಗಿಸಿ ಸಾಮಾನ್ಯ ಪ್ರಜೆಗಳನ್ನಾಗಿ ಮಾಡುವುದು, ಈ ಯೋಜನೆಯ ಉದ್ದೇಶವಾಗಿದೆ. ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಇಂತಹ ಕುಟೀರಗಳನ್ನು ಸ್ಥಾಪಿಸಿ ಊಟ, ವಸತಿ, ವೈದ್ಯಕೀಯ ಸೌವಲತ್ತುಗಳನ್ನು ಮಕ್ಕಳಿಗೆ ಒದಗಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಮೂಲಕ **04** ಹಾಗೂ ಸೆಂಟ್ ಥಾಮಸ್ ಮಿಷನ್ ಸೊಸೈಟಿ, ಗುತ್ತಲು, ಮಂಡ್ಯ ಮೂಲಕ **01** ಒಟ್ಟು **05** ಕುಟೀರಗಳನ್ನು ನಡೆಸಲಾಗುತ್ತಿದೆ. ಯೋಜನೇತರದಡಿ ಕಾರ್ಯಕ್ರಮದಲ್ಲಿ ರೂ.**13.50**ಲಕ್ಷ ಅನುದಾನ ನಿಗದಿಯಾಗಿದ್ದು ಪೂರ್ಣ ಅನುದಾನ ಬಿಡುಗಡೆಯಾಗಿದ್ದು, ಮಾಸಿಕ 74 ಫಲಾನುಭವಿಗಳಿಗೆ ಪಾಲನೆ, ಪೋಷಣೆಗಾಗಿ **ರೂ.7.51**ಲಕ್ಷಗಳ ವೆಚ್ಚ ಭರಿಸಲಾಗಿದೆ.

4)ವೃದ್ಧಾಶ್ರಮ ನಿರ್ವಹಣೆ:– ಮಂಡ್ಯ ಜಿಲ್ಲೆಯಲ್ಲಿ ರಾಜ್ಯ ವಲಯ ಯೋಜನೆಯಡಿ ಸೇವಾಕಿರಣ ಚಾರಿಟಬಲ್ ಟ್ರಸ್ಟ್ ನವರು ಮಂಡ್ಯ ನಗರದ ಅಶೋಕ ನಗರದಲ್ಲಿ ಸೇವಾಕಿರಣ ವೃದ್ಧಾಶ್ರಮವನ್ನು ನಡೆಸುತ್ತಿದ್ದಾರೆ. 60 ವರ್ಷ ತುಂಬಿದ ಹಿರಿಯ ನಿರ್ಗತಿಕ ವೃದ್ದರಿಗೆ ಉಚಿತ ಊಟ, ವಸತಿ, ಆರೋಗ್ಯ ತಪಾಸಣೆ, ಮನರಂಜನೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಸ್ವಯಂ ಸೇವಾ ಸಂಸ್ಥೆಯ ಮೂಲಕ ನಡೆಯುವ ಈ ಕಾರ್ಯಕ್ರಮಕ್ಕೆ 2020–21ನೇ ಸಾಲಿನಲ್ಲಿ (ಗರಿಷ್ಠ 25 ಫಲಾನುಭವಿಗಳಿಗೆ) ರೂ.8.00ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ರೂ.8.00ಲಕ್ಷಗಳ ಅನುದಾನ

II. ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು :–

(1) ಸಮಗ್ರ ಮಕ್ಕಳ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ:– ಮಂಡ್ಯ ಜಿಲ್ಲೆಯಲ್ಲಿ 08 ಶಿಶು ಅಭಿವೃದ್ಧಿ ಯೋಜನೆಯ ಸಿಬ್ಬಂದಿಗಳಿಗೆ ವೇತನ ಭತ್ಯೆ, ಆಡಳಿತ ವೆಚ್ಚ ಹಾಗೂ ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿಯರಿಗೆ ಗೌರವಧನ ವೆಚ್ಚ ಭರಿಸಲು ಎಂ.ಎಂ.ಆರ್. ಪ್ರಕಾರ ವಾರ್ಷಿಕ ರೂ.5553.00ಲಕ್ಷ ಗುರಿ ನಿಗದಿ ಪಡಿಸಲಾಗಿದ್ದು, ರೂ.6292.45ಲಕ್ಷಗಳು ಬಿಡುಗಡೆಯಾಗಿದ್ದು, ರೂ.5141.71ಲಕ್ಷಗಳ ವೆಚ್ಚ ಭರಿಸಲಾಗಿದೆ.

(2) ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:– 0–6 ವರ್ಷದೊಳಗಿನ ಮಕ್ಕಳಿಗೆ ಹಾಗೂ ಗರ್ಭಿಣಿ ಬಾಣಂತಿಯರು, ಕಿಶೋರಿ, ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಉಪಹಾರ ತಯಾರಿಸಿ ಹಂಚಲಾಗುತ್ತಿದೆ. ಈ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ:2235–00–101–0–61–090(ಯೋಜನೆ)ಯಲ್ಲಿ ವಾರ್ಷಿಕ ಗುರಿ ರೂ.3580.00ಲಕ್ಷ ನಿಗದಿಪಡಿಸಿದ್ದು ರೂ.3672.09ಲಕ್ಷ ಬಿಡುಗಡೆಯಾಗಿದ್ದು, ರೂ.3293.90ಲಕ್ಷ ಗಳ ವೆಚ್ಚ ಭರಿಸಲಾಗಿದೆ.

ವಿಶೇಷ ಘಟಕ ಯೋಜನೆ:– ಈ ಯೋಜನೆಯಡಿ ರೂ.750.00ಲಕ್ಷ ನಿಗದಿಯಾಗಿದ್ದು, ರೂ.1138.75ಲಕ್ಷ ಬಿಡುಗಡೆಯಾಗಿರುತ್ತದೆ. ರೂ.730.96ಲಕ್ಷಗಳ ಆರ್ಥಿಕ ವೆಚ್ಚ ಭರಿಸಲಾಗಿದೆ.

ಗಿರಿಜನ ಉಪ ಯೋಜನೆ:– ಈ ಯೋಜನೆಯಲ್ಲಿ ರೂ.150.00ಲಕ್ಷ ನಿಗದಿಯಾಗಿದ್ದು, ರೂ.536.55ಲಕ್ಷ ಬಿಡುಗಡೆಯಾಗಿರುತ್ತದೆ. ರೂ.126.45ಲಕ್ಷಗಳ ಆರ್ಥಿಕ ವೆಚ್ಚ ಭರಿಸಲಾಗಿದೆ.

(3) ಅಂಗನವಾಡಿ ಕಟ್ಟಡ ನಿರ್ವಹಣೆ:– 2020–21ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನದಡಿ ಆರ್ಥಿಕ ರೂ.75.00ಲಕ್ಷಗಳ ಗುರಿ ನಿಗದಿಪಡಿಸಲಾಗಿರುತ್ತದೆ. ಈ ಸಂಬಂಧ ರೂ.75.00ಲಕ್ಷಗಳ ಬಿಡುಗಡೆಯಾಗಿದ್ದು, ರೂ.70.35ಲಕ್ಷಗಳ ವೆಚ್ಚ ಭರಿಸಲಾಗಿದೆ.

(4) ಆರೋಗ್ಯ ತಪಾಸಣೆ ಕಾರ್ಯಕ್ರಮ:– ಈ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ವೈದ್ಯಾಧಿಕಾರಿಗಳು ಅಂಗನವಾಡಿ ಕೇಂದ್ರಕ್ಕೆ ಬರುವ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಬೇಕಾಗಿರುತ್ತದೆ. ಪ್ರತಿ ತ್ರೈಮಾಸಿಕಕ್ಕೆ ಸರಾಸರಿ 2546 ಕೇಂದ್ರಗಳಲ್ಲಿ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಬೇಕಾಗಿದ್ದು, ವೈದ್ಯಾಧಿಕಾರಿಗಳು ಶೇಕಡ 100% ಅಂಗನವಾಡಿ ಕೇಂದ್ರಕ್ಕೆ ಭೇಟಿ ಮಾಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಿರುತ್ತಾರೆ.

(5) ಕ್ಷೀರ ಭಾಗ್ಯ ಯೋಜನೆ:– ಸರ್ಕಾರದ ಆದೇಶದಂತೆ ದಿನಾಂಕ:01.08.2013ರಿಂದ ಕೆನೆಭರಿತ ಹಾಲಿನ ಪುಡಿಯನ್ನು ಕೆ,ಎಂ.ಎಫ್. ರವರಿಂದ ಖರೀದಿಸಿ ಜಿಲ್ಲೆಯ 8 ಯೋಜನೆಗಳ 2546 ಅಂಗನವಾಡಿ ಕೇಂದ್ರಗಳ 6 ತಿಂಗಳಿನಿಂದ 6 ವರ್ಷದೊಳಗಿನ 89005 ಮಕ್ಕಳಿಗೆ ಹಾಲು ವಿತರಣೆ ಮಾಡಲಾಗಿದೆ. ವಾರದಲ್ಲಿ ಐದು ದಿನ ಪ್ರತಿ ದಿನಕ್ಕೆ 15 ಗ್ರಾಂ ಹಾಲಿನ ಪುಡಿಯಿಂದ 150ಮಿ.ಲಿ. ಹಾಲನ್ನು ತಯಾರಿಸಿ, 10 ಗ್ರಾಂ. ಸಕ್ಕರೆ ಬೆರೆಸಿ ವಿತರಿಸ ಲಾಗುತ್ತಿದೆ.

<u>III ರಾಜ್ಯ ವಲಯ ಕಾರ್ಯಕ್ರಮಗಳು:</u>

(1) ಸಾಂತ್ವನ ಯೋಜನೆ:– ಮಹಿಳೆಯರ ದೌರ್ಜನ್ಯ ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳಗಳಿಗೆ ಸಿಲುಕಿರುವ ಮಹಿಳೆಯರಿಗೆ ಯೋಜನೆಯಡಿ ರಕ್ಷಣೆ, ನೆರವು ನೀಡುವುದು ಯೋಜನೆಯ ಮುಖ್ಯ ಉದ್ದೇಶ ವಾಗಿರುತ್ತದೆ. ಮಂಡ್ಯ ಜಿಲ್ಲೆಯಲ್ಲಿ 07 ಸ್ವಯಂಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

2020–21ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ವರದಕ್ಷಿಣೆ ಕಿರುಕುಳ, ಕೌಟುಂಬಿಕ ಕಲಹ, ಬಹುಪತ್ನಿತ್ವ, ಅತ್ಯಾಚಾರ, ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದಂತೆ 479 ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿದೆ ಹಾಗೂ ಸದರಿ ಸಾಲಿನಲ್ಲಿ ಯೋಜನೆಗೆ ರೂ.44.40ಲಕ್ಷಗಳು ಬಿಡುಗಡೆಯಾಗಿದ್ದು ರೂ.43.91ಲಕ್ಷಗಳ ವೆಚ್ಚ ಭರಿಸಲಾಗಿದೆ.

(2) ಸ್ವಾಧಾರ ಯೋಜನೆ (ಕೇಂದ್ರ ಯೋಜನೆ):– ಈ ಯೋಜನೆಯಡಿ ವಿಧವೆಯರಿಗೆ, ನಿರ್ಗತಿಕ ಹೆಣ್ಣು ಮಕ್ಕಳಿಗೆ, ಶಿಕ್ಷೆಗೊಳಗಾದ ಮಹಿಳೆಯರಿಗೆ, ವೇಶ್ಯಾವಾಟಿಕೆಯಿಂದ ಬಿಡುಗಡೆಗೊಂಡ ಮಹಿಳೆಯರಿಗೆ ಅಲೆಮಾರಿ ಮಹಿಳೆಯರಿಗೆ, ಪರಿತ್ಯಕ್ತೆಯರಿಗೆ ತಾತ್ಕಾಲಿಕ ವಸತಿ ನೀಡಿ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬಿಗಳಾಗಲು ಸಹಾಯ ಮಾಡುವುದು. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುವ ಈ ಯೋಜನೆಯಡಿ 2020–21ನೇ ಸಾಲಿನಲ್ಲಿ 223 ಫಲಾನುಭವಿಗಳು ಯೋಜನೆಯ ಉಪಯೋಗ ಪಡೆದಿರುತ್ತಾರೆ.

(3) ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ:– ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ 2005ರ ಅನುಷ್ಠಾನ ಸಂಬಂಧ ಮಹಿಳೆಯರಿಗೆ ಕುಟುಂಬದಲ್ಲಿ ನಡೆಯುವ ಮಾನಸಿಕ ಹಾಗೂ ದೈಹಿಕ ದೌರ್ಜನ್ಯದಿಂದ ರಕ್ಷಣೆ ನೀಡಲು ಈ ಯೋಜನೆಯನ್ನು ಜಾರಿ ತರಲಾಗಿದೆ. ಈ ಸಂಬಂಧ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಂರಕ್ಷಣಾಧಿಕಾರಿಗಳನ್ನು ನೇಮಿಸಿದ್ದು, ಕೌಟುಂಬಿಕ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರು ಸಂಕ್ಷಣಾಧಿಕಾರಿಗಳಿಗೆ ದೂರನ್ನು ನೀಡಿ ರಕ್ಷಣೆ ಹಾಗೂ ಕಾನೂನು ಸಲಹೆಯನ್ನು ಪಡೆಯ ಬಹುದಾಗಿರುತ್ತದೆ. ಈ ಸಂಬಂಧ 2020–21ನೇ ಸಾಲಿನಲ್ಲಿ ರೂ.20.52ಲಕ್ಷಗಳು ಬಿಡುಗಡೆಯಾಗಿದ್ದು, ರೂ.20.52ಲಕ್ಷ ವೆಚ್ಚ ಭರಿಸಲಾಗಿರುತ್ತದೆ.

(4) ಸ್ತ್ರೀಶಕ್ತಿ ಯೋಜನೆ:– ಮಹಿಳೆಯರಲ್ಲಿ ಸ್ವಾವಲಂಬನೆ ಹಾಗೂ ಆರ್ಥಿಕ ಸಬಲೀಕರಣ ಹೆಚ್ಚಿಸಿ ಆತ್ಮವಿಶ್ವಾಸವನ್ನು ಉಂಟು ಮಾಡುವ ಉದ್ದೇಶದಿಂದ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿರುತ್ತದೆ. ಸ್ತ್ರೀಶಕ್ತಿ ಗುಂಪುಗಳಲ್ಲಿ 18 ವರ್ಷ ಮೇಲ್ಪಟ್ಟ ಮಹಿಳೆಯರು 15 ರಿಂದ 20 ಜನ ಸದಸ್ಯರಿರುತ್ತಾರೆ. ಇಲ್ಲಿಯವರೆಗೆ 7210 ಗುಂಪುಗಳು ರಚನೆ ಯಾಗಿದ್ದು, ಅದರಲ್ಲಿ 124952 ಸದಸ್ಯರಿರುತ್ತಾರೆ. ಈ ಸಂಘಗಳ ಮೂಲಕ ರೂ.12194.37ಲಕ್ಷಗಳ ಉಳಿತಾಯವನ್ನು ಮಾಡಲಾಗಿರುತ್ತದೆ.

(5) **ಸ್ತ್ರೀಶಕ್ತಿ ಮಾರುಕಟ್ಟೆ ಮಳಿಗೆ ಹಾಗೂ ಭವನ:–** ಸ್ತ್ರೀಶಕ್ತಿ ಸದಸ್ಯರಲ್ಲಿ ಉಳಿತಾಯದ ಮನೋಭಾವನೆಯನ್ನು ಬೆಳೆಸುವ ದೃಷ್ಟಿಯಿಂದ ಹೆಚ್ಚು ಹಣವನ್ನು ಉಳಿತಾಯ ಮಾಡಿರುವ ಗುಂಪುಗಳನ್ನು ಗುರುತಿಸಿ ರೂ.75,000–00 ಹಾಗೂ ರೂ.1.00ಲಕ್ಷಗಳವರೆಗೆ ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.15,000/– ಮತ್ತು ರೂ.1.00.000/–ಗಳಿಗಿಂತ ಮೇಲ್ಪಟ್ಟು ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.20,000/–ಗಳಂತೆ ನೀಡಲಾಗುವುದು. 2020–21ನೇ ಸಾಲಿನಲ್ಲಿ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ ಬಿಡುಗಡೆ ಯಾಗಿರುವುದಿಲ್ಲ. ಒಟ್ಟು 7210 ಗುಂಪುಗಳಲ್ಲಿ 7210 ಗುಂಪುಗಳು ಬ್ಯಾಂಕ್ ಲಿಂಕೇಜ್ ಆಗಿರುತ್ತದೆ.

ಒಟ್ಟಾರೆ ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದಿಂದಾಗಿ ಮಹಿಳೆಯರಲ್ಲಿ ಸ್ವಾವಲಂಬನೆ ಜೊತೆಗೆ ಸಾಮಾಜಿಕ ಸುಧಾರಣೆ ಹಾಗೂ ಉಳಿತಾಯದ ಹಣದ ಸದ್ಬಳಕೆ ಮಾಡುವಲ್ಲಿ ಯಶಸ್ವಿ ಪಾತ್ರವನ್ನು ವಹಿಸಿರುತ್ತಾರೆ ಎಂಬುದು ಗಮನಾರ್ಹವಾದ ವಿಷಯವಾಗಿದೆ.

6. ಭಾಗ್ಯಲಕ್ಷ್ಮಿ ಯೋಜನೆ:–

ಸಮುದಾಯದಲ್ಲಿ ಹೆಣ್ಣು ಮಗುವಿನ ಸ್ಥಾನಮಾನ ಹೆಚ್ಚಿಸುವ ಹಾಗೂ ಲಿಂಗ ಅನುಪಾತವನ್ನು ಸರಿದೂಗಿಸುವ, ಹೆಣ್ಣು ಮಗುವಿನ ಆರೋಗ್ಯ, ಶಿಕ್ಷಣ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ ಮೊದಲ ಹಾಗೂ 2ನೇ ಹೆಣ್ಣು ಮಗುವಿಗೆ ಅನುಕೂಲವಾಗುವಂತೆ ಭಾಗ್ಯಲಕ್ಷ್ಮಿ ಯೋಜನೆಯನ್ನು 2006–07ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೆ ತರಲಾಯಿತು. ಈ ಸಂಬಂಧ 2020–21ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 6321 ಫಲಾನುಭವಿಗಳಿಗೆ ಆನ್‌ಲೈನ್ ಮಂಜೂರಾತಿ ನೀಡಲಾಗಿದೆ.

IV. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಉದ್ಯೋಗಿನಿ ಯೋಜನೆ: ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕಿನಿಂದ ಸಾಲ ಮತ್ತು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಸಹಾಯಧನ ನೀಡುವ ಮೂಲಕ ಉತ್ತೇಜನ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. 2020–21ನೇ ಸಾಲಿನಲ್ಲಿ ನಿಗಮದಿಂದ 42 ಭೌತಿಕ ಗುರಿಗೆ ರೂ.41.72ಲಕ್ಷಗಳ ಆರ್ಥಿಕ ಗುರಿ ನಿಗದಿಪಡಿಸಲಾಗಿದೆ. ಆಯ್ಕೆ ಸಮಿತಿಯಿಂದ ಆಯ್ಕೆಯಾಗಿ ಬ್ಯಾಂಕುಗಳು ವಿಳಂಬವಾಗಿ ಸಾಲ ಮಂಜೂರು ಮಾಡಿರುವ 24 ಫಲಾನುಭವಿಗಳಿಗೆ ರೂ.16.59ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ವಾರ್ಷಿಕ ಆಡಳಿತ ವರದಿ 2020–21
ಕೃಷಿ ಇಲಾಖೆ

ಮಂಡ್ಯ ಜಿಲ್ಲೆಯು 4,98,244 ಹೆ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಖುಷ್ಕಿ ಪ್ರದೇಶದಲ್ಲಿ ರಾಗಿ, ದ್ವಿದಳಧಾನ್ಯ ಹಾಗೂ ಎಣ್ಣೆಕಾಳು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲಿ ಪ್ರಮುಖವಾಗಿ ಭತ್ತ, ಕಬ್ಬು ಹಾಗೂ ರಾಗಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಕೃಷಿ ಪ್ರಮುಖ ಕಸುಬಾಗಿದ್ದು, 2020–21ನೇ ಸಾಲಿನಲ್ಲಿ 2,41,019 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿರುತ್ತದೆ. ಇದರಲ್ಲಿ 1,32,711 ಹೆಕ್ಟೇರ್ ನೀರಾವರಿ ಪ್ರದೇಶವಾಗಿರುತ್ತದೆ. ಜಿಲ್ಲೆಯಲ್ಲಿ 4,13,426 ಭೂ ಹಿಡುವಳಿದಾರರಿದ್ದು, ಈ ಪೈಕಿ 3,86,505 ಸಣ್ಣ ಮತ್ತು ಅತಿ ಸಣ್ಣ ಭೂ ಹಿಡುವಳಿದಾರರಿರುತ್ತಾರೆ.

ಜಿಲ್ಲೆಯಲ್ಲಿ ಎಲ್ಲಾ 31 ಹೋಬಳಿಗಳಲ್ಲಿಯೂ ರೈತ ಸಂಪರ್ಕ ಕೇಂದ್ರಗಳು ಸ್ಥಾಪನೆಗೊಂಡು ರೈತರ ಕೃಷಿ ಮಾಹಿತಿಯು ಬೇಡಿಕೆಗೆ ಸ್ಪಂದಿಸುತ್ತಿವೆ. ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ, ಲಘು ಪೋಷಕಾಂಶ, ಸಸ್ಯಸಂರಕ್ಷಣಾ ಔಷಧಿ, ಲಘು ನೀರಾವರಿ ಘಟಕ ಹಾಗೂ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಆಧುನಿಕ ಬೇಸಾಯ ಪದ್ಧತಿಗಳನ್ನು ರೈತರು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಹಾಗೂ ರೈತರ ಜೀವನಮಟ್ಟ ಸುಧಾರಿಸುವಲ್ಲಿ ತಾಂತ್ರಿಕತೆ ಅಳವಡಿಕೆಯ ಅವಶ್ಯಕತೆ ಇರುತ್ತದೆ. ಆದ ಕಾರಣ ಕೃಷಿ ಇಲಾಖೆಯು ಕೃಷಿಕರ ವಿವಿಧ ಬೆಳೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. ಸಸ್ಯಸಂಗೋಪನೆ:

2020–21ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಡಿ ಕೃಷಿ ಇಲಾಖೆಯ ಕಾರ್ಯಕ್ರಮಗಳಿಗೆ ಹಾಗೂ ವೇತನಾಂಶ ಕಾರ್ಯಕ್ರಮಗಳಿಗೆ ರೂ.259.09ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.248.19ಲಕ್ಷ ವೆಚ್ಚ ಮಾಡಲಾಗಿದೆ.

2. ಭೂಸಾರ ಮತ್ತು ಜಲ ಸಂರಕ್ಷಣೆ:

2020–21ನೇ ಸಾಲಿನಲ್ಲಿ ಭೂಸಾರ ಮತ್ತು ಜಲ ಸಂರಕ್ಷಣೆ(ಜಲಾನಯನ ಅಭಿವೃದ್ಧಿ ಇಲಾಖೆ) ಯೋಜನೆ ವೇತನಾಂಶ ಕಾರ್ಯಕ್ರಮಗಳಿಗೆ ಜಿಲ್ಲಾ ವಲಯದಡಿ ಒಟ್ಟು ರೂ.145.11ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ರೂ.144.84ಲಕ್ಷ ವೆಚ್ಚ ಭರಿಸಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

2020–21ನೇ ಸಾಲಿನ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳಡಿ ಕೃಷಿ ಇಲಾಖೆಯ ಕಾರ್ಯಕ್ರಮ ಗಳಿಗೆ ಹಾಗೂ ವೇತನಾಂಶ ಕಾರ್ಯಕ್ರಮಗಳಿಗೆ ರೂ.532.43ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.490.53ಲಕ್ಷ ವೆಚ್ಚ ಮಾಡಲಾಗಿದೆ.

ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ಪ್ರಮುಖ ಕಾರ್ಯಕ್ರಮಗಳು

1. **ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ:** ಈ ಯೋಜನೆಯಲ್ಲಿ ಮಣ್ಣಿನಲ್ಲಿನ ಲಘು ಪೋಷಕಾಂಶಗಳ ಕೊರತೆಯನ್ನು ನೀಗಿಸಲು ಹಸಿರೆಲೆ ಗೊಬ್ಬರ ಬೀಜಗಳು, ಜಿಪ್ಸಂ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಎರೆಹುಳು ಗೊಬ್ಬರ, ಸಾವಯವ ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್‌ಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಒದಗಿಸಲಾಗಿದೆ. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಗೊಳಿಸಲು ಜಿಲ್ಲೆಗೆ ರೂ.55.04ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.55.03ಲಕ್ಷ ವೆಚ್ಚ ಮಾಡಲಾಗಿರುತ್ತದೆ.

2. **ಕೃಷಿ ಯಾಂತ್ರೀಕರಣ:** ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಉಳುಮೆಯಿಂದ ಕೊಯ್ಲುವರೆಗೆ ಉಪಯುಕ್ತವಿರುವ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ಈ ಯೋಜನೆಯಡಿ ವಿತರಿಸಲಾಗಿದೆ. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಗೆ ರೂ.1824.01ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.1823.27ಲಕ್ಷ ವೆಚ್ಚ ಮಾಡಲಾಗಿರುತ್ತದೆ.

3. **ಬೀಜಗಳ ಪೂರೈಕೆ ಯೋಜನೆ:** ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರೈತರಿಗೆ ಕ್ರಮವಾಗಿ ಶೇ.50 ಮತ್ತು ಶೇ.75ರ ಸಹಾಯಧನದಲ್ಲಿ ಒದಗಿಸಲಾಗಿದೆ. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಗೆ ರೂ.17.35ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.17.31ಲಕ್ಷ ವೆಚ್ಚ ಮಾಡಲಾಗಿರುತ್ತದೆ.

1. **ಮಣ್ಣು ಆರೋಗ್ಯ ಅಭಿಯಾನ:** ಮಣ್ಣು ಪರೀಕ್ಷೆ ಆಧಾರದ ಮೇಲೆ ರೈತರ ಬೆಳೆಗಳಿಗೆ ಸಮತೋಲನ ರಸಗೊಬ್ಬರಗಳ ಬಳಕೆ ಹಾಗೂ ಸಮಗ್ರ ಸಸ್ಯ ಪೋಷಕಾಂಶಗಳ ನಿರ್ವಹಣೆ ಮಾಡುವುದರಿಂದ ಭೂಫಲವತ್ತತೆ ಹಾಗೂ ಉತ್ಪಾದಕತೆಯನ್ನು ನಿರಂತರವಾಗಿ ಕಾಪಾಡಿಕೊಂಡು ಹೋಗಲು ಸಾಧ್ಯ ವಾಗುತ್ತದೆ. 2020–21ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಗೆ 99156 ಮಣ್ಣು ಮಾದರಿ ಸಂಗ್ರಹಣಾ ಗುರಿಯಿದ್ದು, ಇದಕ್ಕೆ ಅನುಗುಣವಾಗಿ 65822 ಮಣ್ಣು ಮಾದರಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದ್ದು, ಇದುವರೆವಿಗೂ 235260 ಮಣ್ಣು ಆರೋಗ್ಯ ಚೀಟಿಗಳನ್ನು ರೈತರಿಗೆ ವಿತರಿಸಲಾಗಿರುತ್ತದೆ. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಗೆ ರೂ.51.40ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.51.14ಲಕ್ಷ ವೆಚ್ಚ ಮಾಡಲಾಗಿರುತ್ತದೆ.

2. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ – ಸೂಕ್ಷ್ಮ ನೀರಾವರಿ ಯೋಜನೆ:** ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಈ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ತುಂತುರು ನೀರಾವರಿ ಘಟಕ ಹಾಗೂ ಹನಿ ನೀರಾವರಿ ಘಟಕಗಳಿಗೆ ಶೇ.90ರ ಸಹಾಯಧನವನ್ನು ಒದಗಿಸಲಾಗಿದೆ. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಗೆ ರೂ.2619.97ಲಕ್ಷ ಅನುದಾನ ಬಿಡುಗಡೆ ಯಾಗಿದ್ದು ರೂ.2522.46ಲಕ್ಷ ವೆಚ್ಚ ಮಾಡಲಾಗಿರುತ್ತದೆ.

3. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)**

2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಗೆ ರೂ.72.00ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.62.08ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ 5 ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯ ಕೃಷಿ ಇಲಾಖೆಯಲ್ಲಿನ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಹುದ್ದೆಗಳ ವಿವರ

ದಿನಾಂಕ:31-03-2021 ರ ಅಂತ್ಯಕ್ಕೆ

ಕ್ರ.ಸಂ.	ಹುದ್ದೆ ಹೆಸರು	ಮಂಜೂರು	ಭರ್ತಿ	ಖಾಲಿ
1	ಜಂಟಿ ಕೃಷಿ ನಿರ್ದೇಶಕರು,	1	1	0
2	ಉಪ ಕೃಷಿ ನಿರ್ದೇಶಕರು	4	4	0
3	ಸಹಾಯಕ ಕೃಷಿ ನಿರ್ದೇಶಕರು,	13	13	0
4	ಸಹಾಯಕ ಕೃಷಿ ನಿರ್ದೇಶಕರು (ರೈ.ಮ)	2	2	0
5	ಆಡಳಿತ ಅಧಿಕಾರಿ	1	1	0
6	ಕೃಷಿ ಅಧಿಕಾರಿ	63	41	22
7	ಸಹಾಯಕ ಕೃಷಿ ಅಧಿಕಾರಿ	93	23	70
8	ಆಡಳಿತ ಸಹಾಯಕರು	2	0	2
9	ಸಹಾಯಕ ತೋಟಗಾರಿಕೆ ಅಧಿಕಾರಿ	1	0	1
10	ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ	1	0	1
11	ವಲಯ ಅರಣ್ಯಾಧಿಕಾರಿ	1	0	1
12	ಉಪ ವಲಯ ಅರಣ್ಯಾಧಿಕಾರಿ	2	2	0
13	ಅಧೀಕ್ಷಕರು	13	9	4
14	ಪ್ರಥಮ ದರ್ಜೆ ಸಹಾಯಕರು	22	14	8
15	ದ್ವಿತೀಯ ದರ್ಜೆ ಸಹಾಯಕರು	23	17	6
16	ಶೀಘ್ರಲಿಪಿಗಾರರು	1	0	1
17	ಬೆರಳಚ್ಚುಗಾರರು	15	3	12
18	ರೇಖಾಗಾರರು	2	1	1
19	ವಾಹನ ಚಾಲಕರು	13	2	11
20	ಕೃಷಿ ಉಪಕರಣ ಮೇಲ್ವಿಚಾರಕರು	1	0	1
21	ಪ್ರಯೋಗ ಶಾಲಾ ಸಹಾಯಕರು	6	4	2
22	ತೋಟಗಾರಿಕೆ ಸಹಾಯಕರು	2	0	2
23	ಪ್ರಯೋಗಶಾಲಾ ಪರಿಚಾರಕರು	9	9	0
24	ಬಾಣಸಿಗರು	1	1	0
25	ಡಿ.ದರ್ಜೆ ನೌಕರರು	37	25	12
	ಒಟ್ಟು	**329**	**172**	**157**

ವಾರ್ಷಿಕ ಆಡಳಿತ ವರದಿ 2020–21

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಬೆಳೆ ಪ್ರಾಮುಖ್ಯತೆ:

ಮಂಡ್ಯ ಜಿಲ್ಲೆಯ ಹವಾಗುಣ, ಭೌಗೋಳಿಕ ಲಕ್ಷಣಗಳನ್ನು ಗಮನಿಸಿದಾಗ, ಜಿಲ್ಲೆಯಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯಬಹುದಾಗಿರುತ್ತದೆ. ಅನಾದಿ ಕಾಲದಿಂದಲೂ ಈ ಜಿಲ್ಲೆಯ ರೈತರು ಕೃಷಿ ಬೆಳೆಗಳಾದ ಕಬ್ಬು ಮತ್ತು ಭತ್ತದ ಬೆಳೆಗಳನ್ನು ಹೆಚ್ಚಾಗಿ ಬೆಳೆದುಕೊಂಡು ಬಂದಿದ್ದು, ತೋಟಗಾರಿಕೆ ಬೆಳೆಗಳನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಜಿಲ್ಲೆಯ ಕೃಷಿಗೆ ಲಭ್ಯವಿರುವ 245188 ಹೆಕ್ಟೇರ್ ಪ್ರದೇಶದ ಪೈಕಿ ತೋಟಗಾರಿಕೆ ಬೆಳೆಗಳನ್ನು 80921 ಹೆಕ್ಟರ್ ವಿಸ್ತೀರ್ಣದಲ್ಲಿ ಬೆಳೆಯುತ್ತಿದ್ದು, ಪ್ರತಿ ವರ್ಷ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹೆಚ್ಚುತ್ತಿರುವುದು ತೋಟಗಾರಿಕೆ ಮಾಡುವ ರೈತ ವರ್ಗದವರ ಹೆಚ್ಚಿನ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರೈತರ ಶ್ರೇಯೋಭಿವೃದ್ಧಿಗೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.

I) ಜಿಲ್ಲಾ ಪಂಚಾಯತ್ ಯೋಜನೆಗಳು:–

1) **ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ:** ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ರೈತರಿಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಆರ್ಥಿಕ ರೂ.20.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.18.63ಲಕ್ಷಗಳು ಖರ್ಚು ಮಾಡಿ 25.62 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿದ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2) **ತೋಟಗಾರಿಕೆ ಕಟ್ಟಡಗಳು:** ಈ ಯೋಜನೆಯಡಿ ಜಿಲ್ಲಾ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಆರ್ಥಿಕ ರೂ17.13ಲಕ್ಷ ಅನುದಾನ ಬಿಡುಗಡೆ ಯಾಗಿದ್ದು ರೂ.16.23ಲಕ್ಷಗಳು ವೆಚ್ಚ ಭರಿಸಲಾಗಿರುತ್ತದೆ.

3) **ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (ಮೂಲ ಭೂತ ಸೌಕರ್ಯಅಭಿವೃದ್ಧಿ ಕಾಮಗಾರಿಗಳು):** ಈ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯ 8 ತೋಟಗಾರಿಕೆ ಕ್ಷೇತ್ರಗಳಲ್ಲಿ ಬೆಳೆಸಿರುವ ಹಣ್ಣಿನ ಗಿಡಗಳ ಪಾಲನೆ, ಪೋಷಣೆ ಮತ್ತು ನಿರ್ವಹಣೆಗಾಗಿ ಒಟ್ಟು ಮೊತ್ತ ರೂ.18.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.17.97ಲಕ್ಷಗಳ ವೆಚ್ಚ ಭರಿಸಲಾಗಿದೆ.

4) **ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ:** ಈ ಯೋಜನೆಯಡಿ 2019–20ನೇ ಸಾಲಿನಲ್ಲಿ ತೆಂಗು ನರ್ಸರಿಯಲ್ಲಿ ಬೆಳೆಸಿದ 85849 ಸಂಖ್ಯೆ ತೆಂಗಿನ ಸಸಿಗಳನ್ನು ಪ್ರಸಕ್ತ ಸಾಲಿನಲ್ಲಿ ಪಾಲನೆ ಮಾಡಿದ್ದು, 2020–21ನೇ ಸಾಲಿನಲ್ಲಿ ಒಟ್ಟು ರೂ.30.00ಲಕ್ಷ ಅನುದಾನ ಬಿಡುಗಡೆಗೊಂಡಿದ್ದು ಇದರಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಮಾಡಿದ 68992ಸಂಖ್ಯೆ ಉತ್ತಮ ಗುಣಮಟ್ಟದ ತೆಂಗಿನ ಕಾಯಿಗಳನ್ನು ಸಂಗ್ರಹಿಸಿ ನಾಟಿ ಮಾಡಲಾಗಿದ್ದು, ರೂ.29.94ಲಕ್ಷ ವೆಚ್ಚ ಭರಿಸಲಾಗಿದೆ.

5) **ಪ್ರಚಾರ ಮತ್ತು ಸಾಹಿತ್ಯ:** ಈ ಕಾರ್ಯಕ್ರಮದಲ್ಲಿ ರೈತರಿಗೆ ತೋಟಗಾರಿಕೆ ಬೆಳೆ ಬಗ್ಗೆ ಆಸಕ್ತಿ ಮೂಡಿಸಲು ಮತ್ತು ಆಧುನಿಕ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸಲು ಹಾಗೂ ವಿವಿಧ ಯೋಜನೆ ಗಳಿಂದ ರೈತರಿಗೆ ದೊರೆಯುವ ಸವಲತ್ತುಗಳ ಕುರಿತು ಕರಪತ್ರಗಳ ಮುದ್ರಣ ಹಾಗೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕಾಗಿ ರೂ.10.00ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, ರೂ.10.00ಲಕ್ಷ ವೆಚ್ಚ ಭರಿಸಲಾಗಿದೆ.

6) **ಜೇನು ಕೃಷಿ ಸಾಕಾಣಿಕೆ ಯೋಜನೆ:** ಈ ಯೋಜನೆಯಲ್ಲಿ ಒಟ್ಟು 60 ಸಂಖ್ಯೆ ಫಲಾನುಭವಿಗಳಿಗೆ ತರಬೇತಿಯನ್ನು ನೀಡಲಾಗಿದ್ದು, 45 ಸಂಖ್ಯೆ ಫಲಾನುಭವಿಗಳಿಗೆ ಸಾಮಾನ್ಯ ವರ್ಗದಡಿ ಶೇ.75 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದಡಿ ಶೇ.90ರ ರಿಯಾಯಿತಿ ದರದಲ್ಲಿ ಜೇನು ಪೆಟ್ಟಿಗೆ ಮತ್ತು ಜೇನು ಕುಟುಂಬವನ್ನು ಖರೀದಿಸಿದ ರೈತರಿಗೆ ಸಹಾಯಧನ ನೀಡಿ ತೋಟಗಾರಿಕೆ ಬೆಳೆಗಳ "ಪರಾಗಸ್ಪರ್ಶದಿಂದ" ಇಳುವರಿ ಹೆಚ್ಚಿಸಲುಜೇನು ಸಾಕಾಣಿಕೆಗೆರೂ. 2.00 ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, ಪ್ರೋತ್ಸಾಹಧನರೂ. 1.98 ಲಕ್ಷಗಳನ್ನು ನೀಡಲಾಗಿದೆ.

7) **ರೈತರಿಗೆ ತರಬೇತಿ:**–ಈ ಕಾರ್ಯಕ್ರಮದಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ 750ಸಂಖ್ಯೆಆಸಕ್ತ ಪುರುಷರೈತರಿಗೆ ಹಾಗೂ ರೈತ ಮಹಿಳೆಯರಿಗೆ ತೋಟಗಾರಿಕೆ ಅಭಿವೃದ್ಧಿಯ ಬಗ್ಗೆ ಮತ್ತು ಹಣ್ಣು ತರಕಾರಿ ಸಂಸ್ಕರಣೆ ಮತ್ತು ನಿರ್ವಹಣೆ ಕುರಿತು ತಾಂತ್ರಿಕ ಮಾಹಿತಿ ನೀಡಲು ರೂ.2.30 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ.2.30ಲಕ್ಷ ವೆಚ್ಚ ಭರಿಸಲಾಗಿದೆ.

I) ರಾಜ್ಯ ವಲಯದ ಯೋಜನೆಗಳ ಪ್ರಗತಿ :–

ಅ) **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ:** 2020–21 ಸಾಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ನಷ್ಟ ಅನುಭವಿಸಿದ ರೈತರಿಗೆ ಪರಿಹಾರಧನವನ್ನು ವಿತರಿಸಲಾಗಿದ್ದು.

- ತರಕಾರಿ ಬೆಳೆಗಾರರಿಗೆ ಪರಿಹಾರ ಧನ ಕಾರ್ಯಕ್ರಮದಡಿ ರೂ.233.99 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ.127.62ಲಕ್ಷಗಳ ಅನುದಾನವನ್ನು 2130 ಫಲಾನುಭವಿಗಳಿಗೆ ವಿತರಿಸಲಾಗಿದೆ.
- ಹಣ್ಣು ಬೆಳೆಗಾರರಿಗೆ ಪರಿಹಾರ ಧನ ಕಾರ್ಯಕ್ರಮದಡಿ ರೂ.185.24ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ.170.02ಲಕ್ಷಗಳ ಅನುದಾನವನ್ನು 2744 ಫಲಾನುಭವಿಗಳಿಗೆ ವಿತರಿಸಲಾಗಿದೆ.
- ಹೂ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮದಡಿ ರೂ.131.55ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ.131.52ಲಕ್ಷಗಳ ಅನುದಾನವನ್ನು 1731 ಫಲಾನುಭವಿಗಳಿಗೆ ವಿತರಿಸಲಾಗಿದೆ.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಹಾಯಧನ ಪಡೆದ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ 40%ರಂತೆ ರೂ.42.00ಲಕ್ಷಗಳ ಹೊಂದಾಣಿಕೆ ಮೊತ್ತವನ್ನು ಬಿಡುಗಡೆಯಾಗಿದ್ದು ರೂ.41.99ಲಕ್ಷಗಳ ವೆಚ್ಚ ಭರಿಸಲಾಗಿದೆ.

ಆ) ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ:

ಈ ಯೋಜನೆಯಡಿ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ, ಮಾದರಿ ಕ್ಷೇತ್ರಗಳ ಅಭಿವೃದ್ಧಿಗೆ ರೂ.100.00ಲಕ್ಷಗಳ ವೆಚ್ಚ ಭರಿಸಲಾಗಿದೆ.

ಇ) ತೋಟಗಾರಿಕೆ ಬೆಳೆಗಳ ಹಾನಿಕಾರಕ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣಕ್ಕಾಗಿ ಯೋಜನೆ:

- ಕಪ್ಪುತಲೆ ಹುಳುವಿನ ಬಾಧೆಗೆ ತುತ್ತಾದ ತೆಂಗಿನಗಿಡ ಮರಗಳಿಗೆ ಹೆಚ್ಚಿನ ಪರೋಪ ಜೀವಿಗಳನ್ನು ಎರಡು ಬೃಹತ್ ಪ್ರಯೋಗ ಶಾಲೆಗಳಲ್ಲಿ ಉತ್ಪಾದಿಸಿ ರೋಗ ನಿಯಂತ್ರಣಕ್ಕಾಗಿ ರೂ.15.81ಲಕ್ಷ ಬಿಡುಗಡೆ ಮಾಡಿದ್ದು, ಇದ್ಕಕಾಗಿ ರೂ.15.81ಲಕ್ಷಗಳ ವೆಚ್ಚ ಭರಿಸಲಾಗಿದೆ.
- ಈ ಯೋಜನೆಯಲ್ಲಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಕೀಟ ಮತ್ತು ರೋಗಗಳಿಂದ ರಕ್ಷಿಸಲು ರೈತರು ತಾವೇ ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗೆ ಶೇ.75ರಂತೆ ಇತರೆ ವರ್ಗದ ರೈತರಿಗೆ ಹಾಗೂ ಶೇ.90ರಂತೆ ಪಜಾ/ಪ.ಪಂ ವರ್ಗದ ರೈತರಿಗೆ ಸಹಾಯಧನವನ್ನು ಒದಗಿಸಲಾಗಿದೆ. ಇದಕ್ಕಾಗಿ ರೂ.20.97ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, .20.96ಲಕ್ಷಗಳ ವೆಚ್ಚ ಭರಿಸಲಾಗಿದೆ.
- ಮೂಲಭೂತ ಸೌಕರ್ಯಗಳಿಗಾಗಿ ರೂ.5.00ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಪೂರ್ಣ ಪ್ರಮಾಣದಲ್ಲಿ ವೆಚ್ಚ ಭರಿಸಲಾಗಿದೆ.

ಉ) ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ ಯೋಜನೆ:

ಈ ಯೋಜನೆಯಡಿ 150 ಸಂಖ್ಯೆ ರೈತ ಫಲಾನುಭವಿಗಳಿಗೆ ತರಬೇತಿ ನೀಡಿ, ಪ್ರತಿ ಫಲಾನುಭವಿಗೆ ಶೇ.40ರಂತೆ 371 ಜೇನು ಪೆಟ್ಟಿಗೆ ಮತ್ತು ಜೇನು ಕುಟಂಬಗಳನ್ನು ಖರೀದಿಸಿದ ರೈತರಿಗೆ ರೂ.13.97ಲಕ್ಷಗಳ ವೆಚ್ಚ ಭರಿಸಿ ತರಬೇತಿ ಹಾಗೂ ಸಹಾಯಧನ ನೀಡಲಾಗಿದೆ, ಇಲಾಖಾ 5 ಮಧುವನಗಳಿಗೆ ರೂ.0.16ಲಕ್ಷಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಹೊಸ ಗುತ್ತಿಗೆ ಆಧಾರದ ಮೇಲೆ 10 ತಿಂಗಳು 3 ಜನ ಅನುವುಗಾರರನ್ನು ತೆಗೆದುಕೊಂಡು ರೂ.2.70ಲಕ್ಷ ಗಳನ್ನು ವೆಚ್ಚ ಭರಿಸಲಾಗಿದೆ. 7 ತಾಲ್ಲೂಕುಗಳಲ್ಲಿ ಪ್ರಚಾರ ಪಡಿಸಲು ಆಡಳಿತ ವೆಚ್ಚಕ್ಕಾಗಿ ರೂ.0.71ಲಕ್ಷಗಳನ್ನು ವೆಚ್ಚ ಭರಿಸಲಾಗಿದೆ ವಾರ್ಷಿಕ ಒಟ್ಟು ರೂ.18.28ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಊ) ತೋಟಗಾರಿಕೆ ಉದ್ಯಾನವನ ಅಭಿವೃದ್ಧಿ:

ಈ ಕಾರ್ಯಕ್ರಮದಲ್ಲಿ ಮಂಡ್ಯ ತಾಲ್ಲೂಕಿನಲ್ಲಿ "ಕಾವೇರಿವನ ಹಾಗೂ ಭವ್ಯವನ ಅಭಿವೃದ್ಧಿ" ಪಾಲನೆ, ಪೋಷಣೆ ಮತ್ತು ನಿರ್ವಹಣೆ ಹಾಗೂ ಕೃಷ್ಣರಾಜಸಾಗರ "ಬೃಂದಾವನದ ಉದ್ಯಾನವನ" ಪಾಲನೆ, ಪೋಷಣೆ ಮತ್ತು ನಿರ್ವಹಣೆಗೆ ರೂ.85.94ಲಕ್ಷಗಳ ಅನುದಾನಕ್ಕೆ ವೆಚ್ಚ ಭರಿಸಲಾಗಿದೆ.

I) ಕೇಂದ್ರ ವಲಯದ ಯೋಜನೆಗಳ ಪ್ರಗತಿ :-

1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ:

ಈ ಯೋಜನೆಯಲ್ಲಿ ಒಟ್ಟು 1543 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಶೇ.90ರಂತೆ ಹನಿ ನೀರಾವರಿ ಅಳವಡಿಸಿದ ರೈತರಿಗೆ ಸಹಾಯಧನ ಕಲ್ಪಿಸಲು ರೂ.1217.11 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಒಟ್ಟು ರೂ.1216.45ಲಕ್ಷಗಳ ವೆಚ್ಚ ಭರಿಸಲಾಗಿದೆ. ರೈತರಿಗೆ ಬರಗಾಲದ ಪರಿಸ್ಥಿತಿಯಲ್ಲಿ ಸದರಿ ಯೋಜನೆಯಿಂದ ಉತ್ತಮ ಅನುಕೂಲವಾಗಿರುತ್ತದೆ.

2. ತೆಂಗು ಉತ್ಪಾದನ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ:

ಈ ಯೋಜನೆಯಲ್ಲಿ ತೆಂಗು ತಾಕುಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಿ ತೆಂಗಿನ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಲು ಪ್ರಾಯೋಗಿಕವಾಗಿ ತೆಂಗು ಪ್ರಾತ್ಯಕ್ಷಿತೆ ತಾಕುಗಳನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲು ರೈತರಿಗೆ ಸಹಾಯಧನ ನೀಡಲಾಗಿದೆ.

ಅ) ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ:

38ಹೆಕ್ಟೇರ್‌ನಲ್ಲಿ ಹೊಸದಾಗಿ ಅಭಿವೃದ್ಧಿ ಪಡಿಸಿರುವ ತೆಂಗು ತಾಕಿಗೆ ರೂ.6.67ಲಕ್ಷಗಳನ್ನು ವೆಚ್ಚ ಮಾಡಿದ್ದು, ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆಗೆ ರೂ.77.06ಲಕ್ಷಗಳನ್ನು ವೆಚ್ಚ ಭರಿಸಲಾಗಿದೆ.

ಆ) Replanting and Rejuvenation scheme in Karnataka Program:

ಈ ಯೋಜನೆಯಡಿ 138.65 ಹೆಕ್ಟೇರ್ ಪ್ರದೇಶದಲ್ಲಿ **Replanting and Rejuvenation** ಮಾಡಲು ಹಾಗೂ 48.17 ಹೆಕ್ಟೇರ್ ಪ್ರದೇಶದ ನಿರ್ವಹಣೆಗೆ ರೂ.60.48ಲಕ್ಷಗಳ ವೆಚ್ಚ ಭರಿಸಲಾಗಿದೆ.

ಇ) ತೆಂಗಿನ ತೋಟಗಳ ಪ್ರದೇಶ ವಿಸ್ತರಣೆಗೆ ರೈತರಿಗೆ ರೂ.8.78ಲಕ್ಷಗಳನ್ನು ಸಹಾಯಧನ ರೂಪದಲ್ಲಿ ನೀಡಲಾಗಿರುತ್ತದೆ.

ಈ) **TxD ತೆಂಗಿನ ಕಾಯಿಗಳ ಉತ್ಪಾದನೆ:** ಈ ಯೋಜನೆಯಡಿ ಕೃಷ್ಣರಾಜಸಾಗರ ಶ್ರೀರಂಗಪಟ್ಟಣ ತಾಲ್ಲೂಕು ಸರ್ಕಾರಿ ಹಣ್ಣಿನ ತೋಟದಲ್ಲಿ **TxD** ತೆಂಗಿನ ಮರಗಳಲ್ಲಿ ಪರಾಗ ಸ್ಪರ್ಶ ಮಾಡಿ ಉತ್ತಮ ಗುಣ ಮಟ್ಟದ 40000 ಸಂಖ್ಯೆ ಬಿತ್ತನೆ ಕಾಯಿಗಳನ್ನು ಉತ್ಪಾದಿಸಲು ರೂ.13.97ಲಕ್ಷಗಳನ್ನು ಖರ್ಚು ಮಾಡಲಾಗಿದೆ ಹಾಗೂ ರೈತರಿಗೆ ಇಲಾಖಾ ದರದಲ್ಲಿ ದೃಢೀಕರಿಸಿದ **T x D** ತೆಂಗಿನ ಸಸಿಗಳನ್ನು ಮಾರಾಟ ಮಾಡಲಾಗುವುದು.

3. ರಾಷ್ಟ್ರೀಯ ತೋಟಗಾರಿಕೆ ಮಿಷನ್ :

ಈ ಯೋಜನೆಯಲ್ಲಿ ಹೊಸ ತೋಟಗಳ ಸ್ಥಾಪನೆ, ಹಣ್ಣಿನ ಪ್ರದೇಶ ವಿಸ್ತರಣೆ(ಅಂಗಾಂಶ ಮತ್ತು ಕಂದು ಬಾಳೆ) ಮತ್ತು ಹೈಬ್ರೀಡ್ ತರಕಾರಿಗಳಿಗೆ ರೂ.122.15ಲಕ್ಷಗಳ ಸಹಾಯಧನವನ್ನು 600 ಸಂಖ್ಯೆ ಫಲಾನುಭವಿಗಳಿಗೆ ನೀಡಲಾಗಿದೆ. ತೋಟಗಾರಿಕೆ ಬೆಳೆ ಬೆಳೆಯುವ ರೈತರಿಗೆ ನೀರಾವರಿ ಕಲ್ಪಿಸಲು ಕೃಷಿ ಹೊಂಡ ಕಾರ್ಯಕ್ರಮದಡಿ ವೈಯಕ್ತಿಕ ಕೃಷಿ ಹೊಂಡ ನಿರ್ಮಿಸಲು ಶೇ.50ರಂತೆ ಸಹಾಯಧನ ರೂ.30.29ಲಕ್ಷಗಳ ವೆಚ್ಚ ಮಾಡಿ 41 ಸಂಖ್ಯೆ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ. ತೋಟಗಾರಿಕೆ ಬೆಳೆಗಳ ಬೇಸಾಯದಲ್ಲಿ ರಾಸಾಯನಿಕ ಸಸ್ಯ ಸಂರಕ್ಷಣಾ ಔಷಧಿಗಳ ಬಳಕೆ ಕಡಿಮೆ ಮಾಡಿ, ಜೈವಿಕ ಪೀಡೆ ನಾಶಕಗಳನ್ನು ಬಳಸಿ ಪೀಡೆಗಳನ್ನು ಸಮಗ್ರವಾಗಿ ನಿರ್ವಹಣೆ ಮಾಡಲು ತೋಟಗಾರಿಕೆ ಬೆಳೆಗಳಲ್ಲಿ ಪೋಷಕಾಂಶಗಳ ಕೊರತೆ ನೀಗಿಸಲು ಪ್ರತಿ ಹೆಕ್ಟೇರ್‌ಗೆ ರೂ.1200/–ಗಳಂತೆ ರೂ.15.00ಲಕ್ಷ 1251 ಸಂಖ್ಯೆ ಫಲಾನುಭವಿಗಳಿಗೆ ಸಹಾಯಧನ ರೂಪದಲ್ಲಿ ನೀಡಲಾಗಿರುತ್ತದೆ. 65 ಸಂಖ್ಯೆಯ ಟ್ರಾಕ್ಟರ್ ಹಾಗೂ ಪವರ್‌ಟಿಲ್ಲರ್‌ಗಳನ್ನು ಖರೀದಿಸಲು ರೂ.42.98ಲಕ್ಷ ಸಹಾಯಧನ ವಿತರಿಸಲಾಗಿದೆ. ಸಂರಕ್ಷಿತ ಬೇಸಾಯ ಕಾರ್ಯಕ್ರಮದಡಿ 338 ಹೆಕ್ಟೇರ್ ಪ್ರದೇಶದಲ್ಲಿ ಹಸಿರು ಮನೆ ನಿರ್ಮಾಣ ಹಾಗೂ ನೆಲ ಹೊದಿಕೆಗೆ ರೂ.133.24ಲಕ್ಷ ಸಹಾಯಧನ ಮತ್ತು ಕೊಯ್ಲೋತ್ತರ ಸಂರಕ್ಷಣೆಗಾಗಿ ಕಡಿಮೆ ವೆಚ್ಚದ ಈರುಳ್ಳಿ ಶೇಖರಣೆ ಘಟಕ ನಿರ್ಮಾಣಕ್ಕಾಗಿ ರೂ.79.40ಲಕ್ಷಗಳ ಸಹಾಯಧನವನ್ನು 158 ಸಂಖ್ಯೆ ಫಲಾನುಭವಿಗಳಿಗೆ ನೀಡಲಾಗಿರುತ್ತದೆ ಹಾಗೂ ಪ್ಯಾಕ್‌ಹೌಸ್ ನಿರ್ಮಾಣಕ್ಕೆ 102.00ರೂ.ಲಕ್ಷ 51 ಸಂಖ್ಯೆ ಫಲಾನುಭವಿ ಗಳಿಗೆ ಸಹಾಯಧನ ನೀಡಲಾಗಿದೆ. ತಳ್ಳುವಗಾಡಿ ಖರೀದಿಗೆ 69 ಸಂಖ್ಯೆ ಫಲಾನುಭವಿಗಳಿಗೆ ಸಹಾಯಧನ ನೀಡಲು 10.35ರೂ.ಲಕ್ಷ ವೆಚ್ಚ ಭರಿಸಲಾಗಿದೆ. ರೈತರಿಗೆ ಹೆಚ್ಚಿನ ತಾಂತ್ರಿಕತೆ ಅರಿವು ಮೂಡಿಸಲು ರೈತರಿಗೆ ತರಬೇತಿ, ರಾಜ್ಯದೊಳಗೆ ಹಾಗೂ ಹೊರರಾಜ್ಯ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ. ಒಟ್ಟಾರೆ ಈ ಯೋಜನೆಯಡಿ ರೂ.586.38ಲಕ್ಷಗಳ ಅನುದಾನದಲ್ಲಿ, 2698 ಫಲಾನುಭವಿಗಳಿಗೆ ಸಹಾಯಧನ ನೀಡಿ, ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಸಾವಯವ ಕೃಷಿಗೆ ಪ್ರೋತ್ಸಾಹ ಮತ್ತು ತರಬೇತಿಗಳನ್ನು ನೀಡಲಾಗಿದೆ.

4. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :

SMAM & RKVY Mechanization ಯೋಜನೆಯಡಿ 312 ಸಂಖ್ಯೆಯ ಯಂತ್ರೋಪಕರಣಗಳ ಖರೀದಿಗಾಗಿ 139.40ಲಕ್ಷಗಳ ಸಹಾಯಧನ ನೀಡಲಾಗಿದೆ. ಸಂರಕ್ಷಿತ ಬೇಸಾಯ ಯೋಜನೆಯಡಿ ಪುನಶ್ಚೇತನ ಕಾರ್ಯಕ್ರಮದಡಿ 24.25 ಹೆಕ್ಟೇರ್ ಪ್ರದೇಶದಲ್ಲಿ Replacement of Polythene sheet, ಹೂವು ಮತ್ತು ತರಕಾರಿ ಬೆಳೆಗಳ ಸಂರಕ್ಷಿತ ಬೇಸಾಯಕ್ಕೆ ರೂ.22.23ಲಕ್ಷ ವೆಚ್ಚ ಭರಿಸಲಾಗಿದೆ. ನೀರು ಸಂಗ್ರಹಣ ಘಟಕ ನಿರ್ಮಿಸಲು ರೂ.23.00ಲಕ್ಷಗಳ ಸಹಾಯಧನ ನೀಡಲಾಗಿದೆ.

5. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ:

ಈ ಯೋಜನೆಯಡಿ ಮುಖ್ಯ ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ, ಬಾಳೆ, ತೆಂಗು ಮತ್ತು ನುಗ್ಗೆ ಬೆಳೆಗಳಿಗೆ ಪ್ರದೇಶ ವಿಸ್ತರಣೆ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಆಯ್ಕೆಯಾದ ಸಣ್ಣ/ಅತಿ ಸಣ್ಣ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತರ ಜಮೀನಿನಲ್ಲಿ ಕೈಗೊಂಡು ಒಟ್ಟು 1520 ಸಂಖ್ಯೆ ಫಲಾನುಭವಿಗಳಿಗೆ ಸಹಾಯಧನವನ್ನು ಕಲ್ಪಿಸಲಾಗಿದ್ದು, ಇದರಿಂದ ಒಟ್ಟು 683 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ವಿಸ್ತರಣೆಗೊಂಡಿರುತ್ತದೆ. ಈ ಯೋಜನೆಯಡಿ ಈರುಳ್ಳಿ ಶೇಖರಣಾ ಘಟಕ ನಿರ್ಮಾಣಕ್ಕೆ ಒಟ್ಟು 104 ಸಂಖ್ಯೆ ಫಲಾನುಭವಿಗಳಿಗೆ ಸಹಾಯಧನ ಕಲ್ಪಿಸಲಾಗಿದ್ದು ಹಾಗೂ ಇಲಾಖಾ ತೋಟಗಾರಿಕೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಒಟ್ಟಾರೆ ರೂ.923.61ಲಕ್ಷಗಳು ವೆಚ್ಚ ಭರಿಸಲಾಗಿರುತ್ತದೆ.

ವಾರ್ಷಿಕ ಆಡಳಿತ ವರದಿ 2020-21

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮಂಡ್ಯ

ಜಾನುವಾರು ಗಣತಿ: 2019 ರ 20ನೇ ಜಾನುವಾರು ಗಣತಿ ಆಧಾರದಂತೆ 2020-21ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಜಾನುವಾರುಗಳ ತಾಲ್ಲೂಕುವಾರು ವಿವರಗಳನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಲಗತ್ತಿಸಿದೆ,

-: ಪಶುವೈದ್ಯ ಸಂಸ್ಥೆಗಳ ಉದ್ದೇಶ ಮತ್ತು ಸಾಧಿಸಿರುವ ಪ್ರಗತಿ :-

❖ **ಜಾನುವಾರು ಚಿಕಿತ್ಸೆ;**

ಜಿಲ್ಲೆಯಲ್ಲಿ ಒಟ್ಟಾರೆ 212 ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಜಾನುವಾರುಗಳ ಆರೋಗ್ಯ ಸಂರಕ್ಷಣೆ ಮತ್ತು ಜಾನುವಾರು ತಳಿಗಳ ಅಭಿವೃದ್ಧಿಗಾಗಿ ಇಲಾಖೆಯು ಶ್ರಮಿಸಲು ಸದಾ ಬದ್ಧವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ **876476** ಜಾನುವಾರುಗಳಿಗೆ ಚಿಕಿತ್ಸೆ ಮಾಡಲಾಗಿದೆ.

❖ **ಜಾನುವಾರುಗಳ ಸಾಂಕ್ರಾಮಿಕ ರೋಗಗಳ ನಿಯಂತ್ರಣ:**

ಜಿಲ್ಲೆಯಲ್ಲಿನ ಜಾನುವಾರುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಬಗ್ಗೆ ಮುಂಜಾಗ್ರತೆಯಾಗಿ ಲಸಿಕೆ ಹಾಕಲು ಇಲಾಖಾ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಸಾಂಕ್ರಾಮಿಕ ರೋಗಗಳನ್ನು ಉಂಟು ಮಾಡುವ ರೋಗಾಣುಗಳನ್ನು ಪರೀಕ್ಷೆ ಮಾಡಲು ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಪ್ರಯೋಗಾಲಯಗಳಿಗೆ ರೋಗ ಪೀಡಿತ ಪ್ರಾಣಿಯ ರಕ್ತದ ಮಾದರಿಯನ್ನು ಕಳುಹಿಸಿ ಪರೀಕ್ಷಿಸಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

❖ **ಜಾನುವಾರುಗಳಿಗೆ ಕಾಲುಬಾಯಿ ಜ್ವರ ಹರಡದಂತೆ ರೋಗ ನಿಯಂತ್ರಣ:**

ಜಿಲ್ಲೆಯ ಜಾನುವಾರುಗಳಿಗೆ ಕಾಲುಬಾಯಿ ಜ್ವರದ ರೋಗವನ್ನು ತಡೆಗಟ್ಟಲು ಮುಂಜಾಗ್ರತೆಯಾಗಿ ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಮಾಧರಿಯಲ್ಲಿ ಒಂದು ವರ್ಷದಲ್ಲಿ ಎರಡು ಬಾರಿ ಫೆಬ್ರವರಿ ಮತ್ತು ಆಗಸ್ಟ್ ತಿಂಗಳಲ್ಲಿ ಜಾನುವಾರುಗಳಿಗೆ ಕಾಲುಬಾಯಿ ಜ್ವರ ರೋಗದ ಲಸಿಕೆಯನ್ನು ಹಾಕಲಾಗುವುದು. ಇಲಾಖೆ ವತಿಯಿಂದ ಪ್ರತಿ ರಾಸುಗಳಿಗೆ ಕಿವಿ ಓಲೆಗಳನ್ನು ಅಳವಡಿಸಿ ಇನಫ್ ತಂತ್ರಾಂಶದಲ್ಲಿ ಜಾನುವಾರುಗಳ ಮಾಹಿತಿಯನ್ನು ನೋಂದಣಿ ಮಾಡಲಾಗಿದೆ ಹಾಗೂ ಜಿಲ್ಲೆಯಾದ್ಯಂತ ಜಾನುವಾರು ಗಳಲ್ಲಿ ಕಾಲುಬಾಯಿ ಜ್ವರದಂತಹ ರೋಗ ಹರಡುವುದನ್ನು ನಿಯಂತ್ರಿಸಲು ಮತ್ತು ರೈತರಿಗೆ ಆರ್ಥಿಕ ನಷ್ಟವಾಗುವುದು, ರಾಸುಗಳು ಬರಡಾಗುವುದನ್ನು ತಪ್ಪಿಸಲು ಸಹಾಯವಾಗುತ್ತದೆ. ಪ್ರಸಕ್ತ 2020-21ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ಜಾನುವಾರುಗಳಿಗೆ ಕಾಲುಬಾಯಿ ಜ್ವರ ರೋಗಕ್ಕೆ ಶೇಕಡ 86%ರಷ್ಟು ಲಸಿಕೆಯನ್ನು ಹಾಕಲಾಗಿದ್ದು, ಜಿಲ್ಲೆಯಲ್ಲಿ ಕಾಲುಬಾಯಿ ಜ್ವರದಂತಹ ಯಾವುದೇ ರೋಗಗಳು ಕಂಡು ಬಂದಿರುವುದಿಲ್ಲ.

❖ **ಕೃತಕ ಗರ್ಭದಾರಣೆ:**

ಹಸು ಎಮ್ಮೆಗಳಿಗೆ ಸುಧಾರಿತ ವಿವಿಧ ತಳಿಗಳ ಹೋರಿಗಳಿಂದ ಸಂಗ್ರಹಿಸಿದ ವೀರ್ಯಾಣುಗಳನ್ನು ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡುವ ಮೂಲಕ ಜಿಲ್ಲೆಯಲ್ಲಿನ ಜಾನುವಾರುಗಳ ಅಭಿವೃದ್ಧಿ ಪಡಿಸುವ ಕಾರ್ಯಚಟುವಟಿಕೆಯಲ್ಲೊಂದಾಗಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ **158440** ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗಿದೆ.

❖ **ಬರಡು ರಾಸು ಚಿಕಿತ್ಸಾ ಶಿಬಿರ:**

ಬರಡು ರಾಸುಗಳನ್ನು ತಪಾಸಣೆ ಮಾಡಿ ಗರ್ಭಧರಿಸುವಂತೆ ಸೂಕ್ತ ಚಿಕಿತ್ಸೆ ನೀಡಲು ಜಿಲ್ಲೆಗೆ **114** ಬರಡು ರಾಸು ಶಿಬಿರಗಳನ್ನು ಏರ್ಪಡಿಸಲು ಗುರಿ ನಿಗಧಿಪಡಿಸಿ ಪ್ರತೀ ತಾಲ್ಲೂಕಿನಲ್ಲಿ ಬರಡು ರಾಸು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗುತ್ತಿದೆ. ಈ ಸೌಲಭ್ಯವನ್ನು ಗ್ರಾಮೀಣ ರೈತರು ಪಡೆಯಲು ಮುನ್ಸೂಚನೆಯಾಗಿ ಪ್ರಕಟಣೆ ಮಾಡಲಾಗುತ್ತದೆ. ಈ ಶಿಬಿರಗಳಲ್ಲಿ ಅನುಪಯುಕ್ತ ಹೋರಿ, ಟಗರು, ಮತ್ತು ಹೋತಗಳನ್ನು ಕಸಿ ಮಾಡಲಾಗುವುದು, ಗೊಡ್ಡು/ಬಂಜೆ ರಾಸುಗಳು ಗರ್ಭಧರಿಸುವಂತೆ ಸೂಕ್ತ ಚಿಕಿತ್ಸೆ ನೀಡುವುದು, ಜಾನುವಾರುಗಳಿಗೆ ಜಂತು ನಾಶಕ ಔಷಧೋಪಚಾರ ಲಸಿಕೆ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ.

❖ **ಜಾನುವಾರುಗಳ ಉತ್ಪನ್ನ ಸಮೀಕ್ಷೆ:**

ಮಾದರಿ ಸಮೀಕ್ಷೆ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿರುವ ಜಾನುವಾರುಗಳ ಹಾಗೂ ಜಾನುವಾರು ಉತ್ಪನ್ನಗಳನ್ನು ಆಯಾ ಋತುಮಾನಗಳಿಗನುಗುಣವಾಗಿ ಆಯ್ದ ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿ ಇಲಾಖೆಯು ರೂಪಿಸುವಂತೆ ಯೋಜನೆಗಳಿಗೆ ಅಗತ್ಯ ಮಾಹಿತಿ ಒದಗಿಸುವ ಉದ್ದೇಶ ಈ ಯೋಜನೆಯದಾಗಿರುತ್ತದೆ.

❖ **ದೊಡ್ಡರೋಗ ನಿವಾರಣಾ ಯೋಜನೆ:**

ಜಾನುವಾರುಗಳ ಜೀವಕ್ಕೆ ಮಾರಕವಾಗಿ ಪರಿಣಮಿಸಿದ್ದ ಭಯಂಕರ ಕಾಯಿಲೆಯಿಂದ ದೊಡ್ಡರೋಗವನ್ನು ಇಲಾಖೆಯ ನಿರಂತರ ಪರಿಶ್ರಮದಿಂದ ಈಗಾಗಲೇ ದೇಶಾದ್ಯಂತ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದ್ದು, ದೊಡ್ಡರೋಗ ಮುಕ್ತ ದೇಶವೆಂದು ಘೋಷಿಸಿದ್ದರೂ ಸಹ ಮುಂಜಾಗ್ರತೆ ದೃಷ್ಟಿಯಿಂದ ಇಲಾಖೆಯು ನಿರಂತರ ಕಾರ್ಯಚಟುವಟಿಕೆಗಳನ್ನು ಈ ಯೋಜನೆಯಡಿಯಲ್ಲಿ ರೂಪಿಸಿದ್ದು, ಪ್ರಸಕ್ತ 2020-21ನೇ ಸಾಲಿನಲ್ಲಿ 2076 ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ಹಚ್ಚುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದ್ದು, ಜಿಲ್ಲೆಯ ಜಾನುವಾರುಗಳಲ್ಲಿ ದೊಡ್ಡರೋಗದಂತಹ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

❖ ಕಟ್ಟಡಗಳ ದುರಸ್ಥಿ ಕಾಮಗಾರಿ ಲೆಕ್ಕ ಶೀರ್ಷಿಕೆ

ಈ ಯೋಜನೆಯಡಿ ಜಿಲ್ಲೆಯ ಅತ್ಯವಶ್ಯಕವಾಗಿರುವ ಪಶುವೈದ್ಯಕೀಯ ಸಂಸ್ಥೆಗಳ ದುರಸ್ಥಿ ಕಾಮಗಾರಿಗಾಗಿ ಬಿಡುಗಡೆಯಾಗಿರುವ ರೂ.65.00ಲಕ್ಷಗಳಲ್ಲಿ, ರೂ.59.20ಲಕ್ಷಗಳನ್ನು ವಿನಿಯೋಗಿಸಿ ಇಲಾಖೆಯ ತಾಲ್ಲೂಕುವಾರು ಅವಶ್ಯಕವಿರುವ 27 ಕಟ್ಟಡಗಳ ದುರಸ್ತಿಗೆ ವೆಚ್ಚ ಮಾಡಲಾಗಿದೆ.

❖ ಔಷಧ ರಾಸಾಯನಿಕ ಮತ್ತು ದ್ರವಸಾರಜನಕ ಖರೀಧಿ ಲೆಕ್ಕ ಶೀರ್ಷಿಕೆ

ಈ ಯೋಜನೆಯಡಿ ಜಿಲ್ಲೆಯ ಎಲ್ಲಾ ಪಶು ವೈದ್ಯಕೀಯ ಸಂಸ್ಥೆಗಳ ದಿನನಿತ್ಯದ ಉಪಯೋಗಕ್ಕಾಗಿ ಔಷಧಿ/ರಾಸಾಯನಿಕಗಳನ್ನು ಖರೀದಿಸಿ ವಿತರಣೆ ಮಾಡಲು ಬಿಡುಗಡೆಯಾಗಿರುವ ರೂ.125.63 ಲಕ್ಷ ಗಳಲ್ಲಿ ರೂ.125.61ಲಕ್ಷಗಳ ಪೂರ್ಣ ಅನುದಾನವನ್ನು ವಿನಿಯೋಗಿಸಿ ಜಿಲ್ಲೆಯ 212 ಪಶುವೈದ್ಯಕೀಯ ಸಂಸ್ಥೆಗಳಿಗೆ ಔಷಧಿ/ರಾಸಾಯನಿಕಗಳು ಹಾಗೂ 42500 ಲೀಟರ್ ದ್ರವಸಾರಜನಕವನ್ನು ಆಯುಕ್ತಾಲಯ ದಿಂದ ದರ ನಿಗಧಿಪಡಿಸಿರುವ ಸಂಸ್ಥೆಯಾದ ಮೆ॥ಬರೂಕ ಗ್ಯಾಸ್ ಲಿಮಿಟೆಡ್ ಬೆಂಗಳೂರು ಹಾಗೂ ಸ್ಥಳೀಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟರವರಿಂದ ದ್ರವಸಾರಜನಕ ಖರೀದಿಸಿ ಜಿಲ್ಲೆಯ 212 ಪಶುವೈದ್ಯಕೀಯ ಸಂಸ್ಥೆಗಳಿಗೆ ವಿತರಣೆ ಮಾಡಿ ಮೂಲಭೂತ ಸೌಕರ್ಯ ಒದಗಿಸಲು ಅಗತ್ಯ ಔಷಧ/ರಾಸಾಯನಿಕ ಮತ್ತು ಉಪಕರಣಗಳನ್ನು ಖರೀದಿಸಿ ವಿತರಿಸಲಾಗಿದೆ.

❖ ವಿಸ್ತರಣಾ ಚಟುವಟಿಕೆ ಬಲಪಡಿಸುವಿಕೆ

ಈ ಯೋಜನೆಯಡಿ ಇಲಾಖೆಯ ಲಸಿಕೆ ಮತ್ತು ಯೋಜನಾ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಬಿಡುಗಡೆಯಾದ ರೂ.14.02ಲಕ್ಷಗಳಲ್ಲಿ ಪೂರ್ಣ ಅನುದಾನವನ್ನು ವಿನಿಯೋಗಿಸಿ ಜಿಲ್ಲೆಯಾದ್ಯಂತ ಜಿಲ್ಲಾ ಪಂಚಾಯಿತ್ ಸದಸ್ಯರುಗಳಿಂದ ಫಲಾನುಭವಿಗಳ ಪಟ್ಟಿಯನ್ನು ಪಡೆದು ಆಯುಕ್ತಾಲಯ ಬೆಂಗಳೂರು ರವರು ನಿಗಧಿಪಡಿಸಲಾದ ದರದಲ್ಲಿ ಪ್ರತಿ ಘಟಕಕ್ಕೆ ಐದು ಕೋಳಿಗಳಂತೆ ಒಟ್ಟು 2378 ಗಿರಿರಾಜ ಕೋಳಿ ಮರಿಗಳನ್ನು ಖರೀದಿಸಿ ಸರ್ಕಾರದ ಮಾರ್ಗಸೂಚಿಯನ್ವಯ ವಿಶೇಷ ಘಟಕ & ಗಿರಿಜನ ಉಪಯೋಜನೆಯಡಿ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳು ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಉಚಿತವಾಗಿ ನಿಯಮಾನುಸಾರ ವಿತರಿಸಲಾಗಿದೆ. ಹಾಗೂ ತಾಲ್ಲೂಕಿನ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಿಗೆ ಇಲಾಖಾ ಲಸಿಕೆ ಕಾರ್ಯಕ್ರಮಗಳ ಹೆಚ್ಚಿನ ಪ್ರಚಾರ/ ಪ್ರಕಟಣೆ ಮತ್ತು ಯೋಜನಾ ಕಾರ್ಯಕ್ರಮಗಳ ಮಾಹಿತಿಯನ್ನು ಕನ್ನಡದಲ್ಲಿ ವಿನ್ಯಾಸಗೊಳಿಸಿ ಬಣ್ಣದ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಖರೀದಿಸಿ ವಿತರಿಸಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

❖ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು

ಈ ಯೋಜನೆಯಡಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವ ಗ್ರಾಮೀಣ ಪಶುವೈದ್ಯ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವೇತನ ಪಾವತಿಸಲು ಬಿಡುಗಡೆಯಾಗಿರುವ ರೂ.2972.05ಲಕ್ಷಗಳಲ್ಲಿ ರೂ.2917.05ಲಕ್ಷಗಳನ್ನು ಇಲಾಖೆಯ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಒಟ್ಟು 207 ಪಶುವೈದ್ಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 450 ಅಧಿಕಾರಿ/ಸಿಬ್ಬಂದಿಗಳ ವೇತನ ಹಾಗೂ ಇತರೆ ಭತ್ಯೆಗಳು ಮತ್ತು ಕಛೇರಿಯ ಸಾದಿಲ್ವಾರು ವೆಚ್ಚ ಗಳಿಗೆ ಉಪಯೋಗಿಸಲಾಗಿದೆ.

❖ ಬರಡು ರಾಸು ಚಿಕಿತ್ಸಾ ಶಿಬಿರ

ಈ ಯೋಜನೆಯಡಿ ಜಿಲ್ಲೆಯ ತಾಲ್ಲೂಕುವಾರು ಒಟ್ಟಾರೆ 212 ಪಶುವೈದ್ಯಕೀಯ ಸಂಸ್ಥೆಗಳ/ಅಧೀನ ಗ್ರಾಮಗಳಲ್ಲಿ ಬರಡು ರಾಸು ಶಿಬಿರಗಳನ್ನು ಏರ್ಪಡಿಸಲು ರೂ.22.75ಲಕ್ಷಗಳು ನಿಗಧಿಯಾಗಿದ್ದು, ರೂ.22.74ಲಕ್ಷಗಳ ಪೂರ್ಣ ಅನುದಾನವನ್ನು ವಿನಿಯೋಗಿಸಿ ಪಶುವೈದ್ಯಕೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಗ್ರಾಮಗಳಲ್ಲಿ ಒಟ್ಟು 114 ಬರಡು ರಾಸು ಶಿಬಿರಗಳನ್ನು ಏರ್ಪಡಿಸಿ ಗೊಡ್ಡು/ಬಂಜೆ ರಾಸುಗಳು ಗರ್ಭ ಧರಿಸುವಂತೆ ಸೂಕ್ತ ಚಿಕಿತ್ಸೆ ನೀಡಲು ಅವಶ್ಯಕಬೇಕಾದ ಔಷಧಿ/ರಾಸಾಯನಿಕಗಳು ಹಾಗೂ ಜಂತು ನಾಶಕಗಳನ್ನು ಸರಬರಾಜು ಮಾಡಲಾಗಿದೆ.

❖ ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿ

ಈ ಯೋಜನೆಯಡಿ ಜಿಲ್ಲೆಯ ತಾಲ್ಲೂಕುವಾರು ಒಟ್ಟಾರೆ 212 ಪಶುವೈದ್ಯಕೀಯ ಸಂಸ್ಥೆಗಳಿಗೆ ಜೀವ ವೈದ್ಯ ತ್ಯಾಜ್ಯವಸ್ತುಗಳ ವೈಜ್ಞಾನಿಕ ವಿಲೇವಾರಿಗೆ ಬೇಕಾದ ಬಳಕೆ ಸಾಮಗ್ರಿಗಳನ್ನು ಖರೀದಿಸಲು ಬಿಡುಗಡೆಯಾಗಿರುವ ರೂ.5.00ಲಕ್ಷಗಳಲ್ಲಿ ಪೂರ್ಣ ಅನುದಾನವನ್ನು ವಿನಿಯೋಗಿಸಿ ಜಿಲ್ಲೆಯ ಒಟ್ಟು 212 ಪಶುವೈದ್ಯಕೀಯ ಸಂಸ್ಥೆಗಳಿಗೆ ಅಗತ್ಯವಾದ ಬಳಕೆ ಸಾಮಗ್ರಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಪಶುವೈದ್ಯ ಸಂಸ್ಥೆಗಳಿಗೆ ವಿತರಣೆ ಮಾಡಲು ವೆಚ್ಚ ಮಾಡಲಾಗಿದೆ.

1. ಗಿರಿಜನ ಉಪಯೋಜನೆಯಡಿ [ತಾಲ್ಲೂಕು ಪಂಚಾಯತ್] ಮಿಶ್ರತಳಿ ಹಸು/ಎಮ್ಮೆ ಕುರಿ& ಮೇಕೆ ಘಟಕ

ಪ್ರಸಕ್ತ 2020–21ನೇ ಸಾಲಿನಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಮಿಶ್ರ ತಳಿ ಹಸು/ಎಮ್ಮೆ ಅಥವಾ ಕುರಿ & ಮೇಕೆಗಳನ್ನು ಸಾಕುವ ಸಲುವಾಗಿ ಘಟಕದ ವೆಚ್ಚದಲ್ಲಿ ಶೇ90% ಸಹಾಯಧನ ನೀಡಲು ಬಿಡುಗಡೆಯಾಗಿರುವ ರೂ.8.85ಲಕ್ಷಗಳಲ್ಲಿ ಮಾರ್ಗಸೂಚಿಯನ್ವಯ ನಿಯಮಾನುಸಾರ ಪೂರ್ಣ ಅನುದಾನವನ್ನು ವಿನಿಯೋಗಿಸಿ ಜಿಲ್ಲೆಯಾದ್ಯಂತ ತಾಲ್ಲೂಕುವಾರು ಒಟ್ಟು 25 ಫಲಾನುಭವಿಗಳಿಗೆ ಸಹಾಯಧನದ ಮೊತ್ತವನ್ನು ನೇರವಾಗಿ ರೈತರುಗಳ ಬ್ಯಾಂಕ್ ಖಾತೆಗೆ ಜಮೆ ಮಾಡುವುದರ ಮೂಲಕ ಆರ್ಥಿಕ ಸ್ಥಿತಿ ಉತ್ತಮ ಪಡಿಸುವ ನಿಟ್ಟಿನಲ್ಲಿ ಇಲಾಖೆಯು ಶ್ರಮಿಸುತ್ತಿದೆ.

<u>ರಾಜ್ಯವಲಯ ಇಲಾಖಾ ಯೋಜನಾ ಕಾರ್ಯಕ್ರಮಗಳು</u>

❖ **2020–21ನೇ ಸಾಲಿನ ಕೇಂದ್ರ ಪುರಸ್ಕೃತ ಜಾನುವಾರು ಮಿಷನ್ ಎನ್.ಎಲ್.ಎಂ ಯೋಜನೆ ಅನುಷ್ಠಾನ**

ಪ್ರಸಕ್ತ 2020–21ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಜನುವಾರು ಮಿಷನ್ ಎನ್.ಎಲ್.ಎಂ ಯೋಜನೆಯಡಿ ಗ್ರಾಮೀಣ ಹಿತ್ತಲ ಕುರಿ ಮತ್ತು ಮೇಕೆ ಅಭಿವೃದ್ಧಿ ಯೋಜನೆ ಸ್ಥಾಪನೆಗಾಗಿ ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ ರೂ.25.27ಲಕ್ಷಗಳಲ್ಲಿ ರೂ.25.27ಲಕ್ಷಗಳನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದ್ದು, ಜಿಲ್ಲೆಯ ಎಲ್ಲಾ ಏಳು ತಾಲ್ಲೂಕುಗಳಲ್ಲಿ ಒಟ್ಟಾರೆ 63 ಫಲಾನುಭವಿಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ90%ರಷ್ಟು ಸಹಾಯಧನದಲ್ಲಿ ಗ್ರಾಮೀಣ ಹಿತ್ತಲ ಕುರಿ ಮತ್ತು ಮೇಕೆ ಘಟಕಗಳ ಸ್ಥಾಪನೆ ಮತ್ತು ಸೌಲಭ್ಯಗಳನ್ನು ಘಟಕದನುಸಾರ ಸವಲತ್ತು ವಿತರಿಸಲು ಹಾಗೂ ಆರ್ಥಿಕ ಸ್ಥಿತಿ ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯು ಶ್ರಮಿಸುತ್ತಿದೆ.

❖ **2020–21ನೇ ಸಾಲಿನ ಕೇಂದ್ರ ಪುರಸ್ಕೃತ ಜಾನುವಾರು ಮಿಷನ್ ಎನ್.ಎಲ್.ಎಂ ಯೋಜನೆಯಡಿ ಉಚಿತ ಜಾನುವಾರು ವಿಮೆ ಅನುಷ್ಠಾನ**

ಪ್ರಸಕ್ತ 2020–21ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಜನುವಾರು ಮಿಷನ್ ಎನ್.ಎಲ್.ಎಂ ಯೋಜನೆಯಡಿ ಜಾನುವಾರು ವಿಮೆ ಕಾರ್ಯಕ್ರಮದಲ್ಲಿ ಹಸು ಮತ್ತು ಎಮ್ಮೆಗಳಿಗೆ ಜಾನುವಾರು ವಿಮೆ ಮಾಡಿಸಲು ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ ರೂ.4.52ಲಕ್ಷಗಳಲ್ಲಿ, ರೂ.4.52ಲಕ್ಷ ಗಳನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದ್ದು, ಜಿಲ್ಲೆಯ ಎಲ್ಲಾ ಏಳು ತಾಲ್ಲೂಕುಗಳಲ್ಲಿ ಒಟ್ಟಾರೆ 400 ಫಲಾನುಭವಿಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಬಿ.ಪಿ.ಎಲ್. ಕಾರ್ಡ್ ಶೇ70%ರಷ್ಟು ಹಾಗೂ ಎ.ಪಿ.ಎಲ್. ಕಾರ್ಡ್ ಶೇ50% ಸಹಾಯಧನದಲ್ಲಿ ಒಂದು ಹಸು ಮತ್ತು ಎಮ್ಮೆಗೆ ಜಾನುವಾರು ವಿಮೆ ಸೌಲಭ್ಯವನ್ನು ನೀಡಲು ಹಾಗೂ ಆರ್ಥಿಕ ಸ್ಥಿತಿ ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯು ಶ್ರಮಿಸುತ್ತಿದೆ.

❖ **2020–21ನೇ ಸಾಲಿನ ಕೇಂದ್ರ ಪುರಸ್ಕೃತ ಎನ್.ಎಲ್.ಎಂ ಜಾನುವಾರು ಮಿಷನ್ ಯೋಜನೆ ವಿಶೇಷ ಘಟಕ ಯೋಜನೆ**

ಪ್ರಸಕ್ತ 2020–21ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಜನುವಾರು ಮಿಷನ್ ಎನ್.ಎಲ್.ಎಂ ಯೋಜನೆಯಡಿ ಗ್ರಾಮೀಣ ಹಿತ್ತಲ ಕುರಿ ಮತ್ತು ಮೇಕೆ ಘಟಕ ಸ್ಥಾಪನೆಗಾಗಿ ಘಟಕದ ವೆಚ್ಚದಲ್ಲಿ ಶೇ90% ರಷ್ಟು ಸಹಾಯಧನ ನೀಡಲು ಜಿಲ್ಲೆಗೆ ಬಿಡುಗಡೆಯಾಗಿರುವ ರೂ.8.91ಲಕ್ಷಗಳಲ್ಲಿ, ಭೌತಿಕ 15 ಗುರಿಗಳಿದ್ದು ಮಾರ್ಗಸೂಚಿಯನ್ವಯ ಕ್ರಮವಾಗಿ ರೂ.8.91ಲಕ್ಷಗಳ ಸಹಾಯಧನವನ್ನು ನೀಡುವುದರ ಮೂಲಕ ಪರಿಶಿಷ್ಠ ಜಾತಿಯ 15 ಫಲಾನುಭವಿಗಳಿಗೆ ಘಟಕದನುಸಾರ ಸವಲತ್ತು ವಿತರಿಸಲು ಹಾಗೂ ಆರ್ಥಿಕ ಸ್ಥಿತಿ ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯು ಶ್ರಮಿಸುತ್ತಿದೆ

❖ **2020–21ನೇ ಸಾಲಿನ ಕೇಂದ್ರ ಪುರಸ್ಕೃತ ಎನ್.ಎಲ್.ಎಂ ಜಾನುವಾರು ಮಿಷನ್ ಯೋಜನೆಯಡಿ ವಿಶೇಷ ಘಟಕ ಯೋಜನೆ ಉಚಿತ ಜಾನುವಾರು ವಿಮೆ ಅನುಷ್ಠಾನ**

ಪ್ರಸಕ್ತ 2020–21ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಜನುವಾರು ಮಿಷನ್ ಎನ್.ಎಲ್.ಎಂ ಯೋಜನೆಯಡಿ ವಿಶೇಷ ಘಟಕ ಯೋಜನೆಯಡಿ ಉಚಿತ ಜಾನುವಾರು ವಿಮೆ ಕಾರ್ಯಕ್ರಮದಲ್ಲಿ ಹಸು ಮತ್ತು ಎಮ್ಮೆಗಳಿಗೆ ಜಾನುವಾರು ವಿಮೆ ಮಾಡಿಸಲು ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ ರೂ.8.22ಲಕ್ಷಗಳಲ್ಲಿ, ರೂ.8.22ಲಕ್ಷಗಳನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದ್ದು, ಜಿಲ್ಲೆಯ ಎಲ್ಲಾ ಏಳು ತಾಲ್ಲೂಕುಗಳಲ್ಲಿ ಪರಿಶಿಷ್ಠ ಜಾತಿಯ ಒಟ್ಟಾರೆ 340 ಫಲಾನುಭವಿಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ಒಂದು ಹಸು ಮತ್ತು ಎಮ್ಮೆಗೆ ಉಚಿತವಾಗಿ ಜಾನುವಾರು ವಿಮೆ ಸೌಲಭ್ಯವನ್ನು ನೀಡಲು ಹಾಗೂ ಆರ್ಥಿಕ ಸ್ಥಿತಿ ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯು ಶ್ರಮಿಸುತ್ತಿದೆ.

ವಾರ್ಷಿಕ ಆಡಳಿತ ವರದಿ 2020-21

ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಮಾನವನ ಅತ್ಯಂತ ಪುರಾತನವಾದ ವೃತ್ತಿಯಾಗಿದ್ದು ಮೀನು ಮಾನವನ ಆರೋಗ್ಯ ಮತ್ತು ಬೆಳವಣಿಗೆಗೆ ನೇರವಾದ ಪೌಷ್ಠಿಕಾಂಶವನ್ನು ಒದಗಿಸುವ ನಿಧಿಯಾಗಿದೆ. ದೇಶದಲ್ಲಿ ಗ್ರಾಮೀಣ ನಿರುದ್ಯೋಗ ನಿವಾರಿಸಲು ಮತ್ತು ಆರ್ಥಿಕ ಸ್ಥಿತಿ ಸುಧಾರಣೆಗೊಳ್ಳುವುದು ಮಾತ್ರವಲ್ಲದೇ ವಿದೇಶಿ ವಿನಿಮಯಗಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. ಪೋಲಾಗುತ್ತಿರುವ ನೀರು ಮತ್ತು ಬಂಜರು ಭೂಮಿಯನ್ನು ಸಮರ್ಪಕವಾಗಿ ಪೌಷ್ಠಿಕ ಆಹಾರ ಉತ್ಪಾದನೆಗೆ ಹಾಗೂ ಭೂಪ್ರದೇಶವನ್ನು ಮೀನು ಸಾಕಾಣಿಕೆಗೆ ಉಪಯೋಗಿಸುವ ಮುಖಾಂತರ ಲಾಭದಾಯಕವಾಗಿ ಆರ್ಥಿಕವಾಗಿ ಮುಂದುವರೆಯಲು ಸಹಾಯಕವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಗೆ ವಿಫುಲವಾದ ಜಲಸಂಪನ್ಮೂಲಗಳಿದ್ದು, ಇಲಾಖಾ ವ್ಯಾಪ್ತಿಯ ದೊಡ್ಡಕೆರೆಗಳು 178 ಇದ್ದು, ಇದರ ಒಟ್ಟು ಜಲವಿಸ್ತೀರ್ಣ 11,381.80 ಹೆಕ್ಟೇರ್‌ಗಳು ಮತ್ತು 02 ಮುಖ್ಯ ಹಾಗೂ 02 ಕಿರು ಜಲಾಶಯಗಳ ಜಲವಿಸ್ತೀರ್ಣ 13,419.00 ಹೆಕ್ಟೇರ್‌ಗಳಿದ್ದು ಹಾಗೂ 170 ಕಿ.ಮೀ.ಉದ್ದದ ನದಿ ಭಾಗ ಇರುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು 687 ಇದ್ದು, ಇದರ ಒಟ್ಟು ಜಲವಿಸ್ತೀರ್ಣ 3637.66 ಹೆಕ್ಟೇರ್‌ಗಳಾಗಿರುತ್ತದೆ.

ಜಿಲ್ಲೆಯಲ್ಲಿ 42 ಮೀನುಗಾರರ ಸಹಕಾರ ಸಂಘಗಳಿದ್ದು, ಒಟ್ಟು 11,929 ಜನ ಮೀನುಗಾರರು ಸಂಘದ ಸದಸ್ಯರಾಗಿರುತ್ತಾರೆ. ಮೀನುಗಾರಿಕೆಯಲ್ಲಿ ತೊಡಗಿರುವ 7865 ಕುಟುಂಬಗಳು ಮೀನುಗಾರರಾಗಿರುತ್ತಾರೆ. ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ 172 ಇಲಾಖೆ ಕೆರೆಗಳಿಗೆ 289.88ಲಕ್ಷ ಮತ್ತು 101 ಗ್ರಾಮ ಪಂಚಾಯಿತಿ ಕೆರೆಗಳಿಗೆ 50.95ಲಕ್ಷ ಹಾಗೂ ಕೆ.ಆರ್.ಸಾಗರ ಜಲಾಶಯಕ್ಕೆ 9.69ಲಕ್ಷ ಒಟ್ಟಾರೆ 350.52ಲಕ್ಷ ವಿವಿಧ ತಳಿಯ ಬಿತ್ತನೆ ಮೀನು ಮರಿಗಳನ್ನು ದಾಸ್ತಾನು ಮಾಡಲಾಗಿ, 30,000 ಮೆಟ್ರಿಕ್ ಟನ್‌ಗಳಷ್ಟು ಮೀನು ಹಿಡುವಳಿ ಯಾಗಿರುತ್ತದೆ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. ಅಧಿಕಾರಿ/ಸಿಬ್ಬಂದಿ ವೇತನ, ಹೊರಗುತ್ತಿಗೆ ನೌಕರರ ವೇತನ, ಕಛೇರಿ ವೆಚ್ಚ (ಲೆಕ್ಕ ಶೀರ್ಷಿಕೆ 2405-00-101-0-26) :-

ಅ) ಜಿಲ್ಲಾ/ತಾಲ್ಲೂಕು ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಪಾವತಿಗಾಗಿ ಲೆಕ್ಕ ಶೀರ್ಷಿಕೆ 2405-00-101-0-26(001) ರಡಿಯಲ್ಲಿ ರೂ.137.25ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.134.90ಲಕ್ಷ ಅನುದಾನ ವೆಚ್ಚ ಮಾಡಲಾಗಿರುತ್ತದೆ.

ಆ) ಜಿಲ್ಲಾ/ತಾಲ್ಲೂಕು ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರ ಗುತ್ತಿಗೆ ನೌಕರರ ವೇತನ ಪಾವತಿಗಾಗಿ ಲೆಕ್ಕ ಶೀರ್ಷಿಕೆ(034)ರಡಿಯಲ್ಲಿ ರೂ.31.39ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.22.66 ಲಕ್ಷ ಅನುದಾನ ವೆಚ್ಚ ಮಾಡಲಾಗಿರುತ್ತದೆ.

ಇ) ಜಿಲ್ಲಾ/ತಾಲ್ಲೂಕು ಕಛೇರಿ ವೆಚ್ಚ, ಪ್ರಯಾಣ ಭತ್ಯೆಗಾಗಿ ಲೆಕ್ಕ ಶೀರ್ಷಿಕೆ 2405-00-101-0-26 (090) ರಡಿಯಲ್ಲಿ ರೂ.3.93ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ.3.93ಲಕ್ಷ ಅನುದಾನ ವೆಚ್ಚ ಮಾಡಲಾಗಿರುತ್ತದೆ.

2. ಮೀನುಗಾರಿಕೆ ಕಟ್ಟಡಗಳ ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (ಲೆಕ್ಕ ಶೀರ್ಷಿಕೆ 2405-00-101-0-27):-

ಈ ಯೋಜನೆಯಡಿ ಮೀನುಗಾರಿಕೆ ಇಲಾಖೆ ಕಛೇರಿ ಕಟ್ಟಡಗಳ ನಿರ್ವಹಣೆ, ಮೀನುಮರಿ ಪಾಲನಾ ಕೇಂದ್ರಗಳಲ್ಲಿರುವ ನರ್ಸರಿ ಮತ್ತು ಹೊಸ ಕೊಳಗಳ ನಿರ್ಮಾಣ ನಿರ್ವಹಣೆ ಇತ್ಯಾದಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.9.66ಲಕ್ಷ ಬಿಡುಗಡೆಯಾಗಿದ್ದು ಒಟ್ಟಾರೆ ಈ ಕೆಳಕಂಡ ಕಾಮಗಾರಿಗಳಿಗೆ ಕಛೇರಿಯಿಂದ ರೂ.9.66 ಲಕ್ಷ ಅನುದಾನದವನ್ನು ವರ್ಗಾವಣೆ ಮಾಡಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಮೊಬಲಗು (ಲಕ್ಷಗಳಲ್ಲಿ)
1	ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಸಾಗರ ಮೀನುಮರಿ ಪಾಲನಾ ಕೇಂದ್ರದ ಕೊಳಗಳ ದುರಸ್ಥಿ ಹಾಗೂ ಇತರೆ ಸಣ್ಣಸುಟ್ಟ ಕೆಲಸಗಳಿಗೆ	ರೂ.3.00
2	ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಸಾಗರ ಮೀನುಮರಿ ಪಾಲನಾ ಕೇಂದ್ರದ ಕೊಳಗಳ ದುರಸ್ಥಿ ಹಾಗೂ ಇತರೆ ಸಣ್ಣಸುಟ್ಟ ಕೆಲಸಗಳಿಗೆ	ರೂ.2.16
3	ಕೆ.ಆರ್.ಪೇಟೆ ತಾಲ್ಲೂಕಿನ ಹೇಮಗಿರಿ ಮೀನುಮರಿ ಪಾಲನಾ ಕೇಂದ್ರದ ಕೊಳಗಳ ದುರಸ್ಥಿ ಹಾಗೂ ಇತರೆ ಸಣ್ಣ ಸುಟ್ಟ ಕೆಲಸಗಳ ಕಾಮಗಾರಿ	ರೂ.4.50
	ಒಟ್ಟು	**ರೂ.9.66**

3. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ(ಲೆಕ್ಕ ಶೀರ್ಷಿಕೆ 2405–00–101–0–28):–

ಈ ಯೋಜನೆಯಡಿಯಲ್ಲಿ ಪ್ರಸ್ತುತ ಸಾಲಿನಲ್ಲಿ ರೂ.30.00ಲಕ್ಷ ಅನುದಾನ ಬಿಡುಗಡೆಯಾಗಿದ್ದು ಈ ಕೆಳಕಂಡಂತೆ ರೂ.28.52ಲಕ್ಷ ವೆಚ್ಚ ಮಾಡಲಾಗಿರುತ್ತದೆ.

ಅ) ಮೀನುಮರಿ ಉತ್ಪಾದನೆ ಪಾಲನೆ ಮತ್ತು ವಿತರಣೆ ಯೋಜನೆ:– ಮೀನುಮರಿ ಪಾಲನಾ ಕೇಂದ್ರಗಳಲ್ಲಿ ಮೀನುಮರಿ ಪಾಲನೆ ಮಾಡಿ ಮೀನು ಕೃಷಿಕರಿಗೆ ಇಲಾಖೆ ನಿಗದಿಪಡಿಸಿದ ದರದಲ್ಲಿ ಮೀನುಮರಿಗಳನ್ನು ಸರಬರಾಜು ಮಾಡುವುದು. ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳ ನಿರ್ವಹಣೆ ಮಾಡುವುದು, ಕಛೇರಿಯ ವಿದ್ಯುತ್ ವೆಚ್ಚ, ದೂರವಾಣಿ ವೆಚ್ಚ, ಕಛೇರಿ ವಾಹನ ನಿರ್ವಹಣೆ, ತಾಲ್ಲೂಕು ಅಧಿಕಾರಿಗಳಿಗೆ ಹೊರಗುತ್ತಿಗೆ ವಾಹನ ಬಾಡಿಗೆ ವೆಚ್ಚ ಇತ್ಯಾದಿಗಳು ಈ ಯೋಜನೆಯಡಿ ಆರ್ಥಿಕ ರೂ.20.44ಲಕ್ಷ ವೆಚ್ಚ ಮಾಡಲಾಗಿರುತ್ತದೆ.

ಆ) ಮೀನುಗಾರಿಕೆ ಸಾಮಾಗ್ರಿಗಳನ್ನು ಖರೀದಿಸಲು ಸಹಾಯಧನ:– ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಸಾಮಾಗ್ರಿಗಳನ್ನು ಖರೀದಿಸಲು ಘಟಕ ವೆಚ್ಚ ರೂ.15,000/–ಕ್ಕೆ 1/3 ಭಾಗ ರೂ.5,000/– ರಂತೆ ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ5.75ಲಕ್ಷ ವೆಚ್ಚ ಮಾಡಿ 115 ಜನ ಮೀನುಗಾರರಿಗೆ ಸಹಾಯಧನ ವಿತರಿಸಲಾಗಿದೆ.

ಇ) ಜೌಗು ಮತ್ತು ಚೌಳು ಭೂಮಿಯಲ್ಲಿ ಮೀನು ಕೃಷಿ ಕೊಳ ನಿರ್ಮಿಸುವವರಿಗೆ ಸಹಾಯಧನ:– ಮೀನು ಕೃಷಿಕರು ತಮ್ಮ ಜಮೀನಿನಲ್ಲಿ 20 ಕುಂಟೆ ವಿಸ್ತೀರ್ಣದ ಮೀನು ಕೃಷಿ ಕೊಳ ನಿರ್ಮಿಸಿದರೆ ರೂ.30,000/– ಸಹಾಯಧನ ನೀಡುವ ಯೋಜನೆಯಡಿ 02 ಫಲಾನುಭವಿಗಳಿಗೆ ಒಟ್ಟು ರೂ.33,000/– ಸಹಾಯಧನ ನೀಡಲಾಗಿರುತ್ತದೆ.

ಈ) ವಿಶೇಷ ಘಟಕ ಯೋಜನೆಯಡಿ ಮೀನುಗಾರಿಕೆ ಸಾಮಾಗ್ರಿಗಳನ್ನು ಖರೀದಿಸಲು ಸಹಾಯಧನ:– ಪರಿಶಿಷ್ಟ ಜಾತಿಯ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಖರೀದಿಸಲು ರೂ.10,000/–ರಂತೆ ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.1.00ಲಕ್ಷ ವೆಚ್ಚ ಮಾಡಿ 10 ಪ.ಜಾತಿ ಫಲಾನುಭವಿ ಮೀನುಗಾರರಿಗೆ ಬಲೆ ಸಾಮಾಗ್ರಿಗಳ ಸಹಾಯಧನ ವಿತರಿಸಲಾಗಿದೆ.

ಇ) ಗಿರಿಜನ ಉಪಯೋಜನೆಯಡಿ ಮೀನುಗಾರಿಕೆ ಸಾಮಾಗ್ರಿಗಳನ್ನು ಖರೀದಿಸಲು ಸಹಾಯಧನ:– ಪರಿಶಿಷ್ಟ ಪಂಗಡ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಖರೀದಿಸಲು ರೂ.10,000/–ರಂತೆ ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.1.00ಲಕ್ಷ ವೆಚ್ಚ ಮಾಡಿ 10 ಪ.ಪಂಗಡ ಫಲಾನುಭವಿ ಮೀನುಗಾರರಿಗೆ ಬಲೆ ಸಾಮಾಗ್ರಿಗಳ ಸಹಾಯಧನ ವಿತರಿಸಲಾಗಿದೆ.

4.ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ(ಲೆಕ್ಕ ಶೀರ್ಷಿಕೆ 2405–00–101–0–30):–

ಮೀನು ಕೃಷಿಕರಿಗೆ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಶುಚಿಯಾದ ಸ್ಥಿತಿಯಲ್ಲಿ ತಾಜಾ ಮೀನನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ದ್ವಿಚಕ್ರ ವಾಹನ (ಮೊಪೆಡ್) ಹಾಗೂ ಕ್ರೇಟ್ಸ್ ಖರೀದಿಸಲು ರೂ.10,000/– ಹಾಗೂ ತ್ರಿಚಕ್ರ ವಾಹನ ಖರೀದಿಗೆ ರೂ.30,000/– ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.5.00ಲಕ್ಷ ವೆಚ್ಚ ಮಾಡಲಾಗಿದೆ. ಒಟ್ಟು 50 ಜನ ಮೀನುಗಾರರಿಗೆ ದ್ವಿಚಕ್ರ/ತ್ರಿಚಕ್ರ ವಾಹನ ಖರೀದಿಗೆ ಸಹಾಯಧನ ವಿತರಿಸಲಾಗಿದೆ.

5.ಪ್ರದರ್ಶನಗಳು ಮತ್ತು ತರಬೇತಿ (ಲೆಕ್ಕ ಶೀರ್ಷಿಕೆ 2405–00–101–0–32):– ಸಾರ್ವಜನಿಕರಿಗೆ ಮೀನು ಕೃಷಿ ಬಗ್ಗೆ ತಿಳುವಳಿಕೆ ನೀಡಲು ವಸ್ತು ಪ್ರದರ್ಶನ ಮತ್ತು ತರಬೇತಿ ನೀಡಲಾಗುವುದು. ಮೀನು ಕೃಷಿ ಒಂದು ಲಾಭಾದಾಯಕ ಉದ್ಯಮವೆಂದು ಅರಿವು ಮೂಡಿಸಿ, ಮೀನು ಬೇಸಾಯದಲ್ಲಿ ತೊಡಗಿಸಲು ಪ್ರದರ್ಶನಗಳು ಮತ್ತು ಮಾಹಿತಿ ಕರಪತ್ರಗಳನ್ನು ತಯಾರಿಸಿ ಸಾರ್ವಜನಿಕರಿಗೆ ವಿತರಿಸುವುದು. ಹೊರ ರಾಜ್ಯದಲ್ಲಿ ಮೀನುಗಾರಿಕೆ ಚಟುವಟಿಕೆ ನಡೆಸುತ್ತಿರುವ ಸ್ಥಳಗಳಿಗೆ ಪ್ರವಾಸ/ತರಬೇತಿಗಾಗಿ ಕರೆದುಕೊಂಡು ಹೋಗಿ ತರಬೇತಿ ನೀಡುವುದರಿಂದ ಸಾರ್ವಜನಿಕರು ಮೀನು ಕೃಷಿಯನ್ನು ಕೈಗೊಳ್ಳಲು ಅನುಕೂಲವಾಗುವುದು. ಈ ಯೋಜನೆಯಡಿ ಆರ್ಥಿಕ ರೂ.5.00ಲಕ್ಷ ಗುರಿ ಇದ್ದು, ರೂ.5.00ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

ರಾಜ್ಯ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳು

1. ಮೀನುಮರಿ ಖರೀದಿಸಲು ಸಹಾಯಧನ(ಲೆಕ್ಕ ಶೀರ್ಷಿಕೆ 2405–00–101–0–03–106):– ಮೀನುಮರಿ ಖರೀದಿಗೆ ಶೇಕಡ 50 ರಂತೆ ಮೀನುಗಾರರಿಗೆ ರೂ.5000/– ಮತ್ತು ಮೀನುಗಾರರ ಸಹಕಾರ ಸಂಘ ಸಂಸ್ಥೆಗಳಿಗೆ ರೂ.20,000/– ಹಾಗೂ ಮೀನು ಕೃಷಿ ಕೊಳ ಮಾಡಿರುವ ನೊಂದಾಯಿತ ಮೀನುಗಾರರಿಗೆ ರೂ.25,000/–ಗರಿಷ್ಠ ಸಹಾಯಧನವನ್ನು ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.1.43 ಲಕ್ಷ ವೆಚ್ಚ ಮಾಡಿ 23 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2. ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (ಲೆಕ್ಕ ಶೀರ್ಷಿಕೆ 2405–00–110–0–02–106):– ಮೀನುಗಾರರಿಗೆ ರೂ.10000/– ಮೌಲ್ಯದ ಮೀನು ಹಿಡುವಳಿಗೆ ಬೇಕಾದ ಬಲೆ ಮತ್ತು ಪೂರಕ ಸಾಮಾಗ್ರಿಗಳ ಕಿಟ್‌ನ್ನು ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.8.40ಲಕ್ಷ ವೆಚ್ಚ ಮಾಡಿ 84 ಜನ ಫಲಾನುಭವಿಗಳಿಗೆ ಕಿಟ್ಟುಗಳನ್ನು ವಿತರಣೆ ಮಾಡಲಾಗಿದೆ.

3. ಮತ್ಸ್ಯ ಕೃಷಿ ಆಶಾಕಿರಣ ಯೋಜನೆ(ಲೆಕ್ಕ ಶೀರ್ಷಿಕೆ 2405–00–101–0–03–106):– 50 ಹೆಕ್ಟೇರ್‌ಗಿಂತ ಕಡಿಮೆ ಜಲ ವಿಸ್ತೀರ್ಣವಿರುವ ಎಲ್ಲಾ ಕೆರೆಗಳಲ್ಲಿ 1.00 ಹೆಕ್ಟೇರ್‌ಗೆ 2000 ಬಲಿತ ಮೀನುಮರಿ ಹಾಗೂ 2,000ಕೆ.ಜಿ ಪ್ರೋಟೀನ್‌ಯುಕ್ತ ಆಹಾರ ಖರೀದಿಸಿ, ತೀವ್ರ ಕೃಷಿ ಕೈಗೊಂಡ ಫಲಾನುಭವಿ/ಮೀನುಗಾರರ ಸಂಘಗಳಿಗೆ ಶೇ.50% ಗರಿಷ್ಠ ರೂ.27,000/– ಪ್ರತಿ ಹೆಕ್ಟೇರ್‌ಗೆ ಸಹಾಯಧನ ನೀಡಲಾಗುವುದು. ಪ್ರಸ್ತುತ ಸಾಲಿನಲ್ಲಿ 33.09 ಹೆಕ್ಟೇರ್ ಜಲವಿಸ್ತೀರ್ಣದ 07 ಕೆರೆಗಳನ್ನು ಅಭಿವೃದ್ಧಿ ಪಡಿಸಿದ್ದು ರೂ.7.63ಲಕ್ಷ ಸಹಾಯಧನ ವಿತರಣೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

4. ನೀಲಿ ಕ್ರಾಂತಿ ಯೋಜನೆಯಡಿ ಕೊಳ ನಿರ್ಮಾಣಕ್ಕೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58–106):– 1.00 ಹೆಕ್ಟೇರ್ ವಿಸ್ತೀರ್ಣದಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಘಟಕ ವೆಚ್ಚ 7.00ಲಕ್ಷಕ್ಕೆ ಸಾಮಾನ್ಯ ವರ್ಗಕ್ಕೆ ಶೇಕಡ 40%ರಷ್ಟು ಮತ್ತು ಪರಿಶಿಷ್ಠ ಜಾತಿ/ಪಂಗಡ/ಮಹಿಳೆಗರಿಗೆ ಶೇಕಡ 60% ರಷ್ಟು ಸಹಾಯಧನ ನೀಡಲಾಗುವುದು. ಪ್ರಸ್ತುತ ಸಾಲಿನಲ್ಲಿ 02 ಫಲಾನುಭವಿಗಳಿಗೆ 0.76 ಹೆಕ್ಟೇರ್ ಜಲವಿಸ್ತೀರ್ಣದಲ್ಲಿ ಕೊಳ ನಿಮಾರ್ಣಕ್ಕೆ ರೂ.3.71ಲಕ್ಷ ಸಹಾಯಧನ ನೀಡಲಾಗಿದೆ.

5. ಆರ್.ಕೆ.ವಿ.ವೈ ಯೋಜನೆಯಡಿ ಸಲಕರಣೆ ಕಿಟ್ಟು ವಿತರಣೆ (ಲೆಕ್ಕ ಶೀರ್ಷಿಕೆ 2405–00–101–0–57):– ಮೀನುಗಾರರಿಗೆ ರೂ.10000/– ಬೆಲೆಯುಳ್ಳ ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ ಮಾಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.1.50ಲಕ್ಷ ವೆಚ್ಚ ಮಾಡಿ 15 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

6. ವಿಶೇಷ ಘಟಕ/ಗಿರಿಜನ ಉಪ ಯೋಜನೆಯಡಿ (ಲೆಕ್ಕ ಶೀರ್ಷಿಕೆ 2405–00–101–0–58–422–423):– ಪರಿಶಿಷ್ಠ ಜಾತಿ/ಪಂಗಡದ ಮಹಿಳಾ ಮೀನುಗಾರರಿಗೆ ದ್ವಿಚಕ್ರ ವಾಹನ ಮತ್ತು ಐಸ್‌ಬಾಕ್ಸ್ ಖರೀದಿಗೆ ರೂ.35,000/– ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.1.75ಲಕ್ಷ ವೆಚ್ಚ ಮಾಡಿ (03 ಪರಿಶಿಷ್ಠ ಜಾತಿ ಹಾಗೂ 02 ಪರಿಶಿಷ್ಠ ಪಂಗಡ) ಒಟ್ಟು 05 ಮಹಿಳಾ ಫಲಾನುಭವಿಗೆ ಸಹಾಯಧನ ವಿತರಣೆ ಮಾಡಲಾಗಿದೆ.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ (PMMSY) ಯೋಜನೆ

1. ಮೀನುಮರಿ ಪಾಲನಾ ಕೊಳ ನಿರ್ಮಾಣಕ್ಕೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58:– ಮೀನು ಕೃಷಿಕರು ಸ್ವಂತ ಜಮೀನಿನಲ್ಲಿ ಮೀನು ಪಾಲನಾ ಕೊಳ ನಿರ್ಮಾಣಕ್ಕೆ ಹೆಕ್ಟೇರ್‌ಗೆ ಘಟಕ ವೆಚ್ಚ ರೂ.7.00ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ ಮಹಿಳೆಯರಿಗೆ ಶೇಕಡ 60ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.8.021ಲಕ್ಷ ವೆಚ್ಚ ಮಾಡಿ 06 ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.

2. ಮೀನು ಕೃಷಿ ಕೊಳ ನಿರ್ಮಾಣ & ಹೂಡಿಕೆ ವೆಚ್ಚಗಳಿಗೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58:– ಮೀನು ಕೃಷಿಕರು ಸ್ವಂತ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಹೂಡಿಕೆ ಹೆಕ್ಟೇರ್‌ಗೆ ಘಟಕ ವೆಚ್ಚ ರೂ.7.00ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40 ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ಮಹಿಳೆಯರಿಗೆ ಶೇಕಡ 60ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.21.758ಲಕ್ಷ ವೆಚ್ಚ ಮಾಡಿ 09 ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.

3. ಶಾಖ ನಿರೋಧಕ ವಾಹನ ಖರೀದಿಗೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58):– ಶಾಖ ನಿರೋಧಕ ವಾಹನ ಖರೀದಿಗೆ ಘಟಕ ವೆಚ್ಚ ರೂ.20.00ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40 ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ಮಹಿಳೆಯರಿಗೆ ಶೇಕಡ 60ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ 8.00 ಲಕ್ಷ ವೆಚ್ಚ ಮಾಡಿ 01 ಫಲಾನುಭವಿಗೆ ಸಹಾಯಧನ ವಿತರಿಸಲಾಗಿದೆ.

4. ಐಸ್ ಬಾಕ್ಸ್‌ನೊಂದೊಗೆ ಮೋಟಾರ್ ಸೈಕಲ್ ಖರೀದಿಗೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58):–

ಐಸ್ ಬಾಕ್ಸ್‌ನೊಂದಿಗೆ ಮೋಟಾರ್ ಸೈಕಲ್ ಖರೀದಿಗೆ ಘಟಕ ವೆಚ್ಚ ರೂ.0.75ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40 ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ಮಹಿಳೆಯರಿಗೆ ಶೇಕಡ 60 ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ2.10ಲಕ್ಷ ವೆಚ್ಚ ಮಾಡಿ 06 ಫಲಾನುಭವಿಗೆ ಸಹಾಯಧನ ವಿತರಿಸಲಾಗಿದೆ.

5. ಐಸ್ ಬಾಕ್ಸ್‌ನೊಂದಿಗೆ ಸೈಕಲ್ ಖರೀದಿಗೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58):– ಐಸ್ ಬಾಕ್ಸ್‌ನೊಂದಿಗೆ ಸೈಕಲ್ ಖರೀದಿಗೆ ಘಟಕ ವೆಚ್ಚ ರೂ.0.10ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40 ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ಮಹಿಳೆಯರಿಗೆ ಶೇಕಡ 60ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.0.08ಲಕ್ಷ ವೆಚ್ಚ ಮಾಡಿ 02 ಫಲಾನುಭವಿಗೆ ಸಹಾಯಧನ ವಿತರಿಸಲಾಗಿದೆ.

6. ಮೀನು ಮಾರಾಟಕ್ಕಾಗಿ ಇ–ರಿಕ್ಷಾಗಳನ್ನು ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ ವಾಹನ ಖರೀದಿಗೆ ಸಹಾಯಧನ (ಲೆಕ್ಕ ಶೀರ್ಷಿಕೆ 2405–00–101–0–58):– ಐಸ್ ಬಾಕ್ಸ್‌ನೊಂದಿಗೆ ತ್ರಿಚಕ್ರ ವಾಹನ ಖರೀದಿಗೆ ಘಟಕ ವೆಚ್ಚ ರೂ.3.00ಲಕ್ಷಕ್ಕೆ ಸಾಮಾನ್ಯ ವರ್ಗದವರಿಗೆ ಶೇಕಡ 40ರಷ್ಟು ಮತ್ತು ಪರಿಶಿಷ್ಡ ಜಾತಿ/ಪರಿಶಿಷ್ಡ ಪಂಗಡ/ಮಹಿಳೆಯರಿಗೆ ಶೇಕಡ 60ರಷ್ಟು ಸಹಾಯಧನ ನೀಡಲಾಗುವುದು. ಈ ಯೋಜನೆಯಡಿ ಆರ್ಥಿಕ ರೂ.3.00ಲಕ್ಷ ವೆಚ್ಚ ಮಾಡಿ 02 ಫಲಾನುಭವಿಗೆ ಸಹಾಯಧನ ವಿತರಿಸಲಾಗಿದೆ.

